ಮಾನವಿಕ ಕರ್ಣಾಟಕ

ಸಂಪುಟ ೧೨ ಸಂಚಿಕೆ ೩

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೨

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸ ಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕ ಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿ ಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೨ ಸಂಚಿಕೆ ೩

೪೭

ನೇ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೨

MANAVIKA KARNATAKA, Kannada quarterly of the University of Mysore. Volume 12, Number 3, May, 1982. Edited by Dr. B. R. Gopal and Dr. C. M. Muniramappa.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಸಿ. ಎಂ. ಮುನಿರಾಮಪ್ಪ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವೆ ಬೀದಿ, 2 ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧ ವಿ. ಎಸ್. ಶೇಷಗಿರಿರಾವ್	ಅಧ್ಯಾಪಕ, ತತ್ತ್ವ ಶಾಸ್ತ್ರ ವಿಭಾಗ, ಮೈಸೂರ ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು – ೫೭೦೦೦೬
೨ ಎಚ್. ಎಂ. ನಾಗರಾಜರಾವ್	ಶಾಸನ ಸಹಾಯಕ, ಎಫಿಗ್ರಾಫಿಯ ಕರ್ನಾಟಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು – ೫೭೦೦೦೬
೩ ಎಚ್. ಎಸ್. ಸುಜಾತಾ	ಅಧ್ಯಾಪಕಿ, ಕನ್ನಡ ವಿಭಾಗ, ಬನುಮಯ್ಯ ಕಾಲೇಜು, ಮೈಸೂರು
೪ ಟಿ. ವಿ. ವೆಂಕಟಾಚಲ ಶಾಸ್ತ್ರಿ	ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು – ೫೭೦೦೦೬
೫ ಹರಿತಸ ಅನಂತಶರ್ಮ	ಅಧ್ಯಾಪಕ, ಹಿಂದೀ ವಿಭಾಗ, ಸಂತ ಫಿಲೋಮಿನಾ ಕಾಲೇಜು, ಮೈಸೂರು

ವಿ. ಎನ್. ಶೇಷಗಿರಿರಾವ್

ಅರವಿಂದ ದರ್ಶನ

೧

ಶ್ರೀ ಅರವಿಂದರು (1872–1950) ವಿಚಾರವೇತ್ತರೂ ರಸಋಷಿಯೂ ಮಹಾ ಯೋಗಿಯೂ ಆಗಿದ್ದರು. ಭಾರತ ರಾಷ್ಟ್ರೀಯತೆಯ ಪ್ರವಾದಿಗಳಲ್ಲಿ ಪ್ರಮುಖರಾದ ಅವರು ಪ್ರಾಚೀನ ಭಾರತದ ಧೀಮಂತಪ್ರಜ್ಞೆಯ ಸಮರ್ಥ ವಾಹಕರಾಗಿದ್ದರು. ಪ್ರಪಂಚದ ಕೆಲವೇ ಅನುಭಾವಿಗಳಲ್ಲಿ ಅವರೂ ಒಬ್ಬರು. ಅವರನ್ನು 'ದಿವ್ಯ ಜೀವನದ ದ್ರಷ್ಟಾರ' ಎಂದು ಕರೆಯುವುದೇ ರೂಢಿ. ಅವರ ಪ್ರಕಾರ ವೇದಗಳೇ ಭಾರತೀಯ ಧೀಮಂತ ಪ್ರಜ್ಞೆಯ ಆಗರ. ಉತ್ಕೃಷ್ಟ ತಾತ್ತ್ವಿಕ ಹಾಗೂ ವೈಜ್ಞಾನಿಕ ಸತ್ಯಗಳೂ ವಿಶ್ವದ ಸಕಲ ಜ್ಞಾನವೂ ಆಗಲೇ ವೇದಗಳಲ್ಲಿ ಬೀಜರೂಪವಾಗಿ ಅಡಗಿರುವುದಾಗಿ ಅವರು ನಂಬಿದ್ದರು. ತಮ್ಮ ಪ್ರಬಂಧ ಹಾಗೂ ಪತ್ರಗಳಲ್ಲಿ ವೇದಗಳನ್ನು ಕುರಿತು ವಿಚಾರ ಪೂರ್ಣವೂ ಆಳವೂ ಆದ ಚರ್ಚೆಯನ್ನು ನಡೆಸಿದ್ದಾರೆ. ಭಾರತೀಯ ಸಂಸ್ಕೃತಿ ಒಂದು ಸುಂದರವೃಕ್ಷ. ಅದರ ಮೂಲ ಬೇರುಗಳೇ ವೇದಗಳು. ಅರವಿಂದರ ಪ್ರಕಾರ ವೇದಗಳ ನೈಜ ಅರ್ಥ ಮನಗಾಣದೆ ಉಳಿದಿರುವುದಕ್ಕೆ ಬಹು ಮುಖ್ಯಕಾರಣ ಅವುಗಳನ್ನು ಕುರಿತ ಪಾಶ್ಚಾತ್ಯರ ಬಾಹ್ಯದೃಷ್ಟಿ; ಪಾಶ್ಚಾತ್ಯರ ಪ್ರಕಾರ ಪ್ರಕೃತಿಪೂಜೆ, ಕರ್ಮಾಚರಣೆ ಅನೇಕ ದೇವತಾವಾದ—ಇವಿಷ್ಟೇ ವೇದಗಳ ಸಾರಸರ್ವಸ್ವ. ಸಾಯಣರ ವೇದಭಾಷ್ಯದಮೇಲೆ ಬಹಳವಾಗಿ ಅವಲಂಬಿತವಾಗಿರುವುದೂ ಅವುಗಳ ಪ್ರಾಮುಖ್ಯತೆ ಅಷ್ಟಾಗಿ ಬೆಳಕಿಗೆ ಬಾರದಿರುವುದಕ್ಕೆ ಕಾರಣ ಎಂದು ಶ್ರೀ ಅರವಿಂಗರು ಅಭಿಪ್ರಾಯಪಡುತ್ತಾರೆ.

ಶ್ರೀ ಅರವಿಂದರು ವಿಶ್ವದ ಎಲ್ಲಾ ಧರ್ಮಗಳ ತೌಲನಿಕ ಅಧ್ಯಯನಮಾಡಿ ಅತ್ಯದ್ಭುತವಾದ ಜ್ಞಾನವನ್ನು ಹೊಂದಿದ್ದರು. ವೇದಗಳಲ್ಲಿ ಎಲ್ಲಾ ಧರ್ಮಗಳ ಸಾರವನ್ನು ಕಾಣಬಹುದೆಂದು ಅವರು ಸೂಚಿಸುತ್ತಾರೆ.

ಶ್ರೀ ಅರವಿಂದರು ಪಾಶ್ಚಾತ್ಯ ಹಾಗೂ ಪೌರ್ವಾತ್ಯ ಸಂಸ್ಕೃತಿಗಳ ಸಂಗಮ ಬಿಂದು ವಾಗಿದ್ದರು. ಬಹುಭಾಷಾವಿಶಾರದರಾಗಿದ್ದ ಅವರಿಗೆ ಸಂಸ್ಕೃತ, ಬಂಗಾಳಿ, ಹಿಂದಿ, ಗುಜರಾತಿ, ಇಂಗ್ಲಿಷ್, ಗ್ರೀಕ್, ಲ್ಯಾಟಿನ್ ಮುಂತಾದ ಭಾಷೆಗಳ ಮೇಲೆ ಒಳ್ಳೆಯ ಪ್ರಭುತ್ವವಿತ್ತು. ಇಂಗ್ಲೀಷ್ ಭಾಷೆಯಲ್ಲಿ ಅವರಿಗಿದ್ದ ಪಾಂಡಿತ್ಯ ಇಂಗ್ಲೀಷರನ್ನೇ ನಾಚಿಸುವಷ್ಟು ಪ್ರಸನ್ನವೂ ಗಂಭೀರವೂ ಆಗಿತ್ತು.

ಶ್ರೀ ಅರವಿಂದರು ಸಮರ್ಪಕ ಭಾಷಾಂತರಕಾರರೂ ಆಗಿದ್ದರು. ಭರ್ತೃಹರಿಯ ನೀತಿಶತಕ, ಕಾಳಿದಾಸನ ವಿಕ್ರಮೋರ್ವಶೀಯ, ಋತುಸಂಹಾರ, ವಾಲ್ಮೀಕಿ ರಾಮಾಯಣ ಹಾಗೂ ವ್ಯಾಸಭಾರತದ ಕೆಲವು ಭಾಗಗಳನ್ನು ಅವರು ಸಂಸ್ಕೃತದಿಂದ ಇಂಗ್ಲೀಷಿಗೆ ಅನುವಾದಿಸಿದ್ದಾರೆ.

ಶ್ರೀ ಅರವಿಂದರು ಪ್ರಸಿದ್ಧ ಪತ್ರಕರ್ತರೂ ಆಗಿದ್ದರು. ಚಿಕ್ಕಂದಿನ ದಿನಗಳಲ್ಲಿ ಕ್ರಾಂತಿಕಾರಕ ಮನೋಭಾವನೆಯನ್ನು ಹೊಂದಿದ್ದ ಅವರಿಗೆ ಸಂಪೂರ್ಣ ರಾಜಕೀಯ ಸ್ವಾತಂತ್ರ್ಯವನ್ನು ಪಡೆಯುವುದು ಧ್ಯೇಯವಾಗಿತ್ತು. ಭಾರತದ ಮೇಲೆ ಇದ್ದ ವಿದೇಶೀ ದಬ್ಬಾಳಿಕೆಯ ನೊಗವನ್ನು ಕಿತ್ತುಹಾಕಲು ಹಾಗೂ ಉಜ್ವಲ ದೇಶಪ್ರೇಮ ಹಾಗೂ ರಾಷ್ಟ್ರೀಯತೆಯನ್ನು ಜನಮನದಲ್ಲಿ ಬಿತ್ತಲು 'ಕರ್ಮಯೋಗಿ' ಮುಂತಾದ ಸಾಪ್ತಾಹಿಕಗಳನ್ನೂ 'ಧರ್ಮ' ಮತ್ತು 'ಆರ್ಯ' ಎಂಬ ಅಧ್ಯಾತ್ಮಿಕ ಪತ್ರಿಕೆಗಳನ್ನೂ ಇಂಗ್ಲೀಷ್ ಭಾಷೆಯಲ್ಲಿ ಹೊರಡಿಸುತ್ತಿದ್ದರು. ಅವುಗಳಲ್ಲಿ ಪ್ರಸಿದ್ಧ ಲೇಖನಗಳನ್ನು ಬರೆಯುವುದರ ಮೂಲಕ ಹೊಸಚೈತನ್ಯವನ್ನು ತೇಜಸ್ಸನ್ನು ಜನಮನದಲ್ಲಿ ಮೂಡಿಸಿದರು.

ಶ್ರೀ ಅರವಿಂದರು ಕೇವಲ ಏಳು ವರ್ಷದವರಾಗಿರುವಾಗಲೇ ಐರೋಪ್ಯ ಸಂಸ್ಕೃತಿ ನಾಗರೀಕತೆಗಳ ಆರಾಧಕರಾಗಿರುವಂತೆ ಹಾಗೂ ಭಾರತೀಯ ಸಂಸ್ಕೃತಿಯ ಗಂಧವೂ ಸೋಕದಂತೆ ಅವರ ತಂದೆಯವರು ಪ್ರಯತ್ನ ಪಟ್ಟಿದ್ದರು. ಸುಮಾರು ಹದಿನಾಲ್ಕು ವರ್ಷಗಳ ಕಾಲ ವಿದೇಶಗಳಲ್ಲಿ ಜ್ಞಾನಾರ್ಜನೆ ಮಾಡಿ ಪುನಃ ಮಾತೃಭೂಮಿಗೆ ಹಿಂತಿರುಗಿ ಮಾತೃಭಾಷೆಯನ್ನೂ ಸಂಸ್ಕೃತವನ್ನು ಪಟ್ಟುಹಿಡಿದು ಕಲಿತು ಭಾರತೀಯ ಸಂಸ್ಕೃತಿಯನ್ನು, ಅದರ ಆಳವನ್ನು ಮನಗಂಡರು. ಚಿಕ್ಕಂದಿನಲ್ಲಿ ಅವರು ಸ್ವಾಮಿ ವಿವೇಕಾನಂದರ ಬರಹ, ಭಾಷಣಗಳಿಂದ ಸ್ಫೂರ್ತಿಪಡೆದರು. ಶ್ರೀ ರಾಮಕೃಷ್ಣರ ದಿವ್ಯ ಜೀವನೋಪದೇಶಗಳಿಂದ ಅವರ್ಣನೀಯ ಆನಂದವನ್ನು ಪಡೆದರು. ದೇಶದ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿದ ಅವರು ಅನೇಕ ಬಾರಿ ಕಾರಾಗೃಹವಾಸವನ್ನು ಅನುಭವಿಸಿದರು. ಸೆರೆಮನೆಯನ್ನು ಆಶ್ರಮವನ್ನಾಗಿ ಪರಿವರ್ತಿಸಿಕೊಂಡು, ವೇದ, ಉಪನಿಷತ್ತುಗಳು, ಗೀತೆ ಮುಂತಾದ ಗ್ರಂಥಗಳ ಆಳವಾದ ಅಧ್ಯಯನವನ್ನು ಪ್ರಾರಂಭಿಸಿದರು. ಸೆರೆಮನೆಯಿಂದ ಬಿಡುಗಡೆಯಾದನಂತರ ಆಧ್ಯಾತ್ಮದ ಅದಮ್ಯ ಕರೆಯನ್ನು ಮನ್ನಿಸಿ ಪಾಂಡಿಚೆರಿಗೆ ಬಂದು ನೆಲಸಿ ಯೋಗಸಾಧನೆಗೆ ತಮ್ಮನ್ನು ತಾವು ಸಂಪೂರ್ಣವಾಗಿ ಸಮರ್ಪಿಸಿಕೊಂಡರು. ಪಾಂಡಿಚೆರಿ ಹೀಗೆ ಅವರ ತಪೋಭೂಮಿಯಾಯಿತು.

೨

ಶ್ರೀ ಅರವಿಂದರ ತಾತ್ತ್ವಿಕಚಿಂತನೆ ದೀರ್ಘವೂ ಪ್ರಶಾಂತವೂ ಆದ ಆಲೋಚನೆಗಳ ಆಗರವಾಗಿದೆ. ಅದು ಆಶಾದಾಯಕವೂ ನವಚೇತನವನ್ನುಂಟುಮಾಡುವ ಶಕ್ತಿಯುಳ್ಳದ್ದೂ ಆಗಿದೆ. ಮಾನವ ಕುಲಕ್ಕೆ ಉಜ್ವಲ ಭವಿಷ್ಯವಿದೆ, ಅವನು ನಿಸ್ಸಹಾಯಕ ಕ್ಷುದ್ರ ಜಂತುವಲ್ಲ, ಮಾನಸಿಕ ಸ್ತರದಲ್ಲಿ ನಿಂತ ಅವನು ಅಹಂಕಾರದಿಂದ ಸ್ವಾರ್ಥಿ ಎನಿಸಿದ್ದಾನೆ;

ಅದು ಅವನ ಅಂತಿಮ ಅವಸ್ಥೆಯಲ್ಲ ; ಅದನ್ನು ಮೀರಿ ನಿಂತಿರುವ ಅತಿಮಾನಸ ಸ್ತರಗಳ ಕಡೆಗೆ ಬೆಳಕನ್ನು ಹಾಸಿದಾಗ ಅವನ ನೈಜಸ್ವಭಾವದ ಅರಿವು ಅವನಿಗಾಗುವುದು. ಮಾನವನ ಬಾಳು ನಿಂತ ಕೊಚ್ಚೆಯ ನೀರಲ್ಲ ; ದುಃಖಸಾಗರವಲ್ಲ. ಅದು ನಿರಂತರ ವಿಕಾಸ ಹೊಂದುವಂಥಾದ್ದು ; ಆನಂದದ ಚಿಲುಮೆ.

ಶ್ರೀ ಅರವಿಂದರ ಪ್ರಕಾರ, ಮಾನವನು ಈಗ ಏನನ್ನು ಪಡೆದಿದ್ದಾನೆಂಬುದು ಮುಖ್ಯವಲ್ಲ, ಮುಂದೆ ಏನಾಗಬೇಕು ಎಂಬುದು ಮಹತ್ತ್ವದ ಅಂಶ. ಮಾನವನ ಭವಿಷ್ಯದ ಬಗ್ಗೆ ಇಷ್ಟೊಂದು ಆಶಾದಾಯಕ ಹುರುಪಿನ ಚಿಂತನೆ ಬಹುಶಃ ಮತ್ತೆಲ್ಲಿಯೂ ಕಾಣಸಿಗುವುದಿಲ್ಲವೆಂದು ಹೇಳಬಹುದು. ಅವರ ಚಿಂತನೆ ಪುಸ್ತಕದ ಬದನೇಕಾಯಿಯಲ್ಲ; ಅದು ಅನುಭವ ಗಮ್ಯ ಜ್ಞಾನೋದಯದ ಮಹತ್ಸಾಧನೆ, ಹೃದಯಾನುಭವ. ಅವರ ತಾತ್ತ್ವಿಕ ಚಿಂತನೆಯಲ್ಲಿ ಸೃಷ್ಟಿ ಏಕೆ ಮತ್ತು ಹೇಗೆ ? ಜಗತ್ತಿನಲ್ಲಿ ಅನಿಷ್ಟವೇಕಿದೆ ? ನಾನು ಯಾರು ? ನನ್ನ ಸ್ವರೂಪವೇನು ? ಮುಂತಾದ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ಹುಡುಕುವ ನಿಷ್ಠಾವಂತ ಪ್ರಯತ್ನವನ್ನು ಮಾಡಲಾಗಿದೆ.

ಶ್ರೀ ಅರವಿಂದರ ತಾತ್ತ್ವಿಕ ಚಿಂತನೆಯನ್ನು ಪೂರ್ಣ ಅದ್ವೈತ (Integral Nondualism) ಎಂದು ಕರೆಯಬಹುದು. ವಿಶ್ವದಲ್ಲಿಯ ಎಲ್ಲಾ ತಾತ್ತ್ವಿಕ ನಿಲುವುಗಳಿಗೂ, ಅವುಗಳಿಗೆ ತಕ್ಕದಾದ ಸ್ಥಾನವನ್ನು ಶ್ರೀ ಅರವಿಂದರ ಪೂರ್ಣ ಅಥವಾ ಅಖಂಡ ಅದ್ವೈತ ನಿರಾಕರಿಸುವುದಿಲ್ಲ. ಅಂದರೆ ಎಲ್ಲಾ ತಾತ್ತ್ವಿಕ ನಿಲುವುಗಳ ಗುಣಾಂಶಗಳಿಗೂ ಅರವಿಂದ ದರ್ಶನದಲ್ಲಿ ಸಮರ್ಥನೆ ದೊರಕುತ್ತದೆ. ಅಖಂಡ ಸತ್ಯವನ್ನು 'ಇದು ಆತ್ಮ', 'ಇದು ಅನಾತ್ಮ' 'ಇದು ಅವಿದ್ಯಾ' 'ಇದು ದೇವರು' ಎಂದು ವಿಭಜಿಸುವ ಕೆಲವು ದರ್ಶನಗಳ ನಿಲುವನ್ನು ಅರವಿಂದ ದರ್ಶನ ಖಾರವಾಗಿ ಖಂಡಿಸುತ್ತದೆ. ಅಂತಹ ಚಿಂತನೆಗಳಲ್ಲಿ ಅಖಂಡಸತ್ಯ ಖಂಡತುಂಡವಾಗಿಬಿಡುವುದರಿಂದ ಸತ್ಯವೆನಿಸಿ ಕೊಳ್ಳಲು ಅನರ್ಹವಾಗುತ್ತದೆ. ಹೀಗೆ ಅರವಿಂದರ ಪ್ರಕಾರ, ಸತ್ಯದ ಮಾನದಂಡ 'ಅಖಂಡತೆ', 'ಏಕತೆ', ಹಾಗೂ 'ವ್ಯಾಪಕತೆ' (undivided wholeness and comprehensive oneness). ಯಾವ ದರ್ಶನ ಈ ಮಾನದಂಡವನ್ನು ಅನ್ವಯಿಸಿಕೊಳ್ಳುವುದಿಲ್ಲವೋ ಅದು ಸಂಕುಚಿತವೂ, ಏಕಪಕ್ಷೀಯವೂ ಆದ ಚಿಂತನೆ ಯಾಗುತ್ತದೆ. ಅನೇಕತೆ, ವೈವಿಧ್ಯತೆ ಹಾಗೂ ಜಡವಸ್ತುವಿನ ಅಸ್ತಿತ್ವವನ್ನು ಧಿಕ್ಕರಿಸುವ ಆಧ್ಯಾತ್ಮವಾದಿ (spiritualist) ಮತ್ತು ಆಧ್ಯಾತ್ಮಿಕತೆ ಹಾಗೂ ಏಕತೆಯನ್ನು ಅಲ್ಲ ಗಳೆಯುವ ಭೌತವಾದಿ (materialist) — ಈ ಇಬ್ಬರೂ ತಪ್ಪುದಾರಿಯನ್ನು ತುಳಿಯುವವರಾಗಿದ್ದಾರೆಂದು ಶ್ರೀ ಅರವಿಂದರು ಅಭಿಪ್ರಾಯಪಡುತ್ತಾರೆ. ಅರವಿಂದ ದರ್ಶನ ಇದನ್ನು ಬಲವಾಗಿ ಖಂಡಿಸುತ್ತದೆ. ಕೇವಲ ಆಧ್ಯಾತ್ಮಿಕ ವಸ್ತುವಿನ ಅಸ್ತಿತ್ವ ವನ್ನು ಒಪ್ಪಿ ಜಡವಸ್ತುವಿನ ಅಸ್ತಿತ್ವವನ್ನು ನಿರಾಕರಿಸುವುದು ಏಕಪಕ್ಷೀಯ ದೃಷ್ಟಿ ; ಅದನ್ನು ನಿವಾರಿಸಬೇಕು, ಹಾಗೆಯೇ ಜಡವಸ್ತುವಿನ ಅಸ್ತಿತ್ವವನ್ನು ಮಾತ್ರ ಒಪ್ಪಿ ಆಧ್ಯಾತ್ಮಿಕ ವಸ್ತುವಿನ ಅಸ್ತಿತ್ವವನ್ನು ಅಲ್ಲಗಳೆಯುವುದೂ ಏಕಪಕ್ಷೀಯ ನಿಲುವು ;

ಇದನ್ನೂ ನಿವಾರಿಸಬೇಕು. ಜಡವಸ್ತು ಆಧ್ಯಾತ್ಮಿಕ ವಸ್ತುವಿನಷ್ಟೇ ಸತ್ಯ ; ಹಾಗೆಯೇ ಆಧ್ಯಾತ್ಮಿಕ ವಸ್ತುವೂ ಸಹ. ಆದರೆ ಅವುಗಳ ನಡುವೆ ಮೂಲಭೂತ ಭೇದ ಇಲ್ಲ. ಘನೀಭೂತವಾದ ಆಧ್ಯಾತ್ಮಿಕ ವಸ್ತು (ಚೇತನ) ವಿಗೆ ಇನ್ನೊಂದು ಹೆಸರೇ 'ಜಡ'. ಹಾಗೆಯೇ ವಿರಳವಾದ, ಜಾಗೃತವಾದ ಜಡವೇ 'ಚೇತನ'. ಜಡ, ಚೇತನ ಎಂಬುವು ಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಂದರಲ್ಲಿ ಇನ್ನೊಂದು ಸಾಧ್ಯ ತತ್ತ್ವವಾಗಿ (potential) ಸುಪ್ತವಾಗಿ ಅಡಗಿರುತ್ತದೆ. ಚೇತನ ಸೂಕ್ಷ್ಮಾವಸ್ಥೆ ಯಾದರೆ, ಜಡ ಸ್ಥೂಲಾವಸ್ಥೆ ; ಜಡ ಎಂಬುದು ಚೇತನದ ಹೊರತೊಗಟೆ. ('It) is the mutable robe (of the spirit), of the wearer'.[1] ಹೀಗೆ ವೈವಿಧ್ಯತೆಯ ಸೋಂಕಿಲ್ಲದ ಏಕವಾದ (strict monism), ಅದು ಧ್ಯೇಯಾತ್ಮಕ ವಾಗಿರಲಿ ಇಲ್ಲವೇ ಭೌತಿಕವಾಗಿರಲಿ — ಅರವಿಂದ ದರ್ಶನಕ್ಕೆ ಸಮ್ಮತವಾಮುದಲ್ಲ. ಆಧ್ಯಾತ್ಮಿಕ ಜ್ಞಾನವನ್ನು ಅರಸುತ್ತಿದ್ದರೂ ಭೂಮಿಯ ನವಿರೇಳಿಸುವ (invigorating) ಸ್ಪರ್ಶ, ಸಾಧಕನಿಗೆ ಅತ್ಯಾವಶ್ಯಕ. "The supraphysical can only be really mastered in its fullness when we keep our feet firmly on the physical".[2] ಹೀಗೆ ಅರವಿಂದ ದರ್ಶನವಲ್ಲಿ ಜಡ–ಚೇತನ, ಧ್ಯೇಯವಾದ–ಭೌತಿಕವಾದ ಮುಂತಾದ ಅತಿರೇಕಗಳ ಸಂಗಮವಿದೆ. ಜೀವನದಲ್ಲಿ ಎಲ್ಲಾ ರಂಗಗಳ ಸಾಮರಸ್ಯವನ್ನು, ಸಮತೋಲನವನ್ನೂ ಅದು ಒತ್ತಿ ಹೇಳುತ್ತದೆ.

೩

ಸತ್ಯ (Reality), ಶ್ರೀ ಅರವಿಂದರ ಪ್ರಕಾರ ಸಾರದಲ್ಲಿ ಅನಿರ್ದಿಷ್ಟ, ಅನಿರ್ದೇಶ್ಯ. ಅದನ್ನು 'ಇದೇ ಅದು' (ಇತಿ ಇತಿ) ಎಂದಾಗಲೀ 'ಇದು ಅದಲ್ಲ' (ನೇತಿ, ನೇತಿ) ಎಂದಾಗಲೀ ಬೊಟ್ಟು ಮಾಡಿ ತೋರಿಸುವುದು ಸಾಧ್ಯವಿಲ್ಲ.[2(a)] ಏಕೆಂದರೆ ಮೇಲಿನ ಎರಡೂ ವಿವರಣೆಗಳು ಸ್ವಭಾವತಃ ಅನಂತವೂ, ಅನಾದಿಯೂ, ಅಜವೂ, ಅಮೃತವೂ, ದೇಶ–ಕಾಲಾತೀತವೂ, ಅನಿರ್ದಿಷ್ಟವೂ, ಅನಾಮಿಕವೂ, ಅಮಲವೂ, ಅಚಿಂತ್ಯವೂ ಆದ ಬ್ರಹ್ಮತತ್ತ್ವವನ್ನು ಮಿತಗೊಳಿಸಲುಪಕ್ರಮಿಸುತ್ತವೆ. ಆದರೆ ಅನಂತ ತತ್ತ್ವವಾದ ಅದನ್ನು ಯಾರೂ ಎಂದಿಗೂ ಯಾವ ಶಬ್ದದಿಂದಲೂ ಮಿತಗೊಳಿಸಲು ಸಾಧ್ಯವಿಲ್ಲ. ಹೀಗೆ ಅರವಿಂದ ದರ್ಶನದಲ್ಲಿ ಸತ್ಯ ಸಾರದಲ್ಲಿ ಅತೀತ, ಅನಿರ್ವಾಚ್ಯ, ಅಚಿಂತ್ಯ, ಅದ್ವಯ. ಅದನ್ನು ಯಾವುವೇ ಮಾತಿನಿಂದಾಗಲಿ, ತರ್ಕದಿಂದಾಗಲೀ ನಿರ್ದೇಶಿಸಲಾಗುವುದಿಲ್ಲ. ಹೀಗೆಂದಮಾತ್ರಕ್ಕೆ ಬ್ರಹ್ಮತತ್ತ್ವ ಕೈಗೆ ಎಟುಕದ್ದು ಎಂದು ಅರ್ಥ ಮಾಡಲಾಗದು. ಅದು ಆಧ್ಯಾತ್ಮಿಕ ಅನುಭವದಲ್ಲಿ ಸಾಕ್ಷಾತ್ಕರಿಸಿಕೊಳ್ಳು ವಂಥಾದ್ದು ಎಂದಷ್ಟೇ ಅರ್ಥ.[2(b)]

ಆದರೆ ಮಾನವ ಪ್ರಜ್ಞೆಯ ದೃಷ್ಟಿಯಿಂದ, ಸತ್ಯ ಕೇವಲ ಏಕವಲ್ಲ ; ಕೇವಲ ದ್ವೈತವಲ್ಲ ; ಕೇವಲ ಅನೇಕವೂ ಅಲ್ಲ. ಅದು ಏಕದಲ್ಲಿ ಅನೇಕ, ಅನೇಕದಲ್ಲಿ ಏಕ. ಅದು ಸತ್‌ಚಿತ್ ಆನಂದ ತತ್ತ್ವ. ಆದುದರಿಂದಲೇ ಶ್ರೀ ಅರವಿಂದರು ಸತ್ಯವನ್ನು 'ಸಚ್ಚಿದಾನಂದ' ಎಂದೇ ಕರೆಯುತ್ತಾರೆ. ಸತ್ಯ, ಮಾನವನ ದೃಷ್ಟಿಯಿಂದ ಅಚಿಂತ್ಯ, ಅವರ್ಣನೀಯ, ಅನಿರ್ವಾಚ್ಯವಾದರೂ ಅದು ಶೂನ್ಯವಲ್ಲ. ಅದು ಇಚ್ಛಾಸಂಕಲ್ಪ (self-determination) ಉಳ್ಳದ್ದು. ಶ್ರೀ ಅರವಿಂದರ ಪ್ರಕಾರ, ಬ್ರಹ್ಮತತ್ತ್ವಕ್ಕೆ ಮೂರು[2(c)] ಅವಸ್ಥೆಗಳುಂಟು : (i) ಅತೀತ ಅಥವಾ ಪರಾತ್ಪರ (transcendental) ಅವಸ್ಥೆ, (ii) ವಿಶ್ವ (universal) ಅವಸ್ಥೆ ಮತ್ತು (iii) ವ್ಯಕ್ತಿಗತ (individual) ಅವಸ್ಥೆ.

ಮೊದಲೇ ತಿಳಿಸಿದಂತೆ, ಬ್ರಹ್ಮತತ್ತ್ವ 'ಅತೀತ' ಅವಸ್ಥೆಯಲ್ಲಿ ಅನಿರ್ವಾಚ್ಯವೂ, ಅಚಲವೂ, ಅಚಿಂತ್ಯವೂ, ಅವರ್ಣನೀಯವೂ, ದೇಶ ಕಾಲಾತೀತವೂ ಆಗಿರುತ್ತದೆ. ಈ ಅವಸ್ಥೆಯಲ್ಲಿ ಅದು ತನ್ನಲ್ಲೇ ತಾನು ಲೀನವಾಗಿರುತ್ತದೆ. 'ವಿಶ್ವ' ಮತ್ತು 'ವ್ಯಕ್ತಿಗತ' ಅವಸ್ಥೆಗಳಲ್ಲಿ ಅದು ತನ್ನ ಸ್ವ ಇಚ್ಛೆಯ ಮೇರೆಗೆ ಆನಂದೋತ್ಕರ್ಷಕ್ಕೋಸ್ಕರ ಅಸಂಖ್ಯಾತ ಜೀವಾತ್ಮರುಗಳನ್ನಾಗಿ 'ಗುಣಿಸಿ'ಕೊಂಡು[2(d)], ವಿಶ್ವವಾಗಿ[2(e)] 'ಪರಿಣಾಮ'ವನ್ನು ಹೊಂದುತ್ತದೆ. ಈ ವಿಶ್ವ, ಅದರಲ್ಲಿನ ಜೀವಾತ್ಮರು— ಇವೆಲ್ಲವನ್ನು ಶ್ರೀ ಅರವಿಂದರು ಮೇಲೆ ಹೇಳಿದ ರೀತಿಯಲ್ಲಿ ವಿವರಿಸುತ್ತಾರೆ. ಪ್ರತಿಯೊಂದು ಜೀವಾತ್ಮನೂ ಇಚ್ಛಾ ಸಂಕಲ್ಪವುಳ್ಳ ಚೇತನ ತತ್ತ್ವ ; ಅಮೂರ್ತ ಬ್ರಹ್ಮತತ್ತ್ವದ ಮೂರ್ತರೂಪ ಎಂದು ಅರವಿಂದ ದರ್ಶನ ಪ್ರತಿಪಾದಿಸುತ್ತದೆ. ಹೀಗೆ ಬ್ರಹ್ಮತತ್ತ್ವ 'ವಿಶ್ವ' ಅವಸ್ಥೆಯಲ್ಲಿ ವಿಶ್ವವಾಗಿ ಪರಿಣಾಮ ಹೊಂದಿದರೂ, 'ವ್ಯಕ್ತಿಗತ' ಅವಸ್ಥೆಯಲ್ಲಿ ಅಸಂಖ್ಯಾತ ಜೀವಾತ್ಮರುಗಳಾಗಿ 'ಗುಣಿಸಿ'ಕೊಂಡರೂ ತನ್ನ 'ಅಖಂಡತೆ'ಯನ್ನು ಕಳೆದುಕೊಳ್ಳುವುದಿಲ್ಲ ಎಂಬುದು ಈ ದರ್ಶನದ ಮಹತ್ತ್ವಪೂರ್ಣ ಅಂಶ. "The infinite multiplicity of the ONE and the eternal unity of the MANY are the two realities or aspects of ONE Reality on which the manifestation is founded."[3] ಬ್ರಹ್ಮತತ್ತ್ವವೇ ಜಗತ್ತಾಗಿ ಪರಿಣಾಮ ಹೊಂದುವುದರಿಂದ ಜಗತ್ತು ಬ್ರಹ್ಮದಷ್ಟೇ ಸತ್ಯ. ಅದು ಮಿಥ್ಯೆಯೆಂದೂ, ಮಾಯೆಯೆಂದೂ ಸದಸದ್ವಿಲಕ್ಷಣವೆಂದೂ ಪ್ರತಿಪಾದಿಸುವ ಅದ್ವೈತ ದರ್ಶನದ ನಿಲುವು ಅರವಿಂದ ದರ್ಶನಕ್ಕೆ ಸ್ವಲ್ಪವೂ ಸಮ್ಮತವಲ್ಲ. ಜಗತ್ತು, ಬ್ರಹ್ಮತತ್ತ್ವ ತನ್ನ ಸ್ವ ಇಚ್ಛೆಯ ಮೇರೆಗೆ ತನ್ನ ಆನಂದಕ್ಕೋಸ್ಕರ[4] ತಾನೇ ತೆಗೆದುಕೊಂಡ ರೂಪ. ಬ್ರಹ್ಮತತ್ತ್ವ ಆನಂದತತ್ತ್ವವಾಗಿಲ್ಲದೆ ಕೇವಲ 'ಸತ್' ಆಗಿದ್ದರೆ, ಬಹುಶಃ ಈ ಜಗತ್ತು ಇಲ್ಲವಾಗುತ್ತಿತ್ತು. ಅವರ ಮಾತುಗಳಲ್ಲೇ ಹೇಳುವುದಾದರೆ : "World existence is the ecstatic dance of Siva which multiplies the body of the god numberlessly to the view : ....Its sole absolute

object is the joy of the dancing.[5]

೪

ಅರವಿಂದ ದರ್ಶನದಲ್ಲಿ ಜೀವಾತ್ಮ ಬ್ರಹ್ಮದಷ್ಟೇ ಸತ್ಯ. ಅದು ಸಂಖ್ಯೆಯಲ್ಲಿ ಅನೇಕ. ಸಚ್ಚಿದಾನಂದದ ಇಚ್ಛಾಸಂಕಲ್ಪವಾದ ವಿಶ್ವವೂ ಸತ್ಯ, ಮಿಥ್ಯೆಯಲ್ಲ. ಜೀವಾತ್ಮ ಹಾಗೂ ಜಗತ್ತು — ಈ ಎರಡು ತತ್ತ್ವಗಳಲ್ಲಿಯೂ ಬ್ರಹ್ಮ ಅಂತರ್ಯಾಮಿಯಾಗಿರುತ್ತದೆ. ಒಟ್ಟಾರೆ, ಅಂತಿಮ ಸತ್ಯ ಒಂದೇ. ಆದರೆ ಅದು ಶಾಸ್ತ್ರೀಯ ಅದ್ವೈತದ ಕೇವಲ 'ಏಕ'ವಲ್ಲ. ಅನೇಕದಲ್ಲಿ ಏಕ, ಏಕದಲ್ಲಿ ಅನೇಕ. ಅರವಿಂದ ದರ್ಶನದಲ್ಲಿ ಜೀವಾತ್ಮನಿಗೆ ತನ್ನದೇ ಆದ ಪ್ರತ್ಯೇಕ ಅಸ್ತಿತ್ವ ಉಂಟು; ಶಾಸ್ತ್ರೀಯ ಅದ್ವೈತ ದರ್ಶನ ಹೇಳುವಂತೆ ಅದು ಬ್ರಹ್ಮದ ತೋರಿಕೆಯಲ್ಲ; ಬ್ರಹ್ಮಕ್ಕಿಂತ ಭಿನ್ನವಾದ ಆದರೆ ಬ್ರಹ್ಮವನ್ನು ಬಿಟ್ಟಿರಲಾಗದ ತತ್ತ್ವ. ಹಾಗೆಯೇ ಅರವಿಂದ ದರ್ಶನದಲ್ಲಿ, ಜಗತ್ತು ಹುಸಿಯಲ್ಲ, ಮಿಥ್ಯೆಯಲ್ಲ, ಮಾಯೆಯಲ್ಲ; ಅದು ಬ್ರಹ್ಮತತ್ತ್ವದ ಪರಿಣಾಮವಾದುದರಿಂದ, ಬ್ರಹ್ಮದಷ್ಟೇ ಸತ್ಯ.[6] ಈ ದೃಷ್ಟಿಯಲ್ಲಿ ಅರವಿಂದ ದರ್ಶನ, ಶಾಸ್ತ್ರೀಯ ಅದ್ವೈತ ದರ್ಶನದಿಂದ ಭಿನ್ನವಾಗಿದೆ. ಅದು ಶ್ರೀ ರಾಮಾನುಜರ ವಿಶಿಷ್ಟಾದ್ವೈತ ದರ್ಶನಕ್ಕೆ ತೀರ ಹತ್ತಿರವಾಗಿದೆ ಎನ್ನಬಹುದು. ಈ ಅರ್ಥದಲ್ಲಿಯೇ ಅರವಿಂದ ದರ್ಶನವನ್ನು 'Integral Personalism' ಎಂದು ಕರೆಯುವುದು.

ಅರವಿಂದ ದರ್ಶನದ ಪ್ರಕಾರ, ಒಂದು ಚಿಂತನೆ ತನ್ನನ್ನು ತಾನು 'ಅದ್ವೈತ'ವೆಂದು ಕರೆದುಕೊಳ್ಳಬೇಕಾದರೆ ಅದು ಪ್ರತಿಪಾದಿಸುವ 'ತತ್ತ್ವ' ಎಲ್ಲವನ್ನೂ ಒಳಗೊಂಡು ಯಾವುದನ್ನೂ ಹೊರತುಮಾಡದಷ್ಟು ವ್ಯಾಪಕವಾಗಿರಬೇಕು. ಇದೇ 'ಅನಂತ' ಎಂಬ ಪದದ ನೈಜ ಅರ್ಥ. ಶಾಸ್ತ್ರೀಯ ಅದ್ವೈತ ದರ್ಶನದ ಅಂತಿಮತತ್ತ್ವವಾದ ಬ್ರಹ್ಮ ನಿಜವಾಗಿಯೂ 'ಅನಂತ'ವಾದುದಾದರೆ, ಆ ದರ್ಶನ 'ಇದು ಆತ್ಮ, ಇದು ಅನಾತ್ಮ', 'ಇದು ಸತ್ಯ, ಇದು ಮಿಥ್ಯ' ಎಂದು ಸತ್ಯವನ್ನು ವಿಭಜಿಸಲು ಮುಂದುವರಿಯಲಾಗದು. 'ಇದು ಆತ್ಮ, ಇದು ಅನಾತ್ಮ' ಎಂದು ಇಡಿಯಾದ (ಅಖಂಡವಾದ) ಸತ್ಯವನ್ನು ಎರಡಾಗಿ ಕತ್ತರಿಸಿ, ಅನಾತ್ಮವನ್ನು ಆತ್ಮದಿಂದ ಹೊರತುಪಡಿಸಿ, ಅನಾತ್ಮದಿಂದ ದೂರ ಸರಿದು ನಿಲ್ಲುವುದೇ ಮುಕ್ತಿ ಎಂಬ ಅದ್ವೈತ ದರ್ಶನದ ಪ್ರತಿಪಾದನೆ ಏಕಪಕ್ಷೀಯ ನಿಲುವಾಗುತ್ತದೆ; ಹಾಗೂ ಅನಾತ್ಮವನ್ನು ಅದು ಹೊರತುಪಡಿಸುವುದರಿಂದ 'ಅನಂತ' ತತ್ತ್ವವಾಗಿ ಉಳಿಯದೆ 'ಮಿತ' ತತ್ತ್ವವೆನಿಸಿಕೊಳ್ಳುತ್ತದೆ ಎಂದು ಶ್ರೀ ಅರವಿಂದರು ಶಾಸ್ತ್ರೀಯ ಅದ್ವೈತ ದರ್ಶನವನ್ನು ಕುರಿತು ವಿಮರ್ಶೆ ಮಾಡುತ್ತಾರೆ. ಅವರ ಸ್ಪಷ್ಟ ಮಾತುಗಳಲ್ಲಿ ಹೇಳುದಾದರೆ: The real Monism, the true Advaita, is that which admits all things as the one Brahman and does not seek to bisect its existence into/two.

incompatible entities, an eternal Truth and an eternal Falsehood, Brahman and not-Brahman, Self and not-Self, a real Self and an unreal, yet perpetual Maya. If it be true that Self alone exists, it must also be true that all is the Self."[7]

೫

ಈಗ ಒಂದು ಬಹುಮುಖ್ಯ ತಾತ್ತ್ವಿಕ ಪ್ರಶ್ನೆ ತಲೆದೋರಬಹುದು. ಬ್ರಹ್ಮ ತತ್ತ್ವ ತನ್ನ ಸ್ವ ಇಚ್ಛೆಯ ಮೇರೆಗೆ ತನ್ನ ಆನಂದೋತ್ಕರ್ಷಕ್ಕೋಸ್ಕರ 'ವಿಶ್ವ ಅವಸ್ಥೆ'ಯಲ್ಲಿ ಜಗತ್ತಾಗಿ ಪರಿಣಾಮ ಹೊಂದುತ್ತದೆಂದೂ 'ವ್ಯಕ್ತಿಗತ' ಅವಸ್ಥೆಯಲ್ಲಿ ಅಸಂಖ್ಯಾತ ಜೀವಾತ್ಮರುಗಳಾಗಿ 'ಗುಣಿಸಿಕೊಳ್ಳುತ್ತ'ದೆಂದೂ, ಹೀಗೆ ಬ್ರಹ್ಮಕ್ಕೆ ಬದಲಾವಣೆ (ಚಲನೆ) ಉಂಟೆಂದೂ ಪ್ರತಿಪಾದಿಸುವ ಶ್ರೀ ಅರವಿಂದರು, ಬ್ರಹ್ಮ ಅನಿತ್ಯವೆಂದೂ, ಅಪರಿಪೂರ್ಣವೆಂದೂ, ತಮಗಿಷ್ಟವಿಲ್ಲದಿದ್ದರೂ ಒಪ್ಪಲೇಬೇಕಾದ ಪರಿಸ್ಥಿತಿ ಉದ್ಭವಿಸಬಹುದು. ತೀರ್ಮಾನವನ್ನು ಹೀಗೆ ಇಡಬಹುದು. ಒಂದು : ಬ್ರಹ್ಮ ನಿತ್ಯ ತತ್ತ್ವವಾಗಿರಬೇಕು ; ಆಗ ಅದಕ್ಕೆ ಬದಲಾವಣೆ ಉಂಟೆಂದು ಹೇಳಲಾಗದು. ಎರಡು ; ಬ್ರಹ್ಮಕ್ಕೆ ಬದಲಾವಣೆ (ಚಲನೆ) ಉಂಟೆಂದು ಒಪ್ಪಿದ ಪಕ್ಷದಲ್ಲಿ ಅದು ಅನಿತ್ಯವಾಗಿರಬೇಕು ಎಂದು ಹೇಳಲೇಬೇಕು. ಬಹುತೇಕ ವೇದಾಂತ ಶಾಖೆಗಳು ಮೊದಲನೆಯ ತೀರ್ಮಾನಕ್ಕೆ ಗಂಟುಬಿದ್ದು, ಬ್ರಹ್ಮದ ನಿತ್ಯತೆ ಹಾಗೂ ಪರಿಪೂರ್ಣತೆಯನ್ನು ಉಳಿಸುವ ಸಲುವಾಗಿ, ಅದಕ್ಕೆ ಯಾವ ಪರಿಣಾಮವನ್ನೂ ಒಪ್ಪದೆ, ಅದು ಅಚಲ, ಅಪರಿಣಾಮಿ ಎಂದು ಪ್ರತಿಪಾದಿಸುತ್ತವೆ. ಶ್ರೀ ಅರವಿಂದರು ಬಹುತೇಕ ವೇದಾಂತ ದರ್ಶನಗಳ ಈ ಪೂರ್ವಕಲ್ಪನೆ (presupposition)ಯನ್ನು ಒಪ್ಪಿಕೊಳ್ಳುವುದಿಲ್ಲ. ಬ್ರಹ್ಮ ತತ್ತ್ವದ ನಿತ್ಯತೆಯನ್ನು ಉಳಿಸುವ ಸಲುವಾಗಿ ಅದು ಅಚಲ, ಅಪರಿಣಾಮಿ ಎಂದು ಹೇಳುವುದರ ಮೂಲಕ ಈ ದರ್ಶನಗಳು ಅದನ್ನು ನಿಷ್ಕ್ರಿಯ ಹಾಗೂ ನಿಶ್ಚಲ (static) ವನ್ನಾಗಿ ಮಾಡಿವೆ. ಅಲ್ಲದೆ ಚಲನೆ ಬ್ರಹ್ಮಕ್ಕಿಲ್ಲ ಎಂದು ಪ್ರತಿಪಾದಿಸುವುದರ ಮೂಲಕ (ಬ್ರಹ್ಮ ತತ್ತ್ವದಲ್ಲಿ ಚಲನೆಯ ಅಭಾವವಿದೆ ಎಂಬ ಅರ್ಥದಲ್ಲಿ) ಪರಿಪೂರ್ಣವಾದ, ಅನಂತವಾದ ಬ್ರಹ್ಮ ತತ್ತ್ವವನ್ನು ಈ ದರ್ಶನಗಳು ತಮಗರಿವಿಲ್ಲದಂತೆಯೇ 'ಮಿತ' ತತ್ತ್ವವನ್ನಾಗಿರಿಸಿಕೊಂಡಿವೆ ಎಂದು ಅರವಿಂದ ದರ್ಶನ ಅಭಿಪ್ರಾಯ ಪಡುತ್ತದೆ. ಚಲನರಹಿತವಾದುದು ಮಾತ್ರ ಪರಿಪೂರ್ಣಸತ್ಯ ; ಚಲನೆಯುಳ್ಳದ್ದು ಅಪರಿಪೂರ್ಣ ಎಂದು ಅಖಂಡವಾದ ಸತ್ಯವನ್ನು ಭೇದಿಸುವುದರ ಮೂಲಕ ಸತ್ಯದ ವ್ಯಾಪಕತೆಯನ್ನು ಕುಂಠಿತಗೊಳಿಸಿ ಏಕಪಕ್ಷೀಯ ನಿಲುವನ್ನು ಅವು ಪ್ರತಿಪಾದಿಸುತ್ತವೆ. ಶ್ರೀ ಅರವಿಂದರು ತಮ್ಮ ದರ್ಶನದಲ್ಲಿ ಈ ಸಮಸ್ಯೆಯನ್ನು ಬಹಳ ಸಮರ್ಪಕವಾಗಿ ಹೀಗೆ ನಿವಾರಿಸಿದ್ದಾರೆ : 'ಅತೀತ ಅವಸ್ಥೆಯಲ್ಲಿ ಬ್ರಹ್ಮ ಸ್ವಲ್ಪವೂ ವಿಚಲಿತವಾಗದೆ ಸ್ವಸ್ಥವಾಗಿರುತ್ತದೆ,

'ವಿಶ್ವ ಅವಸ್ಥೆ'ಯಲ್ಲಿ ಕ್ರಿಯಾತ್ಮಕ ಸ್ಥಿತಿಯನ್ನು ಹೊಂದಿ ಜಗತ್ತಾಗಿ ಪರಿಣಾಮವನ್ನು ಹೊಂದುವುದರ ಮೂಲಕ ಅಣುರೇಣುತೃಣಕಾಷ್ಠದಲ್ಲೂ ತನ್ನ ಐಕ್ಯವನ್ನು ಕಂಡು ಕೊಳ್ಳುತ್ತದೆ. "ಇರುವಿಕೆ ಆನಂದ ಮಾತ್ರವಾದರೆ ಬದಲಾವಣೆ ಆನಂದೋತ್ಕರ್ಷ" (Being is bliss, Becoming is delight). ಬ್ರಹ್ಮದ 'ಅತೀತ' ಹಾಗೂ 'ವಿಶ್ವ ಅವಸ್ಥೆಗಳು ಒಂದಕ್ಕೊಂದು ವಿರುದ್ಧವಾಗಿಲ್ಲ ; ಅವು ಪರಸ್ಪರ ಪೂರಕ ವಾಗಿವೆ. ಅಚಲ (changelessness) ಎಂಬ ಪದಕ್ಕೆ ಶ್ರೀ ಅರವಿಂದರು ವಿಶೇಷ ಹಾಗೂ ವಿಶಿಷ್ಟ ಅರ್ಥವನ್ನು ಕೊಟ್ಟಿದ್ದಾರೆ. ಅವರ ಪ್ರಕಾರ, ಬ್ರಹ್ಮ ಅಚಲವೆಂದರೆ ಚಲನರಹಿತವಾದುದು ಎಂದರ್ಥವಲ್ಲ. ಬ್ರಹ್ಮ ಅಸಂಖ್ಯಾತವಾಗಿ ಬದಲಾವಣೆ (ಪರಿ ಣಾಮ) ಹೊಂದುತ್ತಿದ್ದರೂ ತನ್ನನ್ನು ವಿಭಜಿಸಿಕೊಳ್ಳದೆ ತನ್ನ ಐಕ್ಯವನ್ನು ಯಾವಾ ಗಲೂ ಕಾಪಾಡಿಕೊಳ್ಳುವುದೇ 'ಅಚಲ' ಪದದ ನೈಜ ಅರ್ಥ ಎಂದು ಶ್ರೀ ಅರವಿಂದರು ಪ್ರತಿಪಾದಿಸುತ್ತಾರೆ. ಅವರ ಮಾತುಗಳಲ್ಲೇ 'ಅಚಲ' ಪದದ ವಿವರಣೆಯನ್ನು ನೀಡುವುದಾದರೆ : Unchangeableness of Being which is capable of endless formation of being but which no differentiation can destroy or, impair or minimise."[9]

ಈ ಅರ್ಥದಲ್ಲಿ ಶ್ರೀ ಅರವಿಂದರ ಪ್ರಕಾರ, ಬ್ರಹ್ಮ ತತ್ತ್ವ ಅಚಲವೂ ಹೌದು, ಚಲನಾತ್ಮಕವೂ ಹೌದು ; ಸ್ವಸ್ಥವೂ ಹೌದು, ವಿಚಲಿತವೂ ಹೌದು, ವ್ಯಕ್ತವೂ ಹೌದು, ಅವ್ಯಕ್ತವೂ ಹೌದು, ಪ್ರಜ್ಞೆಯೂ ಹೌದು, ಬಲವೂ ಹೌದು, ಅತೀತವೂ ಹೌದು, ಅಂತರ್ಯಾಮಿಯೂ ಹೌದು ; ಅದು ಅನಂತ ಸಾಧ್ಯತೆಗಳ ಅನಂತ ಗಣಿ. ". . . Force inherent in existence may be at rest or it may be in motion, but when it is at rest, it exists none the less and is not abolished, diminished or in any way essentially altered"[10] "Becoming can only know itself wholly when it knows itself as Being."[11]

ಹೀಗೆ ಬ್ರಹ್ಮ ಪೂರ್ಣ ಮತ್ತು ಸ್ವತಂತ್ರ. ಅದು ಯಾವುದರಿಂದಲೂ ಬಂಧಿತ ವಾಗಿಲ್ಲ. ಅದರ ಅಭಿವ್ಯಕ್ತಿ ಮಿತವಾದುದಲ್ಲ. ತನ್ನ ಎಲ್ಲ ಪ್ರಕಾರಗಳನ್ನು ಅದು ತನ್ನ ಸ್ವ ಇಚ್ಛೆಯ ಮೇರೆಗೆ ವ್ಯವಸ್ಥಿತಗೊಳಿಸಬಹುದು, ಇಲ್ಲವೆ ಅಭಿವ್ಯಕ್ತಗೊಳಿಸದೆ ಇರಬಹುದು. ಅದು ಯಾವುದೇ ಚೌಕಟ್ಟಿನಲ್ಲಿ ಬಂಧಿತವಾಗಿಲ್ಲ. ಏಕಕಾಲದಲ್ಲಿ ಅದು ಅನೇಕ ವಾಗಬಲ್ಲದು ಮತ್ತು ವಿವಿಧ ಸ್ಥಿತಿಗಳನ್ನು ಹೊಂದಬಲ್ಲದು.

೬

ಬ್ರಹ್ಮತತ್ತ್ವ ತನ್ನ ಆನಂದೋತ್ಕರ್ಷಕ್ಕೋಸ್ಕರ 'ವಿಶ್ವ ಅವಸ್ಥೆ' ಯಲ್ಲಿ ಪರಿಣಾಮ (ವಿಕಾಸ) ವನ್ನು ಹೊಂದುತ್ತದೆಂದು ಹಿಂದೆ ತಿಳಿಸಿದೆ. ಈಗ ಆ ಪರಿಣಾಮ ಹೇಗೆ ಎಂಬ ಅರವಿಂದ ದರ್ಶನದ ಪ್ರತಿಪಾದನೆಯನ್ನು ಸೂಚಿಸಬಹುದು.

ಪರಿಣಾಮವಾದ ಅಥವಾ ವಿಕಾಸವಾದ, ಆಧುನಿಕ ಪ್ರಪಂಚದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದೆ. ಅದು ಕೇವಲ ತತ್ತ್ವಶಾಸ್ತ್ರದ ವಿಚಾರವಷ್ಟೇ ಆಗಿರದೆ ವಿಜ್ಞಾನದ ಕೇಂದ್ರ ಬಿಂದುವೂ ಆಗಿದೆ. ಜೀವೋತ್ಪತ್ತಿ ಹೇಗೆ? ಪ್ರಜ್ಞೆ ಪರಾಕಾಷ್ಠದಿಂದ ಹೇಗೆ ಉಂಟಾಗುತ್ತದೆ? ಅದು ಹೇಗೆ ವಿಕಾಸ ಹೊಂದುತ್ತಾ ಹೋಗುತ್ತದೆ? ಈ ಪ್ರಶ್ನೆಗಳ ಬಗ್ಗೆ ಆಧುನಿಕ ಜೀವವಿಜ್ಞಾನಕ್ಕೆ ಅದಮ್ಯ ಕುತೂಹಲ ಹಾಗೂ ಆಸ್ಥೆ ಇದೆ.

ವಿಕಾಸವಾದದ ವಿವರವಾದ ವಿವರಣೆಯನ್ನು ಶ್ರೀ ಅರವಿಂದರ ಮೇರುಕೃತಿಯಾದ 'ದಿವ್ಯ ಜೀವನ' (The Life Divine) ದಲ್ಲಿ ಕಾಣಬಹುದು. ಶ್ರೀ ಅರವಿಂದರ ಪ್ರಕಾರ ವಿಕಾಸವಾದದ ತಳಹದಿಯೇ ವಿವೃತಿ (involution).[12] ಒಂದು ವಸ್ತು (A), ಇನ್ನೊಂದು ವಸ್ತುವಾಗಿ (B), ಪರಿಣಾಮವನ್ನು ಹೊಂದುತ್ತದೆಂದು ಅರ್ಥವತ್ತಾಗಿ ಹೇಳಬೇಕಾದರೆ, ಹೊರಕ್ಕೆ ಬಂದ ವಸ್ತು (B), ಮೊದಲೇ ಸೂಕ್ಷ್ಮರೂಪದಲ್ಲಿ ಅವ್ಯಕ್ತವಾಗಿ A ವಸ್ತುವಿನಲ್ಲಿ ಅಡಗಿರಬೇಕೆಂದು ಪರಿಭಾವಿಸಬೇಕಾಗುತ್ತದೆ. ಹಾಗಿಲ್ಲದ ಪಕ್ಷದಲ್ಲಿ, B ಗೊತ್ತಾದ ಕಾಲದ ಅವಧಿಯಲ್ಲಿ Aಯಿಂದ ಹೊರಕ್ಕೆ ಬರಲಾರದು, ಏಕೆಂದರೆ ಶೂನ್ಯದಿಂದ ಏನೂ ಬರಲು ಸಾಧ್ಯವಿಲ್ಲವೆಂದು ವಿಜ್ಞಾನ ಸಾರುತ್ತದೆ. ಹರಳೆಣ್ಣೆ ಹರಳು ಬೀಜದಲ್ಲಿ ಅವ್ಯಕ್ತವಾಗಿ ಆಗಲೇ ಅಡಗಿದ್ದು, ಗಾಣ ಆಡಿಸಿದಾಗ ಅದು ವ್ಯಕ್ತ ರೂಪದಲ್ಲಿ ಹೊರಬರುವಂತೆ ಈ ಇಡೀ ವಿಶ್ವ, ಸೂಕ್ಷ್ಮರೂಪದಲ್ಲಿ ಬ್ರಹ್ಮತತ್ತ್ವದಲ್ಲಿ ಆಗಲೇ ಅವ್ಯಕ್ತವಾಗಿ ಅಡಗಿದ್ದು, ಬ್ರಹ್ಮತತ್ತ್ವದ ಸ್ವಇಚ್ಛೆ ಮೇರೆಗೆ ಅದರ ಆನಂದೋತ್ಕರ್ಷಕ್ಕೋಸ್ಕರ ವ್ಯಕ್ತ ರೂಪದಲ್ಲಿ ಹೊರಬರುವುದನ್ನೇ ಬ್ರಹ್ಮ ಪರಿಣಾಮವಾದ ಅಥವಾ ಬ್ರಹ್ಮ ವಿಕಾಸವಾದ ಎಂದು ಶ್ರೀ ಅರವಿಂದರು ಕರೆಯುತ್ತಾರೆ.

ಶ್ರೀ ಅರವಿಂದರ ವಿಕಾಸವಾದವನ್ನು ಸ್ಥೂಲವಾಗಿ ಈ ಕೆಳಗೆ ಕಂಡ ಚಿತ್ರದಿಂದ ಸೂಚಿಸಬಹುದು.

ವಿಕಾಸ (Evolution) ↑

ಬ್ರಹ್ಮತತ್ತ್ವ (ಸಚ್ಚಿದಾನಂದ) (Brahman)
ಅತಿಮಾನಸ (Super Mind)
ಉತ್ತರೋತ್ತರಮನ (Over Mind)
ಸ್ವಯಂ ಸಾಕ್ಷಿಮನ (Intuitive Mind)
ಜ್ಯೋತಿರ್ಮನ (Illumined Mind)
ಉನ್ಮನ (Higher Mind)
ಮನ (Mind)
ಪ್ರಾಣ (Life)
ಜಡ (Matter)

ವಿವೃತಿ (Involution) ↓

ಚೇತನ ತತ್ತ್ವವಾದ ಬ್ರಹ್ಮ ಕ್ರಮ ಕ್ರಮವಾಗಿ ಕೆಳಗಿಳಿದು ಒಂದು ಪರಾಕಾಷ್ಠ ಜಡಾವಸ್ಥೆಯನ್ನು ತನಗೆ ತಾನೆ ಪಡೆದು ಆರೋಹಣ ಕ್ರಮದಲ್ಲಿ ಕ್ರಮ ಕ್ರಮವಾಗಿ ಮೇಲೇರಿ ವಿಕಸಿತ ಚೇತನ ತತ್ತ್ವವಾಗುತ್ತದೆ, ಇದು ಒಂದು ನಿರಂತರ ಕ್ರಿಯೆ.

ವಿಶ್ವ ವಿಕಾಸನದಲ್ಲಿ ಮನಸ್ಸೇ ಅಂತಿಮ ಸತ್ಯ ಎಂದು ಪ್ರತಿಪಾದಿಸುವ ಕೆಲವು ಪಾಶ್ಚಾತ್ಯ ತತ್ತ್ವಜ್ಞಾನಿಗಳ ನಿಲುವನ್ನು ಹಸಿಸುಳ್ಳು ಎಂದು ಅರವಿಂದ ದರ್ಶನ ಸಾರುತ್ತದೆ ಅರವಿಂದರ ಪ್ರಕಾರ, ಬ್ರಹ್ಮ ತತ್ತ್ವ ನೇರವಾಗಿ ಮಾನಸ ಸ್ತರಕ್ಕೆ ಇಳಿದು ಬರುವುದಿಲ್ಲ. ಬ್ರಹ್ಮಕ್ಕೂ ಮನಸ್ಸಿನ (Mind) ಸ್ತರಕ್ಕೂ ಮಧ್ಯೆ ಅವೆರಡನ್ನೂ ಕೂಡಿಸುವ ಒಂದು ಕೊಂಡಿ ಇದೆ. ಅದೇ ಅತಿಮಾನಸ (Super Mind) ಅತಿಮಾನಸ ಮಾಧ್ಯಮದ ಮೂಲಕ ಮಾತ್ರ ಬ್ರಹ್ಮತತ್ತ್ವ ಮನಸಿನ ಸ್ತರಕ್ಕೆ ಇಳಿದುಬರುವುದು, ಹಾಗೆಯೇ ಅತಿ ಮಾನಸ ಮಾಧ್ಯಮದ ಮೂಲಕ ಮಾತ್ರ ಮನಸ್ಸು ಬ್ರಹ್ಮತತ್ತ್ವಕ್ಕೆ ಏರಬಲ್ಲದು. ಮಾನವ ಮನಸ್ಸು ಮಿತವಿದ್ದು ದೋಷಯುತವಾಗಿದೆ. ಅದು ಮಿತ ವಸ್ತುಗಳನ್ನು ಮಾತ್ರ ತಿಳಿಯಬಲ್ಲುದು. ಭೌತಿಕ ಆಸೆ ಆಮಿಷಗಳನ್ನು ಈಡೇರಿಸಿಕೊಳ್ಳುವುದಕ್ಕೆ ಅದು ಪ್ರಯತ್ನಿಸುತ್ತದೆ. ಅದು ಒಂದು ವಸ್ತುವನ್ನು ಭೇದಿಸಿ ವಿಶ್ಲೇಷಿಸುವುದರ ಮೂಲಕ ಭಾಗಶಃ ತಿಳಿಯುವ ಪ್ರಯತ್ನ ಮಾಡುತ್ತದೆ.

ಆದರೆ ಅತಿ ಮಾನಸ, ಹೆಸರೇ ಸೂಚಿಸುವಂತೆ ಮನಸ್ಸನ್ನು ಮೀರಿದ ಸ್ಥಿತಿ, ದಿವ್ಯ ಜ್ಞಾನ ಹಾಗೂ ತೇಜಸ್ಸು ಅದರ ಸ್ವರೂಪ. ಅದು ಎಲ್ಲಾ ದೋಷ ದೌರ್ಬಲ್ಯಗಳಿಂದ ಸಂಪೂರ್ಣವಾಗಿ ವಿಮುಕ್ತವಾದುದು. ಪರಿಶುದ್ಧತೆಯೇ ಅದರ ಬೆಳಕು. ಮಾನವ ಮನಸ್ಸು ಒಂದು ವಸ್ತುವನ್ನು ಭೇದಿಸಿ ಪದರ ಪದರವಾಗಿ ಭಾಗಶಃ ತಿಳಿದರೆ, ಅತಿಮಾನಸ ವಸ್ತುವನ್ನು ಇಡಿಯಾಗಿ ಒಂದೇ ಕ್ಷಣದಲ್ಲಿ ನೇರವಾಗಿ ಪೂರ್ಣವಾಗಿ ತಿಳಿದುಬಿಡುತ್ತದೆ. ಬ್ರಹ್ಮತತ್ತ್ವದ ಸತ್‌ಚಿತ್‌ಆನಂದ ಸ್ವರೂಪವನ್ನು ವಿಭಜಿಸದೆ ಇಡಿಯಾಗಿ ತಿಳಿಯುತ್ತದೆ. ಅದು ವ್ಯಾಪಕವೂ, ಕ್ರಿಯಾತ್ಮಕವೂ ಆದುದು.

ಶ್ರೀ ಅರವಿಂದರ ಪ್ರಕಾರ ಅತಿಮಾನಸಕ್ಕೂ ಮನಸ್ಸಿಗೂ ನಡುವೆ, ಉತ್ತರೋತ್ತರ ಮನ (Over Mind), ಸ್ವಯಂಸಾಕ್ಷಿಮನ (Intuitive Mind), ಜ್ಯೋತಿರ್ಮನ (Illumined Mind) ಮತ್ತು ಉನ್ನತ (Higher Mind) ಎಂಬ ಸ್ತರಗಳುಂಟು. ಅತಿಮಾನಸ ಮೊದಲು ಉತ್ತರೋತ್ತರ ಮನದ ಸ್ತರಕ್ಕೆ ಕೆಳಗಿಳಿದು ಬರುತ್ತದೆ. ಈ ಸ್ಥಿತಿಯಲ್ಲಿ ಬ್ರಹ್ಮತತ್ತ್ವ ಕ್ರಮಕ್ರಮವಾಗಿ ತನ್ನ ಏಕತೆಯನ್ನು ಅನೇಕತೆಯನ್ನಾಗಿ, ವೈವಿಧ್ಯತೆಯನ್ನಾಗಿ ಮಾರ್ಪಡಿಸುತ್ತಾ ಬರುತ್ತದೆ. ಈ ಪರಿವರ್ತನೆ ಮುಂದುವರಿದು ಮನಸ್ಸಿನ ಸ್ತರಕ್ಕೆ ಬಂದು ನಿಲ್ಲುತ್ತದೆ.

ಮಾನವ ಮನಸ್ಸಿನ ಸ್ತರದಲ್ಲಿ ಸ್ವಾರ್ಥಪರ ಆಶೆ ಆಮಿಷಗಳು ತಲೆ ಎತ್ತುತ್ತವೆ. ಸಂಕುಚಿತದೃಷ್ಟಿ ಮೊದಲಾಗುತ್ತದೆ. ಎಲ್ಲವನ್ನು ವ್ಯಕ್ತಿನಿಷ್ಠ ದೃಷ್ಟಿಯಿಂದ ನೋಡುವುದು ಪ್ರಾರಂಭವಾಗುತ್ತದೆ. ಅಲ್ಪತನ, ಕ್ಷುಲ್ಲಕ ಪ್ರವೃತ್ತಿ, ಕೀಳು ಆಸೆಗಳು, ಆವೇಗ, ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯಗಳ

ತವರುಮನೆಯಾಗುತ್ತದೆ. ಒಟ್ಟಾರೆ ಬಾವಿಯಲ್ಲಿನ ಕಪ್ಪೆಯ ಸ್ಥಿತಿಯಾಗುತ್ತದೆ. ಈ ಸ್ತರದಲ್ಲಿ. ಮನಸ್ಸಿನ ಸ್ತರದಿಂದ ಬ್ರಹ್ಮ ತತ್ತ್ವವನ್ನು ಕೆಳಗಿಳಿದು ಪ್ರಾಣಸ್ತರವನ್ನು ತಲುಪುತ್ತದೆ. ಮನಸ್ಸು ಮತ್ತು ಪ್ರಾಣ ಸ್ತರಗಳ ನಡುವೆ ಶ್ರೀ ಅರವಿಂದರು ಮೂರು ಉಪ ಸ್ತರಗಳನ್ನು ಗುರುತಿಸುತ್ತಾರೆ: (i) ಮೇಲಿನ ಜೈವಿಕ ಸ್ತರ [The Higher Vital], (ii) ಮಧ್ಯಮ ಜೈವಿಕ ಸ್ತರ [The Middle Vital] ಮತ್ತು (iii) ಕೆಳಗಿನ ಜೈವಿಕ ಸ್ತರ [The Lower Vital]. ಮೇಲಿನ ಜೈವಿಕ ಸ್ತರದಲ್ಲಿ ಮನಸ್ಸು ಮತ್ತು ಪ್ರಾಣಗಳ ಸಂಗಮವನ್ನು ಕಾಣಬಹುದು. ಕೆಳಗಿನ ಸ್ತರದಲ್ಲಿ ಶಾರೀರಕ ಒತ್ತಾಸೆಗಳು ತಾಂಡವಾಡುತ್ತವೆ.

ಬ್ರಹ್ಮತತ್ತ್ವ ಇನ್ನೂ ಕೆಳಗಿಳಿದು ಕೊನೆಯ ಅವಸ್ಥೆಯಾದ ಪರಾಕಾಷ್ಠ ಜಡವಾಗುತ್ತದೆ. ಚೈತನ್ಯರಸ, ಇಂಗಿಹೋಯಿತೇನೋ ಎಂಬ ಸ್ಥಿತಿಗೆ ಬರುವುದರ ಮೂಲಕ ಕತ್ತಲೆಯನ್ನು ಪ್ರವೇಶಿಸುತ್ತದೆ. ಅದು ಘನೀಭೂತವಾಗುತ್ತದೆ. ಇದುವರೆಗೂ ನಿರೂಪವಾಗಿದ್ದ ಚೇತನ ಒಂದು ರೂಪವನ್ನು ಪಡೆಯುತ್ತದೆ; ಅಶರೀರವಾಗಿದ್ದುದ್ದು ಸಶರೀರಿಯಾಗುತ್ತದೆ. ಇಷ್ಟೆಲ್ಲಾ ಮಾಡುವುದು ತಾನೇ ಇಳಿದು ಬಂದ ಸ್ತರಗಳನ್ನು ಹಂತಹಂತವಾಗಿ ಹತ್ತಿ ಪುನಃ ಮೊದಲಿನ ಸ್ಥಿತಿಯನ್ನು ಪಡೆಯುವುದಕ್ಕೋಸ್ಕರ. ಹೀಗೆ ಬ್ರಹ್ಮತತ್ತ್ವ ಸ್ವಇಚ್ಛೆಯಿಂದ ವಿಶ್ವದ ಎಲ್ಲಾ ಸ್ತರಗಳೊಡನೆ ತನ್ನ ಐಕ್ಯವನ್ನು ಕಂಡುಕೊಳ್ಳಲು ಉದ್ದೇಶ ಪೂರ್ವಕವಾಗಿ ವಸ್ತುತಃ ಪರಾಕಾಷ್ಠ ಜಡವಾಗುತ್ತದೆ!; ಜಡವಾದಂತೆ ತೋರುವುದಿಲ್ಲ. ಅಂದರೆ ಜಡ ಚೈತನ್ಯ ವಿರೋಧಿಯಲ್ಲ; ಚೇತನ ತತ್ತ್ವವೇ ತನ್ನ ಸ್ವಇಚ್ಛೆಯಿಂದ ತನ್ನ ಆನಂದೋತ್ಕರ್ಷಕ್ಕೋಸ್ಕರ ತಾನೇ ತೆಗೆದುಕೊಂಡ ಅವಸ್ಥೆ; ವಿದ್ಯೆ ಅವಿದ್ಯೆಯಾಗುತ್ತದೆ. ಅಂತಿಮಾರ್ಥದಲ್ಲಿ ಅವಿದ್ಯೆಯೆಂದರೆ ಚೇತನ ತತ್ತ್ವ ತನ್ನನ್ನು ತಾನು ಮಿತಿಗೊಳಿಸಿಕೊಳ್ಳುವ ಸಾಮರ್ಥ್ಯ. ಹೀಗೆ ವಿದ್ಯೆ–ಅವಿದ್ಯೆ, ಜಡ–ಚೇತನ, ಒಳಿತು–ಕೆಡುಕು, ಜ್ಞಾನ–ಅಜ್ಞಾನಗಳ ನಡುವೆ ಕೂಡಿಸಲಾಗದ ಕಂದಕವಿಲ್ಲ; ಅವು ಒಂದೇ ನಾಣ್ಯದ ಎರಡು ಮುಖಗಳು; ಸಾಮಾನ್ಯ ತಿಳುವಳಿಕೆಗೆ ಅವು ಪರಸ್ಪರ ವಿರುದ್ಧ ತತ್ತ್ವಗಳಂತೆ ಕಂಡುಬರುತ್ತವೆ; 'ಜ್ಞಾನಿ'ಯ ದೃಷ್ಟಿಯಲ್ಲಿ ಅವು ದ್ವಂದ್ವಗಳಲ್ಲ.

ಹೀಗೆ ಬ್ರಹ್ಮತತ್ತ್ವ ತಾನೇ ಜಡರೂಪವನ್ನು ಧರಿಸುತ್ತದೆ. ಇದೇ ಭಾವನೆಯನ್ನು 'ಅವತಾರ' ಕಲ್ಪನೆಯಲ್ಲಿಯೂ ಕಾಣಬಹುದು. ವಿಶ್ವದಲ್ಲಿ ಧರ್ಮಕ್ಕೆ ಗ್ಲಾನಿ ಬಂದಾಗ, ದೇವರು ಧರ್ಮ ಸಂಸ್ಥಾಪನೆಗೋಸ್ಕರ, ಮಾನವ ಶರೀರಧಾರಿಯಾಗಿ ಈ ಧರೆಗಿಳಿದು ಬರುತ್ತಾನೆಂದು ಸಾರುವ ಭಗವದ್ಗೀತೆಯನ್ನು ಶ್ರೀ ಅರವಿಂದರು ಉದಾಹರಿಸುತ್ತಾರೆ.

೭

ಈಗ ಜಡಾವಸ್ಥೆಯನ್ನು ತಳೆದಿರುವ ಬ್ರಹ್ಮತತ್ತ್ವ ಹಂತಹಂತವಾಗಿ ವಿಕಾಸ ಹೊಂದುತ್ತಾ ಹೇಗೆ ತನ್ನ ಮೊದಲಿನ ಸ್ಥಿತಿಯನ್ನು ತಲುಪುತ್ತದೆ ಎಂಬುದನ್ನು ವಿವರಿಸ

ಬಹುದು. ಜಡರೂಪವನ್ನು ಧರಿಸಿರುವ ಬ್ರಹ್ಮತತ್ತ್ವ, ತಾನೇ ಇಳಿದು ಬಂದ ಸ್ತರಗಳನ್ನು ಕ್ರಮಕ್ರಮವಾಗಿ ಹತ್ತುತ್ತಾ ಹೋಗುತ್ತದೆ. ಈ ಕ್ರಿಯೆಯಿಂದ ಜಡದ ಗರ್ಭದಲ್ಲಿ ಒತ್ತಡದಿಂದ ಅಗ್ನಿಯಂತಹ ಶಕ್ತಿಯುಂಟಾಗಿ ಜೀವತತ್ತ್ವ (ಪ್ರಾಣ) (Life) ಆವಿರ್ಭವಿಸುತ್ತದೆ. ಹೀಗೆ ಜಡದ ಮೊದಲ ಮೊಳಕೆಯೇ ಪ್ರಾಣ. ಅದು ಸಸ್ಯಗಳಲ್ಲಿ ಅಪ್ರಬುದ್ಧವಾಗಿರುತ್ತದೆ.

ತನ್ನ ಪರಿಮಿತ ಅಭಿವ್ಯಕ್ತಿಯೊಂದಿಗೆ ಅತೃಪ್ತಿ ಹೊಂದುವ ಬ್ರಹ್ಮತತ್ತ್ವ (ಚೇತನ) ಇನ್ನೂ ಮೇಲೇರಿ ಪ್ರಾಣಿ ಪ್ರಪಂಚವನ್ನು ತಲುಪಿ ಸ್ವತಂತ್ರವಾಗುತ್ತದೆ. ಈ ಸ್ಥಿತಿಯಲ್ಲಿ ಅದು ಶರೀರವನ್ನು ಧರಿಸಿ ಇಂದ್ರಿಯಗಳನ್ನು ಹೊಂದುತ್ತದೆ. ಮತ್ತೂ ಅತೃಪ್ತಿ ಹೊಂದುವ ಚೇತನ ತತ್ತ್ವ ಇನ್ನೂ ಮೇಲೇರಿ ಸ್ವಪ್ರಜ್ಞೆಯ ಮಾನಸ ಸ್ತರವನ್ನು ತಲುಪುತ್ತದೆ. ಚೇತನದ ಮುಂದಿನ ವಿಕಾಸವೇ ಅತಿಮಾನಸ ಅಥವಾ ಸುಪ್ರಮಾನಸ (Super Mind) ಹಂತ. ಮಾನಸ ಸ್ತರದಿಂದ ಚೇತನ ತತ್ತ್ವ ಉನ್ನತ (Higher Mind), ಜ್ಯೋತಿರ್ಮನ (Illumined Mind), ಸ್ವಯಂ ಸಾಕ್ಷಿಮನ (Intuitive Mind) ಮತ್ತು ಉತ್ತರೋತ್ತರ ಮನ (Over Mind)ಗಳ ಮೂಲಕ ಹಾಯ್ದು ಅತಿಮಾನಸ ಹಂತವನ್ನು ತಲುಪುತ್ತದೆ. ಜೀವಾತ್ಮ ವಿಶ್ವವಿಕಾಸದೊಡನೆಯೇ ತನ್ನ ಪ್ರಜ್ಞೆಯನ್ನು ವಿಕಸಿಸುತ್ತಾ ಮುನ್ನಡೆಯುತ್ತದೆ. ಈ ಹಾಯ್ದಾಟದಲ್ಲಿ ಮೂರು ಮುಖ್ಯ ಪರಿವರ್ತನೆಗಳಾಗುತ್ತವೆ: (i) ಮಾನಸಿಕ ಪರಿವರ್ತನೆ (psychic change) (ii) ಆಧ್ಯಾತ್ಮಿಕ ಪರಿವರ್ತನೆ (spiritual change) ಮತ್ತು ಅತಿಮಾನಸ ಪರಿವರ್ತನೆ (supra-mental change).

ಜೀವಾತ್ಮನ ಸುತ್ತಲೂ ಆವರಿಸಿರುವ ತಪ್ಪು ಕಲ್ಪನೆಯ ಮುಸುಕಿನ ನಿರ್ಮೂಲನವೇ ಮಾನಸಿಕ ಪರಿವರ್ತನೆಯೆನಿಸುವುದು. ಈ ಪರಿವರ್ತನೆಯನ್ನು ಸುಗಮವಾಗಿಸಲು ಭಾವನೆಗಳ ತರಬೇತಿ (training of emotions) ಅತ್ಯಾವಶ್ಯಕವೆಂದೂ ಅದನ್ನು ಯೋಗಮಾರ್ಗದಿಂದ ಸಾಧಿಸಬಹುದೆಂದೂ ಶ್ರೀ ಅರವಿಂದರು ಹೇಳುತ್ತಾರೆ.

ಆದರೆ ಮಾನಸಿಕ ಪರಿವರ್ತನೆಯಷ್ಟೇ ಸಾಲದು. ಅದನ್ನು ಆಧ್ಯಾತ್ಮಿಕ ಬದಲಾವಣೆಯಿಂದ ಪುಷ್ಟೀಕರಿಸಬೇಕು. ಮೇಲಿನ ಸ್ತರದಿಂದ ಉನ್ನತ ಬೆಳಕು ಕೆಳಗಿಳಿದು ಬರುವುದೇ ಆಧ್ಯಾತ್ಮಿಕ ಪರಿವರ್ತನೆಯೆನಿಸುವುದು. ಅದು ತನ್ನಷ್ಟಕ್ಕೆ ತಾನು ಇಳಿದು ಬರದಿದ್ದರೆ ಚೇತನ ಬಾಧಿತವಾಗುತ್ತದೆ: ಜೀವಾತ್ಮನ ಅಡೆತಡೆಗಳನ್ನು ಆಧ್ಯಾತ್ಮಿಕ ಬದಲಾವಣೆ ನಿವಾರಿಸುತ್ತದೆ. ಈ ಪರಿವರ್ತನೆ ಆದ ನಂತರ ಸಾಧಕ ಅನಂತ ಶಾಂತಿಯಿಂದ ಬೆಳಗುತ್ತಾನೆ; ಎಲ್ಲಾ ನೋಟಗಳಲ್ಲೂ ಆತ್ಮವನ್ನೇ ನೋಡುತ್ತಾನೆ; ಎಲ್ಲಾ ಶಬ್ದಗಳಲ್ಲೂ ಅದನ್ನೇ ಕೇಳುತ್ತಾನೆ; ಎಲ್ಲಾ ಸ್ಪರ್ಶಗಳಲ್ಲೂ ಅದನ್ನೇ ಮುಟ್ಟುತ್ತಾನೆ.13(a)

ಕೊನೆಯ ಪರಿವರ್ತನೆಯೇ ಅತಿಮಾನಸ ಬದಲಾವಣೆ. ಉನ್ನತ ಬೆಳಕು ಅತಿಮಾನಸಸ್ತರಕ್ಕೆ ಬಂದಿಳಿಯುವುದೇ ಅತಿಮಾನಸ ಪರಿವರ್ತನೆಯೆನಿಸುವುದು.

ಅಪ್ರಬುದ್ಧ ಚೇತನ ಪ್ರಬುದ್ಧವಾಗುವುದೇ ಅತಿಮಾನಸ ಪರಿವರ್ತನೆ. ಈ ಬದಲಾವಣೆ ಆದಮೇಲೆ ಜೀವಾತ್ಮ ಸಂಪೂರ್ಣವಾಗಿ ಪರಿವರ್ತಿತವಾಗಿ ಈ ಪೃಥ್ವಿಯ ಮೇಲೆ ದೇವರ ಸಾಮ್ರಾಜ್ಯ ಸ್ಥಾಪನೆಯಾಗುತ್ತದೆ. ಮಾನವ ಕುಲ ದೇವಮಾನವ ಕುಲವಾಗಿ ಪರಿವರ್ತಿತಗೊಳ್ಳುತ್ತದೆ. ಶ್ರೀ ಅರವಿಂದರ ಸ್ಪಷ್ಟಮಾತುಗಳಲ್ಲಿ : "This would be a real participation by the individual in the working of the universal-consciousness-Force ; the individual Purusha would become the master of his own executive energy, and at the same time a conscious partner, agent instrument of the cosmic-sprit in the working of the universal energy; the universal energy would work through him, but he also would work through her and the harmony of the intuitive truth would make this double working a single action"

ಆಧ್ಯಾತ್ಮಿಕ ಬಲ ಅವನ ಸರ್ವಸ್ವವಾಗುತ್ತದೆ ; ಅವನು ವಿಶ್ವಮಾನವನಾಗುತ್ತಾನೆ ; ವೀರಸಾಹಸಿಯೂ ವೈರಾಗ್ಯಮೂರ್ತಿಯೂ ಅಮೃತಪುತ್ರನೂ ಆಗುತ್ತಾನೆ. ಯಾವ ನೋವೂ ಅವನನ್ನು ಮುಟ್ಟುವುದಿಲ್ಲ. ಅನಂತಶಾಂತಿ ಅವನಲ್ಲಿ ನೆಲಸುತ್ತದೆ. ವೈವಿಧ್ಯತೆ ಮಾಯವಾಗುವುದಿಲ್ಲ ; ಆದರೆ ಅದು ಅವನಿಗೆ ಯಾವುದೇ ರೀತಿಯ ಸ್ಪರ್ಧೆ ಸೆಣಸಾಟ ಅಥವಾ ತೊಡಕನ್ನಾಗಲೀ ಉಂಟುಮಾಡುವುದಿಲ್ಲ. ಶ್ರೀ ಅರವಿಂದರ ಮಾತುಗಳನ್ನೇ ಉದ್ಧರಿಸುವುದಾದರೆ : "He will have the cosmic consciousness, sense, feeling, by which all objective life will become part of his subjective existence by which he will realise, perceive, feel, see, hear the Divine in all forms ; all forms and movements will be reali ed, sensed, seen, heard and felt as if taking place within his own vast self of being".

ಹೀಗೆ ಅರವಿಂದ ದರ್ಶನದಲ್ಲಿ ಆಧ್ಯಾತ್ಮಿಕ ಸಮೃದ್ಧಿ ಹೊಂದಲು, ತನ್ಮೂಲಕ ದಿವ್ಯಾನಂದವನ್ನು ಆಸ್ವಾದಿಸಲು ಜೀವಾತ್ಮನಿಗೆ ಸುವರ್ಣಾವಕಾಶವಿದೆ. ವಿಶ್ವದ ವಿಕಾಸದೊಡನೆಯೇ ಜೀವಾತ್ಮನೂ ತನ್ನ ಆಧ್ಯಾತ್ಮಿಕತೆಯನ್ನು ಕ್ರಮಾನುಕ್ರಮವಾಗಿ ವಿಕಸಿಸುತ್ತಾ ಅತಿಮಾನಸ ಸ್ತರದಲ್ಲಿ ಪೂರ್ಣ ವಿಕಾಸವನ್ನು ಹೊಂದುತ್ತಾನೆ. ವಿಶ್ವದ ಜಡಾವಸ್ಥೆಗೆ ಅನುಗುಣವಾಗಿ ಜೀವಾತ್ಮ ಭೌತಿಕ ಜೀವಿಯೆಂದೂ (physical being) ಜಡ ಪ್ರಾಣಾವಸ್ಥೆಯಾಗಿ ವಿಕಸಿತಗೊಂಡಾಗ ಜೈವಿಕ ಜೀವಿಯೆಂದೂ (vital being)

ಪ್ರಾಣ ಮನಸ್ಸಾಗಿ ಪರಿಣಾಮ ಹೊಂದಿದಾಗ ಮಾನಸಿಕ ಜೀವಿ (mental being) ಎಂಮೂ ಕರೆಸಿಕೊಳ್ಳುತ್ತಾನೆ. 15(a) ಮಾನಸಿಕ ಸ್ತರದಲ್ಲಿ ರಾಗದ್ವೇಷಗಳಿಗೆ ಆಶ್ರಯನೀಡಿ ಸಂಕುಚಿತ ಮನೋಧರ್ಮವನ್ನು ಹೊಂದುತ್ತಾನೆ. ವಿಶ್ವಕ್ಕೂ ತನಗೂ ಪರಸ್ಪರ ಭೇದ ವಿದೆಯೆಂದು ತಪ್ಪಾಗಿ ತಿಳಿಯುತ್ತಾನೆ. ವಿಶ್ವ ಕ್ರಮಕ್ರಮವಾಗಿ ಪರಿಣಾಮ ವನ್ನು ಹೊಂದಿ ಅತಿಮಾನಸಸ್ತರಕ್ಕೆ ಏರಿದಾಗ, ಜೀವಾತ್ಮ ತನ್ನ ಸ್ವಾರ್ಥ ಸಂಕುಚಿತ ದೃಷ್ಟಿಯಿಂದ ಹೊರಬಂದು ದೈವತ್ವಕ್ಕೆ ಏರಿ ಜ್ಯೋತಿಪುರುಷನಾಗುತ್ತಾನೆ. ಜ್ಯೋತಿ ಪಥವನ್ನು ತನ್ನ ಭ್ರಾತೃಜೀವಿಗಳಿಗೆ ತೋರಿಸಿ ಆಧ್ಯಾತ್ಮಿಕ ವಿಕಾಸದಲ್ಲಿ ಮಾರ್ಗದರ್ಶನ ನೀಡುತ್ತಾನೆ. ಹೀಗೆ ಜೀವಾತ್ಮ ಮಿತಿಯಿಂದ ಹೊರಬಂದು ತನ್ನ ಸಹಯೋಗಿ ಬ್ರಹ್ಮ ತತ್ತ್ವದ ಆನಂದೋತ್ಕರ್ಷದಲ್ಲಿ ಸಕ್ರಿಯವಾಗಿ ಭಾಗಿಯಾಗಿ ಅನಂತ ಆತ್ಮಶಕ್ತಿಯಿಂದ ಬೆಳಗುತ್ತಾನೆ.

೮

ಈಗ ಶ್ರೀ ಅರವಿಂದರ ವಿಕಾಸವಾದದ ಪ್ರಮುಖ ಲಕ್ಷಣಗಳನ್ನು ವಿಶದಪಡಿಸ ಬಹುದು. ಪಾಶ್ಚಾತ್ಯ ತಾತ್ತ್ವಿಕ ವಿಕಾಸ ವಾದಗಳಿಗೆ ಹೋಲಿಸಿದಾಗ ಶ್ರೀ ಅರವಿಂದರ ವಿಕಾಸವಾದ ಈ ಕೆಳಗಿನ ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ ಎನ್ನಬಹುದು ; (i) 'ಹಿಗ್ಗು ವಿಕೆ' [widening] (ii) 'ಸತತ ಏರುವಿಕೆ' [Heightening] ಮತ್ತು (iii) 'ಸಮನ್ವಯ' [Integration]. 'ಹಿಗ್ಗುವಿಕೆ'ಯೆಂದರೆ ಯೋಜಿತಕ್ರಮ, ವಿವಿಧ ಅಭಿವ್ಯಕ್ತಿ ಹಾಗೂ ಪರಿಸರಕ್ಕೆ ಹೊಂದುಕೊಳ್ಳುವಿಕೆ ಎಂದರ್ಥ. ಶ್ರೀ ಅರವಿಂದರ ಪ್ರಕಾರ ವಿಕಾಸವೆಂದರೆ, ಪಾಶ್ಚಾತ್ಯ ತಾತ್ತ್ವಿಕ ಬರ್ಗ್ಸನ್ ಹೇಳುವಂತೆ ಶೂನ್ಯದಿಂದ ಹಂತಹಂತವಾಗಿ ಹೊಸ ಹೊಸ ವಸ್ತುಗಳು ಹಾಗೂ ಮೌಲ್ಯಗಳು ಹೊರಬರುವುದು ಎಂದಲ್ಲ. ತನ್ನ ಸ್ವಇಚ್ಛೆಯಿಂದ ಬ್ರಹ್ಮತತ್ತ್ವ ಜಡರೂಪವನ್ನು ಧರಿಸಿ ಕ್ರಮೇಣ ಸೋಪಾನಕ್ರಮದಲ್ಲಿ ವಿಕಸಿಸುತ್ತಾ ಸಚ್ಚಿದಾನಂದ ಸ್ವರೂಪವನ್ನು ತಲುಪುವುದೇ ವಿಕಾಸ. ಜಡ ತನ್ನನ್ನು ತಾನು ಯೋಜಿತಗೊಳಿಸಿಕೊಂಡಾಗ ಅದರಿಂದ ಪ್ರಾಣತತ್ತ್ವ ಹೊರ ಬರುತ್ತದೆ. ಪ್ರಾಣತತ್ತ್ವ ಸಂಕೀರ್ಣವಾದಾಗ ಮನಸ್ಸು ಆವಿರ್ಭವಿಸುತ್ತದೆ. ಇದನ್ನೇ ಅರವಿಂದ ದರ್ಶನ 'ಹಿಗ್ಗುವಿಕೆ' ಎಂದು ಕರೆಯುವುದು.

'ಹಿಗ್ಗುವಿಕೆ'ಯ ಜೊತೆಜೊತೆಯಲ್ಲಿಯೇ 'ಸತತ ಏರುವಿಕೆ' ಮುಂದುವರಿಯುತ್ತದೆ. 'ಸತತ ಏರುವಿಕೆ' ಎಂದರೆ ಕೆಳಗಿನ ಸ್ತರದಿಂದ ಸತತವಾಗಿ ಮೇಲುಮೇಲಿನ ಸ್ತರಗಳಿಗೆ ಪ್ರಜ್ಞೆ ವಿಕಸಿಸುತ್ತಾ ಹೋಗುವುದು. ವಿಕಾಸದ ಮೂರನೆಯ ಮುಖ್ಯವಾದ ಲಕ್ಷಣ, ಸಮನ್ವಯ. ಸಮನ್ವಯ ಎಂದರೆ ಪ್ರಜ್ಞೆ ಕೆಳಗಿನ ಸ್ತರದಿಂದ ವಿಕಾಸಹೊಂದಿ ಮೇಲಿನ ಸ್ತರಕ್ಕೆ ಹೋದಾಗ, ಕೆಳಗಿನ ಸ್ತರ ನಶಿಸಿ ಹೋಗುವುದಿಲ್ಲ ; ತನ್ನ ಅಸ್ತಿತ್ವವನ್ನು ಕಳೆದು ಕೊಳ್ಳುವುದಿಲ್ಲ ; ಕೆಳಗಿನ ಸ್ತರ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳದೆ ಉದಾತ್ತೀಕರಿಸಲ್ಪ ಡುತ್ತದೆ. ಉದಾಹರಣೆಗೆ ಜಡ ಪ್ರಾಣವಾಗಿ ವಿಕಾಸ ಹೊಂದಿದಾಗ, ಜಡ ನಾಶವಾಗು

ವುದಿಲ್ಲ ; ಪ್ರಾಣವಾಗಿ ಉದಾತ್ತೀಕರಿಸಲ್ಪಡುತ್ತದೆ ಅಷ್ಟೆ. ಹಾಗೆಯೇ ಪ್ರಾಣ ಮನಸ್ಸಾಗಿ ಪರಿಣಾಮ ಹೊಂದಿದಾಗ, ಪ್ರಾಣ ಇಲ್ಲವಾಗುವುದಿಲ್ಲ. ಹೀಗೆ ಕೆಳಗಿನ ಸ್ತರ ತುಚ್ಛೀಕರಿಸುವಂಥದ್ದಲ್ಲ. ಶ್ರೀ ಅರವಿಂದರ ವಿಕಾಸವಾದದ ಈ ಅಂಶ, ಬಹುತೇಕ ಎಲ್ಲಾ ಪಾಶ್ಚಾತ್ಯ ವಿಕಾಸ ವಾದಗಳಲ್ಲಿ ಕಾಣಸಿಗುವುದಿಲ್ಲ. ಪ್ರಸಿದ್ಧ ಫ್ರೆಂಚ್ ತಾತ್ತ್ವಿಕ ವಿಕಾಸವಾದಿಯಾದ ಬರ್ಗ್ಸನ್‌ನ ಪ್ರಕಾರ ಕೆಳಗಿನ ಸ್ತರ ಮೇಲಿನ ಸ್ತರವಾಗಿ ವಿಕಾಸ ಹೊಂದಿದಾಗ ಕೆಳಗಿನ ಸ್ತರ ಇಲ್ಲವಾಗುತ್ತವೆ ; ಕೆಳಗಿನ ಸ್ತರ ನಾಶವಾದ ಮೇಲೆಯೇ ಮೇಲಿನ ಸ್ತರ ಹೊರಬರುವುದು, ಎಂದು ಅವನು ಹೇಳುತ್ತಾನೆ. ಉದಾತ್ತ ತತ್ತ್ವವಾದ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಕೆಳಗಿನ ಸ್ತರವಾದ ಅನಾತ್ಮವನ್ನು ತ್ಯಜಿಸಬೇಕೆಂದು ಪ್ರತಿಪಾದಿಸುವ ಅದ್ವೈತ ದರ್ಶನವೂ ಇದಕ್ಕೆ ಹೊರತಾಗಿಲ್ಲವೆಂದು ಅರವಿಂದ ದರ್ಶನ ಅಭಿಪ್ರಾಯಪಡುತ್ತದೆ.

೯

ಸಮಕಾಲೀನ ಪಾಶ್ಚಾತ್ಯ ಚಿಂತನೆಯಲ್ಲಿ ವಿಕಾಸವಾದವನ್ನು ಮಾರ್ಗನ್, ಬರ್ಗ್‌ಸನ್, ಅಲೆಕ್ಸಾಂಡರ್—ಇವರು ಪ್ರತಿಪಾದಿಸಿ ಪ್ರಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಮಾರ್ಗನ್‌ನ ಪ್ರಕಾರ ಈ ವಿಶ್ವ ಜಡ, ಪ್ರಾಣ ಮತ್ತು ಮನಸ್ಸು—ಈ ಸ್ತರಗಳಿಂದ ಕೂಡಿದೆ ; ಒಂದು ಇನ್ನೊಂದರಿಂದ ಅನುಕ್ರಮವಾಗಿ ಹೊರಬರುತ್ತದೆ. ಮನಸ್ಸೇ ವಿಕಾಸಕ್ರಮದಲ್ಲಿ ಅತ್ಯುನ್ನತಮಟ್ಟದ್ದು. ಆದರೆ ಪ್ರಾಣ, ಜಡದಲ್ಲಿ ಆಗಲೇ ಸುಪ್ತವಾಗಿ ಅಡಗಿಲ್ಲ ; ಅದು 'ಅಕಸ್ಮಾತ್' ಪ್ರಾಣದಿಂದ ಹೊರಬರುತ್ತದೆ. ಹಾಗೆಯೇ ಮನಸ್ಸು ಪ್ರಾಣದಿಂದ 'ಅಕಸ್ಮಾತ್' ಹೊರಬರುತ್ತದೆ. ದೇವರ ಮಾರ್ಗದರ್ಶನದಲ್ಲಿ ವಿಕಾಸ ಮುಂದುವರಿಯುತ್ತದೆಂದು ಮಾರ್ಗನ್ ಹೇಳುತ್ತಾನೆ.

ಹಾಗೆಯೇ ಅಲೆಕ್ಸಾಂಡರ್, ಸ್ಪೇಸ್-ಟೈಮ್-ಮ್ಯಾಟ್ರಿಕ್ಸ್ [space-time-matrix] ನಿಂದ ಜಡ, ಜಡದಿಂದ ಪ್ರಾಣ, ಪ್ರಾಣದಿಂದ ಮನಸ್ಸು, ಮನಸ್ಸಿನಿಂದ ಆತ್ಮ, ಕೊನೆಗೆ ದೇವರು ಹೊರಬರುತ್ತವೆ. ಈ ವಿಕಾಸಕ್ಕೆ 'ನೀಸಸ್' [Nisus] ಎಂಬ ಪ್ರೇರಕಶಕ್ತಿಯೇ ಕಾರಣ ಎಂದು ಅಲೆಕ್ಸಾಂಡರ್ ಹೇಳುತ್ತಾನೆ. ಅವನ ಪ್ರಕಾರ ವಿಕಾಸದ ಅಂತಿಮ ಅವಸ್ಥೆ ಮನಸ್ಸಲ್ಲ, ದೇವರು. ಇಡೀ ವಿಕಾಸ, ಸುಪ್ತವಾಗಿರುವ ದೈವೀತತ್ತ್ವ ಸಾಕ್ಷಾತ್ಕೃತವಾಗುವವರೆಗೂ ಮುಂದುವರಿಯುತ್ತದೆ.

ಬರ್ಗ್‌ಸನ್‌ನ ತಾತ್ತ್ವಿಕ ಚಿಂತನೆಯನ್ನು ಜೈವಿಕವಾದ [Vitalism] ಎಂದು ಕರೆಯಲಾಗಿದೆ. ಅವನ ಪ್ರಕಾರ ಪ್ರಾಣ ಇಡೀ ವಿಶ್ವ ವಿಕಾಸದ ಆಧಾರ. ಅದನ್ನು ಅವನು 'Elan vital' ಎಂದು ಕರೆಯುತ್ತಾನೆ ಅದರಿಂದ ಜಡ, ಜಡದಿಂದ ಮನಸ್ಸು ಹೊರಬರುತ್ತವೆ. ಹೊರಬರುವ ಪ್ರತಿಯೊಂದೂ ಅಚ್ಚ ಹೊಸದು, ಹಿಂದೆ ಕಾಣದ್ದು, ಅನೂಹ್ಯವಾದುದು ಎಂದು ಬರ್ಗ್‌ಸನ್ ಪ್ರತಿಪಾದಿಸುತ್ತಾನೆ.

ಜರ್ಮನ್ ತಾತ್ತ್ವಿಕ ಹೆಗಲ್‌ನಲ್ಲಿಯೂ ಒಂದು ವಿಧದ ವಿಕಾಸವಾದವಿದೆ. ಆದರೆ ಅದು ಪೂರ್ವ ನಿರ್ಧರಿತ ವಿಕಾಸವಾದ. ಇವನ ಪ್ರಕಾರವೂ ಮನಸ್ಸೇ ವಿಶ್ವ ವಿಕಸದ ಅತ್ಯುನ್ನತ ಸ್ತರ. ಶ್ರೀ ಅರವಿಂದರ ವಿಕಾಸವಾದದಲ್ಲಿಯಂತೆ ಅವನ ವಿಕಾಸ ವಾದದಲ್ಲಿ ವೈವಿಧ್ಯತೆ ವೈಚಿತ್ರ್ಯಕ್ಕೆ ಸ್ಥಳವಿದ್ದರೂ ಅವು ನಿತ್ಯಸತ್ಯಗಳಲ್ಲ ಎಂದು ಹೆಗಲ್ ಹೇಳುತ್ತಾನೆ. ಹೆಗಲ್‌ನ ದೃಷ್ಟಿ ತಾರ್ಕಿಕವಾದುದು; ಅಲ್ಲಿ ಆಧ್ಯಾತ್ಮಿಕತೆಯ ಅಭಾವವಿದೆ.

ಒಟ್ಟಾರೆ, ಪಾಶ್ಚಾತ್ಯ ತಾತ್ತ್ವಿಕ ವಿಕಾಸ ವಾದಗಳಲ್ಲಿ ಆಧ್ಯಾತ್ಮಿಕ ಕೊರತೆಯನ್ನು ಕಾಣಬಹುದು. ಅವು ಪ್ರಧಾನತಃ ಕಲ್ಪನಾವಿಷಯಕ [conceptual] ಗಳಾಗಿವೆ. ಕೆಲವು ತಾತ್ತ್ವಿಕ ವಿಕಾಸವಾದಗಳ ಪ್ರಕಾರ ವಿಶ್ವ ವಿಕಾಸ ಆಕಸ್ಮಿಕ, ಯದ್ವಾತದ್ವಾ; ವಿವೃತಿ (involution) ವಿಶ್ವ ವಿಕಾಸದ ಬೆನ್ನೆಲುಬು ಎಂಬ ಶ್ರೀ ಅರವಿಂದರ ನಿಲುವು ಅವುಗಳಿಗೆ ಹೊಸದು; ಮನಸ್ಸು ಒಹುತೇಕ ಪಾಶ್ಚಾತ್ಯ ವಿಕಾಸ ವಾದಗಳ ಪ್ರಕಾರ ವಿಶ್ವ ವಿಕಾಸದ ಅಂತಿಮಘಟ್ಟ; ಅತ್ಯುನ್ನತ ತತ್ತ್ವ. ಆದರೆ ಶ್ರೀ ಅರವಿಂದರ ಪ್ರಕಾರ ಮನಃಪ್ರಧಾನವಾದ ಮಾನವನೇ ವಿಶ್ವ ವಿಕಾಸದ ಅಂತಿಮ ಸ್ತರವಲ್ಲ; ಅದ ರಿಂದಾಚೆ ಅತಿಮಾನಸ ಸ್ತರವುಂಟು; ಅದನ್ನು ತಲುಪಿದವರು ಅತುಲ ಶಕ್ತಿವಂತರೂ, ಜಾಗೃತರೂ, ಚಿಮ್ಮುವ ಆಶಾವಾದಿಗಳೂ, ಶಾಂತಿಪ್ರಿಯರೂ, ಪ್ರೇಮ ಸ್ವರೂಪರೂ, ದೇವಮಾನವರೂ ಆಗಿದ್ದು ಪೃಥ್ವಿಯ ಮೇಲಿನ ಜೀವನವನ್ನು ದಿವ್ಯವೂ ಆನಂದ ಮಯವೂ ಆಗುವಂತೆ ಮಾಡುತ್ತಾರೆ. ಸೃಷ್ಟಿಯ ಅಥವಾ ವಿಶ್ವ ವಿಕಾಸದ ಉದ್ದೇಶವೇ ಅಂತಹ ಅತಿಮಾನಸರನ್ನು ಸೃಜಿಸುವುದು ಎಂದು ಅರವಿಂದ ದರ್ಶನ ಸಾರುತ್ತದೆ.

೧೦

ಈಗ ಮಾನವನು ದೇವಮಾನವನಾಗಲು ಅನುಷ್ಠಿಸಬೇಕಾದ ಮಾರ್ಗವನ್ನು ಕುರಿತು ಚರ್ಚಿಸಬಹುದು. ಆ ಮಾರ್ಗವೇ ಯೋಗ. ಯೋಗ ಎಂಬ ಹೆಸರಿನ ಅನೇಕ ಮಾರ್ಗಗಳುಂಟು. ಉದಾಹರಣೆಗೆ ಹಠಯೋಗ, ರಾಜಯೋಗ, ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಇತ್ಯಾದಿ, ಹಠಯೋಗದ ಮುಖ್ಯ ಗುರಿ ದೇಹದ ಶಕ್ತಿ ಸಂವರ್ಧನೆ ಹಾಗೂ ರೋಗವಿದೂರತೆ.

ಹಾಗೆಯೇ ಮನಸ್ಸನ್ನು ಹತೋಟಿಯಲ್ಲಿಡುವುದು ರಾಜಯೋಗದ ಗುರಿ. ಚಂಚಲ ವಾದ ಮನಸ್ಸನ್ನು ಹಿಡಿದು ಏಕಾಗ್ರಮಾಡಿ ಭಗವಂತನ ಮೇಲೆ ಕೇಂದ್ರೀಕರಿಸುವುದು. ಒಟ್ಟಿನಲ್ಲಿ ಚಿತ್ತವೃತ್ತಿ ನಿರೋಧವೇ ಅದರ ಗುರಿ, ಅದನ್ನು ಯಮ, ನಿಯಮ, ಅಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಮತ್ತು ಸಮಾಧಿ ಎಂಬ ಅಷ್ಟಾಂಗ ಗಳನ್ನು ಅನುಷ್ಠಾನ ಮಾಡುವುದರ ಮೂಲಕ ಸಾಧಿಸಬಹುದು.

ಕರ್ಮ, ಜ್ಞಾನ, ಭಕ್ತಿಯೋಗಗಳು ಮಾನವರ ಗುಣಸ್ವಭಾವಕ್ಕನುಗುಣವಾಗಿ ದೇವರೆಡೆಗೆ ಕೊಂಡೊಯ್ಯುವ ಮಾರ್ಗಗಳು. ಕರ್ಮಫಲ ತ್ಯಾಗದಮೂಲಕ, ಅಂದರೆ

ನಿಷ್ಕಾಮಕರ್ಮವನ್ನು ಮಾಡುತ್ತಾ ಭಗವಂತನನ್ನು ಸೇರುವುದೇ ಕರ್ಮಯೋಗ. ಹರಿತ ಬುದ್ಧಿಯು ವಿಚಾರದ ಮೂಲಕ ವಿಶ್ಲೇಷಿಸಿ, ಎಲ್ಲ ಭಾವನೆಗಳನ್ನೂ ದೇವರೆಡೆಗೆ ಕೇಂದ್ರೀಕರಿಸುವುದು ಜ್ಞಾನಯೋಗವೆನಿಸುವುದು. ಹಾಗೆಯೇ ಸಮರ್ಪಣಭಾವದಿಂದ, ಸಂಪೂರ್ಣ ಶರಣಾಗತಿಯಿಂದ ನೈಚ್ಯಾನುಸಂಧಾನಗಳಿಂದ, ಪ್ರೇಮಾತಿಶಯದಿಂದ ಪ್ರೇಮಸ್ವರೂಪಿಯಾದ ಭಗವಂತನನ್ನು ಸೇರುವುದು ಭಕ್ತಿಯೋಗವೆನಿಸುವುದು.

ಶ್ರೀ ಅರವಿಂದರು ಈ ಎಲ್ಲ ಯೋಗಗಳ ಗುಣಾಂಶಗಳನ್ನು ಒಳಗೊಂಡಂತೆ ತಮ್ಮ ಯೋಗ ಕಲ್ಪನೆಯನ್ನು ಮುಂದಿಟ್ಟಿದ್ದಾರೆ. ಅದನ್ನು 'ಸಮಗ್ರಯೋಗ' ಅಥವಾ 'ಪೂರ್ಣಯೋಗ' ಎಂದು ಕರೆಯಲಾಗಿದೆ. ಅವರ ಪ್ರಕಾರ ಯೋಗ ಪ್ರಧಾನತಃ ಅನುಷ್ಠಾನ ಯೋಗ್ಯವಾದುದು, ಕೇವಲ ವಿಚಾರ ಮಟ್ಟದಲ್ಲಿ ನಿಲ್ಲುವಂಥಾದ್ದಲ್ಲ. ಮಾನವ ಶರೀರ ಪ್ರಾಣ ಮನಸ್ಸುಗಳಲ್ಲಿ ಸಂಕುಚಿತಗೊಂಡಿರುವ ಚೇತನದ ವಿಕಾಸವೇ ಯೋಗವೆನಿಸುವುದು. ಅದು ಸಾಧಕನಿಂದ ಸರ್ವ ಸಮರ್ಪಣಭಾವವನ್ನು ನಿರೀಕ್ಷಿಸುತ್ತದೆ. ಅದರ ಅನುಷ್ಠಾನದಿಂದ ಅತಿಮಾನಸ ಮಾನವಸ್ತರಕ್ಕಿಳಿದು ಬಂದು ಮಾನಸದ ದೋಷ ದೌರ್ಬಲ್ಯ ಕಲ್ಮಶಗಳನ್ನು ನಿವಾರಿಸಿ ದೇವಮಾನವನನ್ನಾಗಿ ಮಾರ್ಪಡಿಸುವುದರ ಮೂಲಕ ದೈವೀಸ್ವರೂಪದ ಆನಂದವನ್ನು ಸಾಧಕ ಆಸ್ವಾದಿಸುವಂತೆ ಮಾಡುತ್ತದೆ. ಶರೀರ, ಪ್ರಾಣ ಮನಸ್ಸು ಮುಂತಾದವುಗಳು ಮಾಯವಾಗಿ ಹೋಗದೆ ಅತಿಮಾನಸ ಸ್ತರಕ್ಕೆ ಎತ್ತಲ್ಪಡುವಂತೆ ಮಾಡುವ ಸಾಧನವೇ ಯೋಗ. ಹೀಗೆ ಪ್ರಜ್ಞಾಶೀಲ ವಿಕಾಸವೇ ಯೋಗವೆನಿಸುವುದು. ಅದೊಂದು ಆಧ್ಯಾತ್ಮಿಕ ಶಿಸ್ತು ಮತ್ತು ಸಿದ್ಧಿ.

ಶ್ರೀ ಅರವಿಂದರದು ಪೂರ್ಣಯೋಗದ ಭವ್ಯಕಲ್ಪನೆ. ಯೋಗವೆಂದರೆ ಶರೀರ, ಪ್ರಾಣ, ಮನಸ್ಸು, ಪ್ರಕೃತಿಗಳಿಂದ ಬಿಡುಗಡೆಹೊಂದಿ ಚೇತನ ತಾನೇ ತಾನಾಗುವುದು ಎಂಬ ಪಾತಂಜಲಿ ಯೋಗದರ್ಶನದ ನಿಲುವನ್ನು ಶ್ರೀ ಅರವಿಂದರು ಒಪ್ಪುವುದಿಲ್ಲ. ಈಗಾಗಲೇ ಚರ್ಚಿಸಿದಂತೆ ಸಾಧಕ ಪ್ರಕೃತಿ (ಶರೀರ, ಪ್ರಾಣ, ಮನಸ್ಸು ಇತ್ಯಾದಿ) ಯಿಂದ ಬಿಡುಗಡೆ ಹೊಂದುವ ಪ್ರಮೇಯವೇ ಅರವಿಂದ ದರ್ಶನದಲ್ಲಿ ಏಳುವುದಿಲ್ಲ. ಅದು ಉನ್ನತಸ್ತರಕ್ಕೇರಿ ಉದಾತ್ತೀಕರಿಸಲ್ಪಡುತ್ತದೆ ಅಷ್ಟೆ. ಪ್ರಕೃತಿ ಚೈತನ್ಯದ ಮೇಲು ಹೊದಿಕೆ ಎಂದು ಅನುಭವದಿಂದ ತಿಳಿದು, ಪ್ರಕೃತಿಯಲ್ಲಿ ಗಟ್ಟಿಯಾಗಿ ನಿಂತು, ತನ್ನಲ್ಲಿ ಹಾಗೂ ಪ್ರಕೃತಿಯಲ್ಲಿ ಅಂತರ್ಯಾಮಿಯಾಗಿ ನೆಲಸಿರುವ ಸಚ್ಚಿದಾನಂದವನ್ನು ಅನುಭವಿಸಿ ದಿವ್ಯಜೀವನಕ್ಕೇರುವುದೇ ಯೋಗ. ಇಡೀ ಜೀವನವೇ ಪ್ರಕೃತಿ ನಡೆಸುವ ಯೋಗವೆಂದು ಅರವಿಂದರು ಮನೋಜ್ಞವಾಗಿ ಹೇಳುತ್ತಾರೆ. ಯೋಗವೆಂದರೆ ಸಾಧಕ ಭಗವಂತನಿಗೆ ಸಂಪೂರ್ಣ ಶರಣಾಗತನಾಗಿ, ತನ್ನ ಸರ್ವಸ್ವವನ್ನೂ ಅವನಿಗರ್ಪಿಸುವುದು. ಸಾಧಕ ಹಾಗೆ ಮಾಡಿದಾಗ ಪ್ರಸಾದರೂಪವಾಗಿ ದೈವೀಶಕ್ತಿಯೇ ಉದಯಿಸಿ, ಮುಂದೆ ನಿಂತು ಸಾಧಕನ ಕೈಹಿಡಿದು ನಡೆಸುತ್ತದೆ. ಪುರುಷಪ್ರಯತ್ನದ ಜೊತೆಗೆ, ದೈವೀಕೃಪೆ ಅತ್ಯಂತ ಅವಶ್ಯಕ ಎಂದು ಶ್ರೀ ಅರವಿಂದರು ಹೇಳುತ್ತಾರೆ. ಈ ದೈವೀಕೃಪೆಯನ್ನೇ ಅವರು 'ಮಾತಾ' (Divine Mother) ಎಂದು ಕರೆಯುವುದು. ಹೀಗೆ ದೈವೀ

ಶಕ್ತಿಯೊಂದಿಗೆ ಹೊಂದಿಕೊಂಡಿರುವುದು, ಆಕೆಯ ಸಂಕಲ್ಪಕ್ಕೆ ಓಗೊಡುವುದು ಯೋಗ ಎಂದು ಶ್ರೀ ಅರವಿಂದರು ಅಭಿಪ್ರಾಯಪಡುತ್ತಾರೆ. ಇಲ್ಲಿ ಅಂಧಶ್ರದ್ಧೆಗಾಗಲೀ, ಕಂದಾಚಾರಕ್ಕಾಗಲೀ ಎಳ್ಳಷ್ಟೂ ಸ್ಥಳವಿಲ್ಲ. ಅಭೀಪ್ಸೆಯೇ ಸಾಧಕನನ್ನು ಯೋಗ ಮಾರ್ಗದಲ್ಲಿ ಮುನ್ನೆಡಸುವ ಶಕ್ತಿ.

ಶ್ರೀ ಅರವಿಂದರ ಪೂರ್ಣಯೋಗದ ಗುರಿ ಸಮಸ್ತ ಮಾನವ ಕುಲದ ಲೌಕಿಕ ಹಾಗೂ ಅಲೌಕಿಕ ಮೋಕ್ಷ. ಅದು ಪೂರ್ಣಯೋಗ ಎನಿಸಿಕೊಳ್ಳುವುದು ಅದರ ಗುಣಾಂಶದಿಂದ ; ಜಡ ಮತ್ತು ಚೇತನ ಒಂದೇ ನಾಣ್ಯದ ಎರಡು ಮುಖಗಳಾದುದರಿಂದ ಎರಡರ ಸಮನ್ವಯ ಅತ್ಯಾವಶ್ಯಕ ಎಂದು ಪ್ರತಿಪಾದಿಸುವುದರಿಂದ. ಅರವಿಂದದರ್ಶನ ಏನನ್ನೂ ತಿರಸ್ಕರಿಸುವುದಿಲ್ಲ, ಎಲ್ಲವನ್ನೂ ಭಗವತ್ಕೃಪೆ ಎಂದು ಒಪ್ಪಿ ಸಮನ್ವಯಮಾಡಲು ಮುಂದುವರಿಯುತ್ತದೆ. ಇಲ್ಲಿ ಮುಕ್ತಿಯನ್ನು ಪಡೆಯುವುದೆಂದರೆ ದೇಹ, ಪ್ರಾಣ, ಮನಸ್ಸುಗಳನ್ನು ಅತಿಮಾನಸಮನನಾಗಿ ಪರಿವರ್ತಿಸುವುದು. ಅವರ ಮಾತುಗಳಲ್ಲಿ ಹೇಳುವುದಾದರೆ : "ಯೋಗದ ಉದ್ದೇಶವೇ ಭಗವಂತನ ದಿವ್ಯ ಸಾನಿಧ್ಯವನ್ನು ಪಡೆಯುವುದು. ಭಗವಂತನಿಗಾಗಿ ಭಗವಂತನಲ್ಲಿ ಪ್ರೀತಿ ಮಾಡುವುದು. ತನ್ನತನವನ್ನು ಭಗವಂತನ ಸಂಕಲ್ಪದಲ್ಲಿ ಲಯವಾಡಿ ಸಮತ್ವವನ್ನು ಸಾಧಿಸುವುದು. ಭಗವಂತನ ಕೈಗೊಂಬೆಯಾಗಿ ಬಿಡುವುದು ....ಯೋಗದಿಂದ ಮೋಕ್ಷ ಲಭಿಸುತ್ತದೆ, ಅನ್ಯಸಿದ್ಧಿಗಳೂ ಲಭಿಸುತ್ತವೆ ನಿಜ. ಇವೆಲ್ಲವೂ ಯೋಗಿಯನ್ನು ಆಕರ್ಷಿಸಬಾರದು, ಭಗವಂತನಿಗಾಗಿ ಭಗವಂತನನ್ನು ಪ್ರೀತಿಸಬೇಕು. ಇದೇ ನಿಜವಾದ ಯೋಗ. "[16]

ಹೀಗೆ ಅರವಿಂದ ದರ್ಶನವನ್ನು ಪೂರ್ಣಬ್ರಹ್ಮವಾದ ಎಂದು ಕರೆಯಬಹುದು. ಅದರ ಧರ್ಮ ವಿಶ್ವಧರ್ಮ, ದೃಷ್ಟಿ ಪೂರ್ಣದೃಷ್ಟಿ, ಅವರ ಗುರಿ ದೈವೀ ಸ್ವರೂಪದ ಸಾಕ್ಷಾತ್ಕಾರ, ಸರ್ವೋದಯ. ಅವರ ಮಾರ್ಗ ಪೂರ್ಣಯೋಗ.

ಅಡಿ ಟಿಪ್ಪಣಿಗಳು

1 ನೋಡಿ : ಶ್ರೀ ಅರವಿಂದರ 'The Life Divine' (Sri Aurobindo Ashram, Pondicherry, 1960) ಪು. 7

2 ಅದೇ, ಪು. 13

2(a) ಅದೇ ಪು. 383

2(b) ಅದೇ ಪು. 383

2(c) ಅದೇ ಪು. 405

2(d) ಅದೇ ಪು. 438

2(e) ಅದೇ ಪು. 406
3 ಅದೇ, ಪು. 787. ಒತ್ತು ನನ್ನದು
4 ಅದೇ, ಪು. 109, 120
5 ಅದೇ, ಪು. 94
6 ಅದೇ, ಪು. 40
7 ಅದೇ, ಪು. 38
8 ಅದೇ, ಪು. 421
9 ಅದೇ, ಪು. 404
10 ಅದೇ, ಪು. 98
11 ಅದೇ, ಪು. 786
12 ಅದೇ, ಪು. 4
13 ಅದೇ, ಪು. 434
13(a) ಅದೇ, ಪು. 1088
14 ಅದೇ, ಪು. 1100
15 ಅದೇ, ಪು. 1165
15(a) ಅದೇ, ಪು. 416
16 ಅರವಿಂದ ದರ್ಶನ (ಬೆಂಗಳೂರು ವಿಶ್ವವಿದ್ಯಾನಿಲಯ, 1975) ಪು. 73

ಜೀವನವೆಲ್ಲಾ ಒಂದು ರೀತಿಯ ಯೋಗ, ವಿಶ್ವಪ್ರಕೃತಿಯೇ ಮಹಾ ಯೋಗದಲ್ಲಿ ತನ್ಮಯವಾಗಿದೆ. ಕೇವಲ ಪ್ರಕೃತಿಗೆ ಬಿಟ್ಟರೆ, ಸಹಸ್ರಾರು ವರ್ಷಗಳಲ್ಲಾಗಬೇಕಾದ ಕಾರ್ಯವನ್ನು ಒಂದೇ ಜೀವನದಲ್ಲಿ ಸಾಧಿಸುವುದು ಯೋಗ. ಯೋಗದಲ್ಲಿ ಪ್ರಕೃತಿ, ಮಾನವ, ಆತ್ಮ, ಭಗವಂತ – ಈ ಶಕ್ತಿಗಳ ವಿಕಸನವಾಗುತ್ತದೆ. ಎಲ್ಲ ಶಾಸ್ತ್ರಗಳು ಜ್ಞಾನದ ಅಂಶ. ಯೋಗಿ ಶಾಸ್ತ್ರಗ್ರಂಥಗಳ ನೆರವಿನಿಂದ ಯುಕ್ತಮಾರ್ಗದಲ್ಲಿ ಮುನ್ನಡೆದು ಅನಂತಜ್ಞಾನವನ್ನೇ ಸಾಧಿಸಲು ಹಾರೈಸುತ್ತಾನೆ. ಭಗವಂತನ ಕೃಪೆಗೆ, ಸಾಕ್ಷಾತ್ಕಾರಕ್ಕೆ ಅಭೀಪ್ಸೆಯೇ ಕ್ರತುಶಕ್ತಿ. ಅದನ್ನು ಕುಗ್ಗದಂತೆ ರಕ್ಷಿಸುವ ಶಕ್ತಿ ಉತ್ಸಾಹ, ಯೋಗದಲ್ಲಿ ಮಾರ್ಗದರ್ಶಕನಾಗುವವ, ಹೃದಯದಲ್ಲಿ ಸ್ಥಿತನಾಗಿರುವ ಗುರು ಲಭಿಸಲು ಕಾಲ ಬೇಕು. ಈ ಕಾಯುವ ಕೆಲಸ ಕಠೋರವಾಗಿ ಕಾಣಬಹುದು. ಸಮನ್ವಯ ದೃಷ್ಟಿಯ ಯೋಗಸಾಧಕನಿಗೆ ಹುಟ್ಟುಸಾವುಗಳು ಆತ್ಮಯಾತ್ರಾಪಥದಲ್ಲಿರುವ ನಿಲ್ದಾಣಗಳು.

(ಉದ್ಧೃತ – ಕನ್ನಡ ವಿಶ್ವಕೋಶ – ಸಂಪುಟ ೧, ಪು. ೪೬೩)

ಎಚ್. ಎಂ. ನಾಗರಾಜರಾವ್

ಸಾಳುವ ಇಮ್ಮಡಿ ನರಸಿಂಹನ ಹಳೇಹಳ್ಳಿ ದಾನಶಾಸನ

ಈ ಶಾಸನ ಮೂರು ತಾಮ್ರದ ಹಲಗೆಗಳಿಂದ ಕೂಡಿದ್ದು ಬಳೆ ಸಹಿತವಾಗಿದೆ. ಆದರೆ ಬಳೆಯ ಮೇಲೆ ವಿಜಯನಗರದ ಅರಸರ ಲಾಂಛನವಾದ ವರಾಹ ಮುದ್ರೆ ಇಲ್ಲ. ಒಂದನೆಯ ಹಲಗೆಯ ಹಿಂಭಾಗ, ಎರಡನೆಯ ಹಲಗೆಯ ಎರಡೂ ಭಾಗ ಹಾಗೂ ಮೂರನೆಯ ಹಲಗೆಯ ಮುಂಭಾಗಗಳಲ್ಲಿ ಶಾಸನಾಕ್ಷರಗಳನ್ನು ಕಂಡರಿಸಿದೆ. ಬೆಂಗಳೂರಿನಲ್ಲಿರುವ ಶ್ರೀ ವೈ. ಸೀತಾರಾಂ ಮತ್ತು ಅವರ ಪತ್ನಿ ಶ್ರೀಮತಿ ಜಯಾ ಸೀತಾರಾಂ ಅವರ ಪ್ರಯತ್ನ ಸಹಕಾರಗಳಿಂದಾಗಿ ಈ ಶಾಸನ ಕೆಲದಿನಗಳ ಮಟ್ಟಿಗೆ ನನ್ನಲ್ಲಿದ್ದಿತು. ಈಗ ಇದು ಹಿಂದೂಪುರದ ನಿವಾಸಿ, ದಿವಂಗತ ಬಿ. ವೆಂಕಟಾಚಲಯ್ಯನವರ ಪತ್ನಿ, ಶ್ರೀಮತಿ ಕಮಲಮ್ಮನವರ ಆಧೀನದಲ್ಲಿದೆ.

ಸುಸ್ಥಿತಿಯಲ್ಲಿರುವ ಈ ತಾಮ್ರಶಾಸನ ಪೂರ್ಣವಾಗಿ ನಾಗರಿಲಿಪಿಯಲ್ಲಿದೆ. ಅಕ್ಷರಗಳನ್ನು ಆಳವಾಗಿ ಹಾಗೂ ಸುಂದರವಾಗಿ ಕೊರೆದಿದೆ. ವೃತ್ತಗಳ ಸೀಮೆಗಳನ್ನು ಉಲ್ಲೇಖಿಸಿರುವ ಭಾಗ ಹೊರತಾಗಿ ಉಳಿದ ಶಾಸನದ ಭಾಷೆ ಸಂಸ್ಕೃತ; ಆದರೆ ತುಂಬ ಅಶುದ್ಧ. ಕೆಲವೆಡೆಯಂತೂ ಶಬ್ದಗಳ ಮೂಲರೂಪವನ್ನೂ ಊಹಿಸಲಾಗದಷ್ಟು ವಿಕೃತಗೊಂಡಿದೆ. 79 ನೆಯ ಸಾಲಿನಿಂದ 91 ನೆಯ ಸಾಲಿನವರೆಗೆ, ದಾನಕೊಟ್ಟ ಗ್ರಾಮದ ಸೀಮಾವಿವರಗಳನ್ನು ತಿಳಿಸುವ ಭಾಗದ ಪಾಠ ನಾಗರಿಲಿಪಿ ಹಾಗೂ ಕನ್ನಡ ಭಾಷೆಯಲ್ಲಿದೆ. ಶಾಸನದ ಕೊನೆಯಲ್ಲಿ 'ಶ್ರೀರಾಮಚಂದ್ರ' ಎಂದು ಕನ್ನಡಕ್ಷರದಲ್ಲಿ ಒಪ್ಪವಿದೆ. ಶಾಸನದಲ್ಲಿ ಬಳಕೆಯಾಗಿರುವ ವೃತ್ತಗಳು ತುಂಬ ದೋಷಯುಕ್ತವಾಗಿವೆ.

ವಿಜಯನಗರದ ಅರಸ ಸಾಳುವ ಇಮ್ಮಡಿ ನರಸಿಂಹನ (ಕ್ರಿ.ಶ.1491–1505) ಆಳ್ವಿಕೆಗೆ ಸೇರಿದ ಈ ಶಾಸನದ ಕಾಲ ವಿರೋಧಿಕೃತ್ ಸಂವತ್ಸರದ ಕಾರ್ತಿಕ ಶುಕ್ಲ ಹರಿದಿನ (ಏಕಾದಶಿ), ದಾನವಮಂತ್ರಿವಾರ (ಶುಕ್ರವಾರ). ಈ ತೇದಿವಿವರಗಳನ್ನು ಕ್ರಿ.ಶ. 1491 ರ ಅಕ್ಟೋಬರ್ 14, ಶುಕ್ರವಾರಕ್ಕೆ ಸಮೀಕರಿಸಬಹುದಾಗಿದೆ. ಶುಕ್ರವಾರಕ್ಕೆ 'ದಾನವಮಂತ್ರಿವಾರ' ಎಂದು ಹೆಸರಿತ್ತಿರುವುದು ಗಮನಾರ್ಹವಾಗಿದೆ. ಇದು ಅಪರೂಪ


ವಾದ ಉಲ್ಲೇಖ. ಶಾಸನದಲ್ಲಿ ಅರಸನ ತಂದೆ ನರಸಿಂಹರಾಯ ಮತ್ತು ಅವನ ತಂದೆ ಗುಂಡ (III) ಹಾಗೂ ತಾತ ಗೌತಮ (II) ಉಲ್ಲೇಖಿತರಾಗಿದ್ದಾರೆ.

ತಿಮ್ಮರಾಜಸಮುದ್ರವೆಂಬ ತಟಾಕದಿಂದ ನೀರುಗೊಳಿಸುತ್ತಿದ್ದ ಮತ್ತು ಪಿನಾಕಿನೀ ತೀರದಲ್ಲಿದ್ದ ಹಳೇಹಳ್ಳಿ ಎಂಬ ಗ್ರಾಮವನ್ನು ನಾನಾಗೋತ್ರ ಸೂತ್ರ ಶಾಖೆಗಳಿಗೆ ಸೇರಿದ ವಿಪ್ರಜನರಿಗೆ ಅರಸನು ದಾನ ನೀಡಿದುದು ಶಾಸನದ ವಸ್ತು. ಪ್ರತಿಗ್ರಹಿಗಳಿಗೆ ಸಲ್ಲ ಬೇಕಾದ ವೃತ್ತಿ ವಿವರಗಳನ್ನೂ ಶಾಸನದಲ್ಲಿ ಹೇಳಿದೆ. ಈ ಹಳೇಹಳ್ಳಿ (ಶಾಸನದಲ್ಲಿನ ಹಳೇಹಲ್ಲಿ) ಇಂದಿನ ಕೋಲಾರ ಜಿಲ್ಲೆಯ, ಗೌರಿಬಿದನೂರು ತಾಲ್ಲೂಕಿನ, ಮಂಚೇನ ಹಳ್ಳಿ ಹೋಬಳಿಯಲ್ಲಿರುವ ಹಳೇಹಳ್ಳಿ ಎಂದು ಗುರುತಿಸಬಹುದಾಗಿದೆ. ಸೀಮಾವಿವರ ಗಳ ಸಂಬಂಧದಲ್ಲಿ ಉಕ್ತವಾದ ಹಲವು ಗ್ರಾಮಗಳಲ್ಲಿ ನಾಗವೋವನಹಲ್ಲಿ, ಚೀನಹಲಿ ಹಾಗೂ ತೇಗದ ಹಲಿಗಳನ್ನು ಕ್ರಮವಾಗಿ ಅದೇ ಹೋಬಳಿಯ ನಾಗರಭಾವಿ, ಚೆನ್ನಗನ ಹಳ್ಳಿ ಮತ್ತು ತೆಕ್ಕಲಹಳ್ಳಿ ಎಂದು ಗುರುತಿಸಬಹುದೆಂದು ತೋರುತ್ತದೆ. ಉಳಿದ ಗ್ರಾಮಗಳನ್ನು ಗುರುತಿಸಲು ಸಾಧ್ಯವಾಗಿಲ್ಲ. ಈಗ ಈ ಶಾಸನವನ್ನು ಹೊಂದಿರುವ ವ್ಯಕ್ತಿಯ ಪೂರ್ವಿಕರು ಮೂಲತಃ ಗೌರಿಬಿದನೂರು ಪ್ರದೇಶದವರಂತೆ. ಈ ಶಾಸನ ಮೊದಲಬಾರಿಗೆ ಇಲ್ಲಿ ಪ್ರಕಟವಾಗುತ್ತಿದೆ.

ಶಾಸನ ಪಾಠ[1]


ಒಂದನೆಯ ಹಲಗೆಯ ಹಿಂಭಾಗ

1 ಶುಭಮಸ್ತು ಶ್ರೀಗಣಾಧಿಪತಯೇ ನಮಃ ಶ್ರೀಮಾನ್ . . . .
2 ಯಾಬ್ಧ್ಯಂಬುಗಯನಾಭ್ರತಲ ಃ। ದಾನ್ಯತ್ರಮಿನಾತಿರವಾ .
3 ರಿಕರ್ಣಿಕನಂದಸುಧಾಂಶೋರನ್ವತಾಬ್ಧಿತುಲ್ಯೋ ಕಲ್ಪದ್ರು .
4 ಮಣಿಕೌಸ್ತುಭೋ ಪರಾಃ। ಯಯಾತಿದುಷಂತಯುಧಿಷ್ಠಿರಾದ್ಯ ಭೂಪಾಃ ಜಾ
5 ತಾಭವನ್ನೈಕವಿಸುತಾಃ। ತದನ್ವಯೋ ಸಾಲವನಾಮಧೆಯೋ . ಶ್ರೀಪತಿಃ
6 ಶತ್ರುಪಭತಿಸಾಲವಃ।[2] ಸೋಭೂದ್ವರಾ ಗೌತಯುಗುಂಡಮಾಸ್ತೋ ಯತ್ರಪ
7 ತ್ರಪೌತ್ರಾವಿನಕಣಸಂನಿಭಾ। ಸಾಲ್ವ ಶ್ರೀ ನರಸಿಂಹರಾಯ ನೃಪ
8 ತಿಃ ಖ್ಯಾತೋ ಜಗನ್ಮಂಡಲೇ ಚಂಡಖಂಡಲವಿಕ್ರ[ಮೋ] ವಿಜಯನ
9 ಗುಂಡಕ್ಷಿತೀಶಾತ್ಮಜಃ ಯದ್ಧಾಟೀಚಲಘೋಟಕಾವಲಿ ಖುರಾ
10 ಘಾತೋಚ್ಚಲದ್ಧಿಪ್ವರಿ ಧೂಲಾಭಿರ್ಮಹಿಮಂಡಲಂತಿ ಅರಿನಾವಿಮಾ
11 ಶಾಃ ಸಮಸ್ತಾ ಅಪಿ[3] ಕಾಂತಾಯಾಃ ಸವ್ರತೀವ ಯಸ್ಸಗಕ್ಷರಾ



ಒಂದನೆಯ ಹಲಗೆಯ ಹಿಂಭಾಗ

ಚಿತ್ರಗಳು : ಶ್ರೀ ಕೆ. ಬಿ. ಸದಾನಂದ



ಎರಡನೆಯ ಹಲಗೆಯ ಮುಂಭಾಗ

12 ಡಭೋಗೀನ ಪಾವನ್ತ್ವಯಾ ದುಗ್ಧಾಂಭೋನಿಧಿ ಮೇಖಲಾ ಸುರಸರಿ
13 ತ್ಪೂರತ್ತರೀಯಾಪಿ ಚ। ಪ್ರಾಲೇಯಾದ್ರಿಹರಾಚಲಸ್ತನಯುಗಾ ತಾ
14 ರೌಘಹಾರೋಜ್ವಲಾ ಕೀರ್ತ್ತಿಶ್ಚಂದ್ರಮುಖೀರಿಭಾನ್ನಿಜವಧೂ
15 ಸೀಮಾಂತಮುಕ್ತಾಲತಾ।[4] ದ್ಯಾಭೂತ್ಪಕ್ಷವಿಭೇದನೋ ಬಹುತರಂ ಹ
16 ತಿಪ್ರಭಾಭೂಷಿತಃ ಶತೌ ದಂಡಧರೋಪಿ ಪುಣ್ಯಜನ ಸಂಜಾಘಃ
17 ಪ್ರಚೇತಾ ಅಪಿ ಯಃ ಸಂಮ್ರಾಣ್ಣರಸಿಂಹರಾಜನೃಪತಿಃ ದಿಪ್ಪಾಲಕ
18 ಪ್ರಕಿಯಃ ಸತ್ತ್ವೈವ ಸದಾಗತಿಃ ಸ್ವಯ ನದಃ ಸಕೀರ್ತಿ ಗಂಗಾ
19 ಧರಃ[5] ಪ್ರಾದಾಚಲ ಗ. ಯಶಸಾಃ ಷಡ್ದರ್ಶತೀಪಂ ದ್ವಿತಮುಂಡಿ
20 ತೇಭ್ಯಯಃ ಸಂತತಂ ಮಾ . . . . ಕೃಷ್ಣಗೋ[ದಾ*]ವರೀತೀರಧರಾಸು
21 ರೇಭ್ಯಃ[6] ಯಃ ಪುಣ್ಯಕೋಟಿಶ್ರೀಶೈಲಹೇಮಕೂಟಾದಿಷು ಪ್ರಭುಃ ತು
22 ಲಾಭಾರಾದಿ ದಾನಾನಾ ಕರ್ತಾ ಭರ್ತಾ ವಿಪ್ರಶ್ಚತಃ ।[7] ಪ್ರತಿಗ್ರಹೀ


ಎರಡನೆಯ ಹಲಗೆಯ ಮುಂಭಾಗ

23 ಯಸ್ಯಪ್ರೇಂಖತ್ಪ್ರತಾಪಾನಲ ಮಯವಪುಷಃಸ್ತು[ಂ]ಗಲಿಂಗಸ್ಯ ಮೂ
24 ಲಂ ಮೂರ್ಧಾನದ್ರಷೇಮುತಕಂಠಿತಾನಾಜಹದಯೌಕಂ ಸಾಕ್ಷತಕಂಜಸ
25 ತೌ ಪ್ರಾಪ್ತೌ ಭೂವಿರಾನರಾಹಾಕೃತಿಮಪಿ ಚ ಯಶೋಹಂಸರೂಪತ್ಕ
ಮೇಕೋ
26 ನಿರ್ವಾಟಃ ಸ್ವಪ್ರತಿಜ್ಞೇ ಭವವಸಿಲತಿಕಾ ಸನ್ಮನೋಸ್ಯಾಪಿ ನಾನ್ಯ
27 ಮಾಭೂದಿತೋ ಮಮ ತುಲಾಪುರುಷತ್ರಯೇಣ ಭೂಮಾವಿತೀವ ಹಿ
ತುಲಾಪು
28 ರುಷತ್ರಯಂ ಯಃ ಕಾಂಚೀಪುರೇಥ ಶಿವಶೀಮನಿ ಹೇಮ[ಕೂ]ಟ
ಶ್ರೀಪರ್ವತಂ
29 ಚ ಕೃತವಾನ್ವಿಭವೈರ್ನದಾಸ್ಯಃ ವಿನಿಗುಸುವಿಧಿನೇ ಮಮಗ್ರಹಾರ ವಿ
30 ಬುಧಜನಾಯ ವಿತೀರ್ಯನಾಕಕ್ಪ್ರಸುರನಗರಮುದಾಪತ್ತತೋಸೌ
31 ನಿಜಪಿತುರಿಮ್ಮಡಿನಾಪಸಿಂಹ್ವರಾಯಃ ಶಾಖೇ ವ್ಯತೀತೇ ಪುಣದಾ.
32 . . ರತ್ನಾಕರಜೋಣಿಮಿತೇ ತಥಾಪ್ತೇ ವಿರೋಧಕೃತ್ಕಾರ್ತಿಕ ಶುಕ್ಲ
33 ಪಕ್ಷೇ ಹರೇಸ್ತಿಥೌ ದಾಸನಮುತ್ರಿವಾರ ಪ್ರಾದಾತ್ಪ್ರಸಿದ್ಧಂ ಹಳೇಹ
34 ಳ್ಳಿನಾಮಸಾ ಗ್ರಾಮಂ ಗುಶೌರಿಮ್ಮಡಿನಾರಸಿಪ್ಪಃ ಕೊಮ್ಮಕ್ಷನಾಭ
35 ತ್ಪೇದ ತಿಂಮ್ಮರಾಜಸಮುದ್ರ ವಿಖ್ಯಾತ ತಟಾಕ ರಮ್ಯಾಂ ಪಿನೋಕಿ
36 ನೀತೀರಸಿವಿಷ್ಟಮಷ್ಟಭೋಗ್ಯೈಸಮೇತಂ ಸಹ ಕಾಲುಹಾಲ್ಲಂ ಪನಾದ್ರರಾ
37 ಜಾ। ತರಕಿಕ್ಕನಾದ್ವಮಧ್ಯಃ ಸ್ಥಲಾಧ್ಯಾಶಿತಮೃದ್ಧಭಾಜಂ ದ್ರಾವಿದಾ
38 ತಿಂ ಸಾಲುವಿಲಾಯಭಾಗಾಸ್ಟಸಾಗತ್ರಯಿಣಾ ವಿದ್ವಿಜಪು[ಂ]ಗವೇಭ್ಯಃ ವ್ಯಾ

39 ಸಾಕ್ಷಸಾತರಾಣಿಸಿ ಭಟ್ಟಪಾದಃ ಪ್ರಸ್ಥಾನಪಾತ್ರಧ್ಯಾನಿಧಿಪಾರಗೇ
40 ತ್ಯ ಕೃಪಾಕಟಾಕ್ಷವಿಕ್ಷೇಪಕೃತಾರ್ಥೀಕೃತ ಸಜ್ಜನೋ ವೃತ್ತಿಮೇಕಾಮಲ
41 ಭತಾಂ ಗ್ರಾಮೇ ಶ್ರೀವಿಷ್ಣುದಾಂಕರೌ। ಪ್ರತಿಗ್ರಹೀತಾಗ್ರಮಸ್ಯ ಒಣಾ
42 ನಾಕೃತೇ ಕೃತಿ । ಅಗ್ನಿಷ್ಟೋಮಾದಿ ಯಾಗಾನಾಂ ಯಃ ಕತಾಧಜಣಾಂನಿ
43 ಧಿಃ[8] ನಾರಸಿಹ್ವತಪೂಸನಾ ಭಾರದ್ವಾಜಾನಪೋನ್ವವಃ ಅವದಾಸ್ಯ
44 ಲಿಗನಾಯಸ್ಯಾಗ್ರಮಸಾರ್ಧೈಕವೃತ್ತಿವಾನ್[9] ಕೌಶಿಕೋ ಯಾಜುಷೋ
ವಿದ್ವಾ
45 ನ್ ಲಕ್ಷ್ಮಣಾಪುತ್ರಸೂಭವಃ ನಾಗನಾರ್ಯೋ ಯಜುಕೋ ವೃತ್ತಿಮೇಕಾ
ಮವಾ
46 ಪ್ತವಾನ್ ।[10] ರಾಮಚಂದ್ರಾತ್ಮಜೋ ವಿದ್ವಾನ್ ಯಾಜುಷೋ ಗಾರ್ಗ್ಯ
ಮಾತ್ರಜಃ ಯಜ್ವ
47 ತಿರುಮಲಾರ್ಯೋಸ್ಮಿ ಗ್ರಾಮೇಽಲಭ್ಧೈಕವೃತ್ತಿಕಃ[11] ಆಪಸ್ತಂಬಮಹೇಶಾನ

ಎರಡನೆಯ ಹಲಗೆಯ ಹಿಂಭಾಗ

48 ಯಾಜುಷಕತನಭವಃ ಕಾಶಪೋ ನಾಗಯೋ ಯಜ್ವ ವೃತ್ತಿಮಕಾಂ ಸಮ
ಶ್ನುತೇ [12]
49 ಲಕ್ಷ್ಮಣಾತ್ಮಸುತೋ ಯಜ್ವ ಮಹಾನಭಾರ್ಗವಗೋತ್ರಜಃ ಬಹ್ವೃಚಸ್ತು
ಕುಲಸ್ವಾವಿನಾ
50 ವೃತ್ತಿಮೇಕಾಮವಾಪ್ತವಾನ್ । [13] ಕೌಶಿಕೋ ಯಾಜುಷಾ ವಿದ್ವಾನ್ಸ್ಕರಿ
ನಾಥಾರ್ಯ ಸಂ
51 ಭವಃ ಶಿವಮಾನ್ ತಿರುಮಲಾಜ್ಯೋತ್ರ ವೃತ್ತಿಮೇಕಾಂ ಸಮಶ್ನುತೇ । [14]
ದೇವರಾರ್ಯ
52 ಸ್ಯ ತನಯಃ ಕೌಶಿಕೋ ಯಜುಷ ಸುಧೀ ಸಮಶ್ನುತೇ ನೃಸಿಂಹಾರ್ಯ
ಗ್ರಾಮೇಕ್ಷ್ಮಿಂ
53 ನ್ನೈಕವೃತ್ತಿಕಾಂ । [15] ಹಾರೀತೋ ಯಾಜುಷಃ ಸೂನು ತ್ರಿಪುರಾಂತಕಯ
ಜ್ವನಃ। ವೇದ
54 ದ್ವಿತಯರಿದ್ಧಕ್ಕೇ ನೃತ್ತಿಮೇಕಾಮಹೋಬಲಃ । [16] ವಿಶ್ವೇಶ್ವರಾ[*ರ್ಯ]
ತನಯಃ ಕೌಶಿ
55 ಕೋ ಯಾಜುಷ ಸುಧೀ ಭುಂಕ್ತೇ ಪದ್ಮೇಶ್ವರಾರ್ಯೋಪಿ ಗ್ರಾಮೇಸ್ಮಿ ವೃತ್ತಿ
ಮೇಕಕಾಂ ।[17]
56 ರಾನಜ್ಯೋತಿಃ ತಿವಿದಪುತ್ರೋ ಹಾರೀತಶ್ಚೈವ ಯಜುಷಃ ವೃತ್ತಿಮೇಕಾ
ಕಿನೀ
57 ಭುಂಕ್ತೇ ಜಕಾಹ್ಯೋತಿಪಶಾಸವಿಧಕ್ರಮ [18] ಧಾಟೇ ಲಿಗನಾಯತನುಭೂ
ರಾಶ್ವ



ಎರಡನೆಯ ಹಲಗೆಯ ಹಿಂಭಾಗ



ಮೂರನೆಯ ಹಲಗೆಯ ಮುಂಭಾಗ

58 ಲಾಯನಃ ಸಾತ್ರೇಯದ್ವಿಟಿಭವಾಟೋಪಿ ಗ್ರಾಮೇಸ್ಮಿಂನೇಕವೃತ್ತಿ
ಮಾನ್ । [19] ಐಯ

59 ಪಾರ್ಯ ತನುಜನ್ಮಾ ಕೌಂಡಿನ್ಯಾನ್ವಯ ಸಂಭವಃ ವೃತ್ತಿಮೇಕಾಕಿನೀಂ
ಭುಂಕ್ತೇ ನೃ

60 ಸಿಹ್ಮಾಯಾಜುಷ ಸುಧೀಃ[20] ಶ್ರೀವತ್ಸಾನ್ವಯ ಸಂಭತಃ ತಿಪನಾರ್ಯ ತನೂ
ಭವಃ

61 ಅಭಲಾಯಾ ಯಜುರ್ವೇದೀ ಗ್ರಾಮೇಲಭ್ಯೈಕ ವೃತ್ತಿಮತ [21] ಕುಚದೀಕ್ಷಿತ
ಸತ್ಪುತ್ರ ಸೀ

62 ಥಲಾರ್ಯೋ ಯಾಜುಷಃಸ್ವೈಕವೃತ್ತಿಮಾನ್[22] ಕಾ[ಂ]ಚನಾರ್ಯಸ್ಯ
ತನಯೋ ಯಜುಷೋ ಗಾ

63 ಗ್ಯ[ಗ]ಗೋತ್ರಜಃ ಭುಂಜತ್ತೇ ಕಾಮಾಪಧಾನೀ ಚ ಗಾಮೇಂಮುನ್ ವೃತ್ತಿ
ಮೇಕಕಾಂ[23] ತಿಮ್ಮಯಾ

64 ರ್ಯಸ್ಯ ತನಯಃ ಶಾಂಡಿಲ್ಯೋ ಯಾಜುಷಃ ಸುಧೀಃ ಸಮಶುತೇರ್ಹಸ್ತ
ಗಿರೀಂ[ದ್ರೋ] ಮೋಕ್ಷ್ಯ

65 ನ್ನರ್ಧವೃತ್ತಿಕಾಂ । [24] ಆಪ್ತಸ್ತಂವಃ ಕಾಲಭೋಗ ಅನಂತಾರ್ಯ ತನು
ಭವಃ ಅರ್ಧವೃತ್ತಿ

66 ಯಜುರ್ಭದೀ ವೀರಣಾರ್ಯ ಸಮುದನತ್ಯೋ[25] ಮೌದ್ಗಲಗೋತ್ರಸಂಭೂತಾ
ಗುಮಾಯೋರ್ಥಾತನುಭ

67 ವ ಭುಂಜತ್ತೇ ಮೋಧಾಯನಃ ಪಾದವೃತ್ತಿಂ ಗ್ರಾಮೇತತಂ ಮನಃ ।[26]
ಭಾರದ್ವಾಜೋ ಯಜುರ್ವೇದೀ ತಿಪ್ಪ

68 ಯಾಯ[ರ] ತನೂಭವಃ ಭುಂಜತ್ತೇ ವಸವಗಾರ್ಯೋಪಿ ಗ್ರಾಮೇಸ್ಮಿ
ನ್ನರ್ಧ ವೃತ್ತಿಕಾಂ । [27] ಭರದ್ವಾಜೋ

69 ಯಜುರ್ವೇದೀ ನಗನಾಯ[ರ] ತನೂಭವಃ ಆಸ್ಮಾವಸವಯಾರ್ಯಸ್ವ
ಗ್ರಮೇ ಲಬ್ಧಾರ್ಧವೃತ್ತಿ

70 ಕಃ । [28] ಒಹೃಚ ಶಭರದ್ವಜೋ ಮಲ್ಲನಾರ್ಯಸ್ಯ ನಂದನ ಶ್ರೀನಿವಾಸೋ
ಯಜುಃಕಃ ವೃತ್ತಿಮೇ

71 ಕಾಮವಾಪ್ತವಾನ್ ।[29] ಲಖಣಾರ್ಯತನುಜನ್ಮಾ ಕಾಶ್ಯಪಶ್ಚಾಶ್ವಲಾ
ಯನಃ ಗ್ರಾಮೇಸ್ವನ್

72 ನರ್ಧವೃತ್ತಿಂ ಚ ಪ್ರಾತಾವಾನವ್ವಪಾಂಹ್ವಯಃ ।[30] ಭಾರದ್ವಾಜಶ ಸಾಮ
ವೇದೀ ನಾಗನಾ

73 ರ್ಯತನೂಭವಃ ಭುಜತ್ತೇರ್ಧವೃತ್ತಿ ಜ್ಯೋತಿರ್ವಿತ್ ಸ ಪಂಪಾಲಿ[ಂ]
ಗಯಃ ಸುಧೀಃ [31] ಅಲಾ

74 ಲಭಟಕನಯಃ ಸ ಭರದ್ವಾಜಗೋತ್ರಜಃ ಭುಂಕ್ತೇ ರ್ಥವೃತಿಂ ಗ್ರಾಮೇ
ಸ್ಮಿಂನೇಯೋಽರ್ಯ
75 ಸ ಯಾಜುಷಃ32 ರಾಮನಾರ್ಯಸ್ಯ ತನಯಃ ಕೌಶಿಕಾಂಶ್ವಯಸಂಭವಃ
ಭುಂಕ್ತೇ ನರಹರಿ
76 ಪಾದವೃತ್ತಿಂ ಗ್ರಾಮೇತ್ರ ಯಾಜುಷಃ33 ಭಾರದ್ವಾಜೋ ಯಜುರ್ವೇದೀ
ಗಾಜಾರಫಲಭಟಜಃ ಭುಂಕ್ತೇ. .

ಮೂರನೆಯ ಹಲಗೆಯ ಮುಂಭಾಗ

77 ವ. ವಿರೂಪರೂಪಾಭಿಧಃ ಅಥಾಃ 34 ಸ್ವಸೀರಗೋಪಾಲಗೂಕಃ ಸಮುದಾ
78 ರತಃ ತ್ರಿಮತಾವಕನೋಪತಃ ಸಾಮಗ್ರಾಮಸಂಮ್ಮ ತಃ35 ಚತುಃ
ಸೀಮಾ ನಿರ್ಣಯೊ [ಸಿ]
79 ಲಿಖ್ಯಂತೇ ದೇಶಭಾಷಯಾ36 ಹರಿಯಹಳ್ಳಿಗೆ ಪ್ರತಿನಾಮವಾದ ಇಂಮ್ಮಡಿ
ನರಸಿಂಹ್ವರಾ
80 ಯಪುರದ ಅಗ್ರಹಾರದ ವರ್ತಿ ಶಾಸನ ಊರಿಗೆ ಬಡಗಲು ಬಿಜಲವೀರನ
ಹುಣಿ
81 ಸೆಮರ ಶನಜೋವನ ಹೊಲದಲ್ಲಿ ನಟ್ಟ ಕಲ್ಲು ವಾಮನಮುದ್ರೆ ಅದಕೆ
ಮೂಡಲು ಹಲದ ಲೀ
82 ಕೀವಗಿ ಅದಕೆ ಮೂಡಲು ಪೂಣವಮಾದೇವಿನ ಅಂಕವಾಲ ತವರು ಅದಕೆ
ಮೂಡಲು ಬ
83 ಣವರೆ ತವರ ಮೇಲಣ ಹುಣಿಸೇನುರ ಅದಕೆ ಮೂಡಲು ಉಭಯ
ಮಾರ್ಗದ ದಾರಮೇರೆ ಕ
84 ವಾಲೇ ತೆವರು ಅದಕೆ ಮೂಡಲು ಬಣವರೆ ತೆವರ ಮೇಲಣ ಹುಣಿಸೇನುರ
ಅದಕೆ ಮೂಡ
85 ಲುಉ ಅದಕೆ ತೆಂಕಲು ಅರಗನ ಕುಂಯುಕಲಗುಡ್ಡ ಮೇರೆ ಅದಕೆ ತೆಕಲು
ಮರುಲ
86 ಯನ ಹಳೆ ತೂಬರ ವಯಲಲಿನಹ ಕರಿಯಕಲ್ಲಗುಡ್ಡವೇ ಮೇರೆ ಕೇಗವಹಲಿ
ಬಲಿಯ ಕ
87 ಲ್ಲಗುಡ್ಡವೇ ಮೇರೆ ನಾಗವೋವನಪಲ್ಲಿಗೆ ತೆಕಲಾಗಿ ಆನೆಮುರಿದ ಆಲದ
ಮರವೇ ಮೇರೆ [ಅ]
88 ದಕೆ ಪಡುವಲು ಅನುಪಿತಗುಡ್ಡವೇ ಮೇರೆ ಅದಕೆ ಪಡುವಲು ಅನುಪ್ರಚಾ
ಪಿನ ಬೆಟ್ಟವೇ ಮೇ[ರೆ]
89 ಹರಿಹರದವರಬೆಟ್ಟ ಅಲಗಾಗಿ ಲಕುಮನಹಲಿಯ । ಬೇಲಿಯ ಹಿರಿಪಗುಡು
ಮೇರೆ ಚೀ

90 ಸಹಲಿಗೆ ವೇರೆ ನಾಡಗೌಡನ ಹೊಲವೇ ಮೇರೆ ಅದಕೆ ಪಡುವಲು ಹಸುರು
ಗಣಿಯ ಮರವೇ

91 ವೇರೆ ಊರಿಗೆ ಪಡುವ ಬೋರೇಬೆಟ್ಟ ಮೇರೆ ಈ ಸ್ಥಳಗಲಲಿ ವಾಮನ
ಮುದ್ರೆ ಕಲು ಹಾಕಿಸ್ಥವು

92 ದಾನಪಾಲನಯೋರ್ಮಧ್ಯೆ ದಾನಾಚ್ಛ್ರೇಯೋನುಪಾಲನಂ ದಾನಾಸ್ವರ್ಗವ
ವಾಪ್ನೋತಿ ಪಾಲನಾದ

93 ಚ್ಯುತಂ ಪದಂ[37] ಏಕೈವ ಭಗಿನೀ ಲೋಕೇ ಸರ್ವೇಷಾಮೇವ ಭೂಭುಜಾಂ
ನಭೋಜ್ಯಾ ನ ಕರ

94 ಗ್ರಾಹ್ಯಾ ವಿಪ್ರದತ್ತಾ ವಸುಂಧರಾ[38] ಸಾಮಾನ್ಯೋಯಂ ಧರ್ಮಸೇತು
ನೃಪಾಣಾಂ ಕಾಲೇ ಕಾಲೇ

95 ಪಾಲನೀಯೋ ಭವದ್ಭಿಃ ಸರ್ವಾನೇತಾನ್ಭಾವಿನಃ ಪಾರ್ಥಿವೇಂದ್ರಾ
ಭೂಯೋ ಭೂಯೋ ಯಾಚ

96 ತೇ ರಾಮಚಂದ್ರಃ[39] ॥ — ॥ ಶ್ರೀ ಶ್ರೀ ಶ್ರೀ
ಶ್ರೀ ರಾಮಚಂದ್ರ[40]

ಅಡಿ ಟಿಪ್ಪಣಿಗಳು

1 ಶಾಸನನನ್ನು ಹಿಂದೂಪುರದಿಂದ ತಂದಿತ್ತ ಶ್ರೀ ಸತ್ಯನಾರಾಯಣ ಶರ್ಮ, ಓದು ವಲ್ಲಿ ನೇರವಾದ ಶ್ರೀ ಎಂ. ಹನುಮಂತರಾವ್, ಶ್ರೀ ಎಸ್. ಎಸ್. ಜಾಗೀರ್ ದಾರ್ ಹಾಗೂ ಶಾಸನದ ಛಂದಸ್ಸನ್ನು ಗುರುತಿಸಿಕೊಟ್ಟ ಶ್ರೀಮತಿ ಕೃಷ್ಣವೇಣಿ–ಇವರಿಗೆ ನನ್ನ ಕೃತಜ್ಞತೆಗಳು.

2 ಅನುಕ್ತ (?)

3 ಶಾರ್ದೂಲವಿಕ್ರೀಡಿತ

4 ಮತ್ತು 5 ಶಾರ್ದೂಲವಿಕ್ರೀಡಿತ ; ಅಶುದ್ಧ

7 ರಿಂದ 9, 11 ರಿಂದ 14, 16, 21, 26 ರಿಂದ 28, 35, 37 ಮತ್ತು 38 ಶ್ಲೋಕ

10, 15, 17 ರಿಂದ 20, 23 ರಿಂದ 25, ಮತ್ತು 29 ರಿಂದ 33 ಶ್ಲೋಕ ; ಅಪವಾದ

22 ಶ್ಲೋಕ ; ಅಪೂರ್ಣ

34 ಶ್ಲೋಕ ; ಅಶುದ್ಧ

36 ಶ್ಲೋಕಾರ್ಧ

39 ಶಾಲಿನಿ

40 ಇದು ಕನ್ನಡಕ್ಷರದಲ್ಲಿದೆ

ಸಾಳುವ ಇಮ್ಮಡಿ ನರಸಿಂಹನನ್ನು ತಮ್ಮಯ ಅಥವಾ ತಮ್ಮದೇವ ಎಂದೂ ಕರೆಯಲಾಗಿದೆ. ಈತನ ಮಂತ್ರಿಯಾದ ತುಳುವ ಮನೆತನದ ಈಶ್ವರನಾಯಕನ ಮಗನಾದ ನರಸನಾಯಕ ಈತನ ಪ್ರತಿನಿಧಿಯಾಗಿ ರಾಜ್ಯಾಡಳಿತವನ್ನು ನಡೆಸಿದ್ದ. ಇವನನ್ನು ಪೆನುಗೊಂಡೆಯಲ್ಲಿ ಬಂಧನದಲ್ಲಿಡಲಾಗಿತ್ತೆಂದು ನ್ಯೂನಿಜ್ ಹೇಳಿದ್ದಾನೆ. 1505ರಲ್ಲಿ ಈತನನ್ನು 'ಕೊಂಡಮರಾಜ' (?) ನೆಂಬ ಅಧಿಕಾರಿ ಕೊಂದ. ಇದು 1505 ನೆಯ ವರ್ಷದ ಫೆಬ್ರವರಿ 28 ಹಾಗೂ ಆಗಸ್ಟ್ 14 ರ ನಡುವಣ ಅವಧಿಯಲ್ಲಿ ಎಂಬುದೊಂದು ಊಹೆ.

ಎಂ. ಎಸ್. ಪುಟ್ಟಣ್ಣ
ಸಂಗ್ರಹ : ಡಾ. ಎಚ್. ಎಸ್. ಸುಜಾತಾ

ಇನಾಂಗ್ರಾಮಗಳ ವಿಷಯದಲ್ಲಿ — ದಿವಾನರವರು ಮಾಡಿದ ಹುಕ್ಕುಂ ಮತ್ತು ಗ್ರಾಮಪಾಥೇಯ

[ಎಂ. ಎಸ್. ಪುಟ್ಟಣ್ಣನವರು ಹೊಸಗನ್ನಡ ಸಾಹಿತ್ಯಕ್ಕಾಗಿ ದುಡಿದ ಹಿರಿಯ ಮಹನೀಯರಲ್ಲಿ ಒಬ್ಬರು. ಅವರು ಕಾದಂಬರಿ, ಜೀವನಚರಿತ್ರೆ, ಅನುವಾದ, ಸಂಶೋಧನೆ, ಬಾಲಸಾಹಿತ್ಯ ಮೊದಲಾದ ಪ್ರಕಾರಗಳಲ್ಲಿ ಹೆಸರು ಮಾಡಿದರು. ಜೊತೆಗೆ 'ಹಿತಬೋಧಿನಿ' ಎಂಬ ಮಾಸಪತ್ರಿಕೆಯನ್ನು ಕೆಲವು ಕಾಲ ನಡೆಸಿದರು. 'ಹಿತಬೋಧಿನಿ'ಯಲ್ಲೂ ಇತರ ಹಲವು ಪತ್ರಿಕೆಗಳಲ್ಲೂ ಅನೇಕ ಬಿಡಿ ಲೇಖನಗಳನ್ನು ಬರೆದರು.

ಪುಟ್ಟಣ್ಣನವರ 'ಇನಾಂಗ್ರಾಮಗಳ ವಿಷಯದಲ್ಲಿ – ದಿವಾನರವರು ಮಾಡಿದ ಹುಕ್ಕುಂ' ಎಂಬ ಲೇಖನ 'ಹಿತಬೋಧಿನಿ' ಮಾಸಪತ್ರಿಕೆ (ಸಂಪುಟ ೧, ಸಂಚಿಕೆ ೪ ; ೧೮೮೪) ಯಲ್ಲಿ ಮೊದಲು ಪ್ರಕಟವಾಯಿತು. ಈ ಲೇಖನದಲ್ಲಿ ಸರ್ಕಾರದ ಆಚರಣೆಯನ್ನು ಗಮನಿಸಿ ಪ್ರಜೆಗಳಿಗೆ ಸಹಾಯಕವಾದ ಆಜ್ಞೆಗೆ ಕೃತಜ್ಞತಾರೂಪವಾದ ಪ್ರಶಂಸೆಯನ್ನೂ ಅದರಲ್ಲಿ ಮಾಡಬಹುದಾದ ಕೆಲವು ತಿದ್ದುಪಡಿಗಳನ್ನೂ ಸೂಚಿಸಿವೆ. ಸರ್ಕಾರದ ಒಪ್ಪುತಪ್ಪುಗಳಿಗೆ ಪುಟ್ಟಣ್ಣನವರು ಸೂಕ್ತ ಪ್ರತಿಕ್ರಿಯೆಯನ್ನು ನೀಡುತ್ತಿದ್ದುದು ಇಲ್ಲಿ ಸುವ್ಯಕ್ತವಾಗಿದೆ.

ಪುಟ್ಟಣ್ಣನವರ ಸಾಮಾಜಿಕ ಕಳಕಳಿ ಪ್ರಖರವಾದುದಾಗಿತ್ತು. ಸಾರ್ವಜನಿಕ ಹಿತ ಎಂಬುದು ಅವರ ಜೀವನದ ಮುಖ್ಯ ಆಸಕ್ತಿಗಳಲ್ಲಿ ಒಂದಾಗಿತ್ತು. 'ಗ್ರಾಮಪಾಥೇಯ' ಎಂಬ ಲೇಖನಮಾಲೆ 'ಮೈಸೂರು ಸಹಕಾರ ಪತ್ರಿಕೆ'ಯಲ್ಲಿ ಮೊದಲು ಪ್ರಕಟವಾಯಿತು. ಹಲವು ಭಾಗಗಳಲ್ಲಿ ಬೆಳಕು ಕಂಡ ಈ ಲೇಖನಮಾಲೆಯ ಒಂದು ಸಂಚಿಕೆಯ ಭಾಗ (ಸಂಪುಟ ೨, ಸಂಚಿಕೆ ೨ ; ೧೯೨೬) ಮಾತ್ರ ದೊರೆತಿದೆ.

ಕನ್ನಡಿಗರ ಗಮನಕ್ಕೆ ಬರಲೆಂಬ ಉದ್ದೇಶದಿಂದ ಈಗ ಈ ಲೇಖನಗಳನ್ನು ಇಲ್ಲಿ ಪುನರ್ಮುದ್ರಿಸಲಾಗಿದೆ—ಎಚ್. ಎಸ್. ಸುಜಾತಾ]

೧

ಇನಾಂಗ್ರಾಮಗಳ ವಿಷಯದಲ್ಲಿ — ದಿವಾನರವರು ಮಾಡಿದ ಹುಕ್ಕುಂ

ಈ ಮೈಸೂರು ಸೀಮೆಯಲ್ಲಿ ಸರ್ವಮಾನ್ಯ, ಜೋಡಿ, ಕಾಯಂಗುತ್ತಾ, ಕೊಡಗಿ, ಇನೇ ಮೊದಲಾದ ಇನಾಮತೀ ಬಾಬುಗಳು ಪೂರ್ವದಿಂದಲೂ ಬಹಳ ವಾಗಿವೆ. ದೇವಾದಾಯ, ಬ್ರಹ್ಮದಾಯವೇ ಆದಿಯಾಗಿ ಒಟ್ಟು ಇನಾಮತೀಬಾಬಿ ಗಾಗಿ ಬಿಟ್ಟಿರುವ ಗ್ರಾಮಗಳ ಸುವರ್ಣಾದಾಯಕ್ಕೂ, ಮತ್ತು ಆಯಾ ಸೀಮೆಯ ಸರ್ಕಾರದ ಹುಟ್ಟುವಳಿಗೂ, ತಾರತಮ್ಯವನ್ನು ನೋಡಿದ್ದಾದರೆ, ಇನಾಮತೀಬಾಬು ಮೈಸೂರು ಸೀಮೆಯಲ್ಲಿ ವಿಶೇಷವಾಗಿರುವಂತೆ ಯಾವ ದೇಶದಲ್ಲಿಯೂ ಇಲ್ಲ. ಈ ಮೂರು ಲಕ್ಷ ವರಹಾವ ಇನಾಮತಿಯನ್ನು ಸ್ವರ್ಗಸ್ಥರಾದ ಶ್ರೀಮಂತ ಕೃಷ್ಣರಾಜವಡೆ ಯರವರೇ ಜನಗಳಿಗೆ ಕೊಟ್ಟುಬಿಟ್ಟರೆಂತಲೂ, ಇದರಿಂದ ರಾಜ್ಯಕ್ಕೆ ಬಹಳ ನಷ್ಟ ವಾಯಿತೆಂತಲೂ, ಕೆಲವು ಜನರು, ಮುಖ್ಯವಾಗಿ ಇಂಡಿಯಾ ಸರಕಾರದವರು, ನಂಬು ತ್ತಾರೆ. ಆದರೆ ಇಂಥಾ ನಂಬಿಕೆಗೆ ಆಧಾರವೂ ಬಹಳವಾಗಿಲ್ಲ. ಇದಕ್ಕೆ ಹತ್ತರಷ್ಟಾ ದರೂ ಜನಗಳಿಗೆ ಕೊಡತಕ್ಕ ಕೊಡಗೈಯುಳ್ಳ ಕೃಷ್ಣರಾಜ ಭೂಪನ ಘನವಾದ ಔದಾ ರ್ಯಕ್ಕೆ ಇದು ದೊಡ್ಡದಲ್ಲ! ಆದರೆ ಇವೆಲ್ಲವನ್ನೂ ಇವರೇ ಇನಾಮಾಗಿ ಕೊಟ್ಟರು. ಇದರಿಂದ ರಾಜ್ಯಕ್ಕೆ ನಷ್ಟವುಂಟಾಯಿತು ; ಎಂದು ನಿಶ್ಚಯವನ್ನು ತಿಳಿಯದೆ, ಅವರ ವಿಷಯದಲ್ಲಿ ಹೀಗೆ ಯೋಚಿಸುವುದು ಸಮವಲ್ಲ. ಮತ್ತು ಹಾಗೆಯೇ ನಮ್ಮ ಚಾಮ ರಾಜೇಂದ್ರ ವಡೆಯರವರೂ ಮನಸ್ಸು ಬಂದಂತೆ ಸರ್ವಮಾನ್ಯಗಳನ್ನು ಕೊಟ್ಟಾರೆಂಬ ಶಂಕೆಯಿಂದ, ಇಂಥಾ ಜಹಗೀರಿಯನ್ನು ಇಂಡಿಯಾ ಸರಕಾರದವರ ಅಪ್ಪಣೆಯಿಲ್ಲದೇ ಕೊಡಕೂಡದೆಂದು ನಮ್ಮ ಮಹಾರಾಜರೊಡನೆ ನಡೆದ ತಹನಾಮೆಯಲ್ಲಿ ಸೂಚಿಸಿರು ವಂತೆ ಪ್ರಸಿದ್ಧವಾಗಿದೆ. ಇಂಡಿಯಾ ಸರಕಾರದವರು ನಮ್ಮ ರಾಜ್ಯಕ್ಕೆ ಮಾಡಿದ ಅನ್ಯಾಯವನ್ನೂ, ಮತ್ತು ನಮ್ಮ ಕೃಷ್ಣರಾಜವಡೆಯರವರೂ, ಮತ್ತು ಈ ಸೀಮೆ ಯಲ್ಲಿ ಆಳುತ್ತಿದ್ದ ಪೂರ್ವಧೊರೆಗಳೂ ಅಂದರೆ, ಚಾಳುಕ್ಯ ಚಕ್ರವರ್ತಿಗಳು, ಕಾಲ ಚೂರ್ಯರು, ಗಂಗರಾಜರು, ಹೊಯಿಸಲ ಬಲ್ಲಾಳರು, ವಿದ್ಯಾನಗರದ ನರಪತಿಗಳು, ಚೋಳರಾಜರು, ಪಲ್ಲವರಾಜರು, ಇತರ ಪಾಳೆಯಗಾರರು, ನಮ್ಮ ಮಹಾರಾಜರ ಪೂರ್ವೀಕರಾದ ಕಂಠೀರವ ನರಸರಾಜ ವಡೆಯರೇ ಮೊದಲಾದವರು, ಹೈದರಲ್ಲಿ, ಟೀಪು ಸುಲ್ತಾನ್, ಈ ಮಹಾರಾಜರೆಲ್ಲಾ ಮತ್ತು ಈಸ್ಟ್ ಇಂಡಿಯಾ ಕಂಪೆನಿಯವರು ಕೊಟ್ಟಿರುವ ಇನಾಂಗಳನ್ನು ಕುರಿತು ಮುಂದಿನ ಸಂಚಿಕೆಗಳಲ್ಲಿ ತಿಳಿಯಪಡಿಸುತ್ತೇವೆ.

ಸರಕಾರಕ್ಕೆ ಇನಾಂ ಬಾಬಿನಲ್ಲಿ ಎಷ್ಟು ನಷ್ಟವಾದರೂ ಪರಂಪರೆಯಾಗಿ ಬಂದ ಈ ಇನಾಂಗಳನ್ನು ಆಯಾ ಜನರು ಅನುಭವಿಸಿಕೊಂಡು ಬರುತ್ತಿರುವುದು ಸರಿಯಷ್ಟೆ. ಜೋಡಿ ಮತ್ತು ಕಾಯಂಗುತ್ತಾ ಗ್ರಾಮದವರು ನಿಗದಿಯಾದ ಹಣವನ್ನು ಸರಕಾರ ದವರಿಗೆ ಕೊಡುತ್ತಾ ಬರುವುದು ಸರಿಯಷ್ಟೆ. ಈಚೆಗೆ ಇನಾಂಗ್ರಾಮಗಳನ್ನು ಕ್ರಮ

ಪಡಿಸಿ ಹಕ್ಕುದಾರರಿಗೆ ಹೊಸದಾಗಿ ಸನ್ನದು ಮುಂತಾದ್ದನ್ನು ಕೊಟ್ಟು ಕ್ವಿಟ್‌ರೆಂಟು, ಲೋಕಲ್ ಫಂಡ್, ಮೊದಲಾದದ್ದನ್ನು ಮಾತ್ರ ಇನಾಂದಾರರು ಕೊಡಬೇಕೆಂದು, ಪೂರ್ವದ ಚೀಫ್ ಕಮೀಷನರುಗಳೇ ನಿಷ್ಕರ್ಷಿಸಿದ್ದರು. ಅದೇ ಪ್ರಕಾರ ಇನಾಂದಾರರು ಈ ಮೊಬಲಗನ್ನು ಕೊಡುತ್ತ ಬರುತ್ತಿದ್ದರು. ಈಚೆಗೆ ಒಂದೆರಡು ವರುಷಗಳಿಂದ ಕೆಲವು ಇನಾಂದಾರರು ಈ ಹಣವನ್ನು ಸರಿಯಾಗಿ ಸರಕಾರಕ್ಕೆ ಪಾವತಿ ಮಾಡದೆ ಬಾಕಿ ನಿಲ್ಲಿಸಿಕೊಂಡಿದ್ದಾರೆ. ಆದ್ದರಿಂದ ಆ ಬಾಕಿಗಾಗಿ ಸರಕಾರದವರು ಆಯಾ ಗ್ರಾಮಗಳನ್ನು ಜಪ್ತಿ ಮಾಡಿ, ಹರಾಜು ಹಾಕಿಸುವಂತೆ ಅಪ್ಪಣೆಯಾಗಿತ್ತು. ಈ ಪ್ರಕಾರ ಕೆಲವು ಇನಾಂಗ್ರಾಮಗಳು ಹರಾಜಾಗಿ ಹೋದವು.

ಇನಾಂದಾರರ ಪೂರ್ವಿಕರಲ್ಲಿ ಕೆಲವರು ವಿದ್ವಾಂಸರಾಗಿ ವೇದಶಾಸ್ತ್ರನಿಷ್ಠರಾಗಿದ್ದುದರಿಂದ ಶ್ರೋತ್ರಿಯ ಮಾನ್ಯಗಳನ್ನೂ, ಮತ್ತೆ ಕೆಲವರು ಯುದ್ಧ ಮೊದಲಾದದ್ದನ್ನು ಮಾಡಿ ಜಯಶೀಲರಾದ ಕಾರಣ ರಕ್ತಕೊಡಗಿಗಳನ್ನೂ, ಇನ್ನು ಕೆಲವರು ವಿಧವಿಧವಾದ ಯುಕ್ತಿ, ಶಕ್ತಿ, ಸಾಮರ್ಥ್ಯಗಳನ್ನು ತೋರಿಸಿ ಇತರ ಇನಾಂ ಗ್ರಾಮಗಳನ್ನೂ, ಸಂಪಾದಿಸಿದರು. ಇವುಗಳನ್ನು ಅವರ ಸಂತತಿಯು ಪರಂಪರೆಯಾಗಿ ಅನುಭವಿಸುತ್ತ ಬಂತು. ಈ ಇನಾಂದಾರರು ಅನೇಕರು ರೈತರಿಗೆ ವ್ಯವಸಾಯಕ್ಕಾಗಿ ಭೂಮಿಗಳನ್ನು ಕೊಟ್ಟು, ಕೆಲವರಿಂದ ಹಣವನ್ನೂ, ತಮ್ಮ ಸ್ವಂತಕ್ಕೋಸ್ಕರ ಇರಿಸಿಕೊಂಡಿದ್ದ ಜಮೀನನ್ನು ಮಾಡತಕ್ಕ ಮತ್ತೆ ಕೆಲವರಿಂದ ಗುತ್ತಿಗೆಗಾಗಿ ಧಾನ್ಯವನ್ನೂ, ತೆಗೆದುಕೊಳ್ಳುತ್ತಿದ್ದರು. ಈ ಗುತ್ತಿಗೇ ರೈತರು ಒಂದೊಂದು ಸಮಯದಲ್ಲಿ ವಂಚಿಸಿ ಕೆಲವರು ಧಾನ್ಯಕ್ಕೆ ಬದಲಾಗಿ ಹಣವನ್ನೇ ಕೊಡುತ್ತಿದ್ದರು. ಇದನ್ನೇ ವಾಡಿಕೆಯಾಗಿ ಮಾಡಿಕೊಂಡು, ತಾವು ಗುತ್ತಿಗೇ ಧಾನ್ಯವನ್ನು ಎಂದಿಗೂ ಕೊಡುವದಿಲ್ಲ; ತಮ್ಮ ವ್ಯವಸಾಯದ ಭೂಮಿಗಾಗಿ ಕಂದಾಯವನ್ನು ಮಾತ್ರವೇ ಕೊಡುತ್ತೇವೆಂದು, ತಿರುಗಿಬಿದ್ದರು. ವ್ಯವಸಾಯ ವೃತ್ತಿಗೆ ಹೋಗದ ಕೆಲವು ಇನಾಂದಾರರು ಗತ್ಯಂತರವಿಲ್ಲದೆ, ರೈತರು ಕಂದಾಯವೆಂದು ಕೊಡತಕ್ಕ ಮೂರು ಕಾಸಿಗೇ ತೃಪ್ತಿಪಟ್ಟುಕೊಂಡು ಇದ್ದರು. ಈಚೆಗೆ ಈ ಕ್ವಿಟ್‌ರೆಂಟ್ ಪದ್ಧತಿಯು ಬಂದ ಕಾರಣ, ಇನಾಂ ಗ್ರಾಮದಿಂದ ಬರತಕ್ಕ ಆದಾಯವು ಅವರ ಜೀವನಕ್ಕೂ ಆಗಿ ಸರಕಾರದ ಹಣವನ್ನು ತೀರಿಸುವದಕ್ಕೆ ಸಾಕಾಗುತ್ತಿರಲಿಲ್ಲ. ಆದರೂ ಒದ್ದಾಡಿಕೊಂಡು ಬರುತ್ತಿದ್ದ ಈ ಜನರನ್ನು ಈಶ್ವರ ಬಹುಧಾನ್ಯ ಸಂವತ್ಸರದಲ್ಲಿ ಉಂಟಾದ ಕ್ಷಾಮವು ಚೆನ್ನಾಗಿ ನಾಶಮಾಡಿತು. ಅನೇಕ ರೈತರು ಸತ್ತು ಕೆಟ್ಟು, ಗ್ರಾಮಗಳು ಬೇಚಿರಾಕಾಗಿ, ಸರಕಾರದ ಭೂಮಿಗಳೇ ಎಷ್ಟೋ ಸಾಗುಬಿದ್ದು ಹಸ್ತಾಂತರಕೆ ನಷ್ಟವಾಗಿ, ರಾಜ್ಯಕ್ಕೆ ಹೆಚ್ಚಾಗಿ ಸಾಲವಾದದ್ದು ಸರಿಯಷ್ಟೆ. ಇದೇ ರೀತಿಯಲ್ಲಿ ಇನಾಂಗ್ರಾಮಗಳಲ್ಲಿಯೂ, ರೈತರು ಕೆಟ್ಟು ಹೋಗಿ ಇನಾಂದಾರರ ಆ ಗತಿಯು ಬಹಳವಾಗಿ ಕಡಮೆಯಾಯಿತು. ತಿನ್ನುವದಕ್ಕೆ ಇಲ್ಲದೆ ನವಾಬ ಸಾಬರೆಲ್ಲಾ ಫಕೀರ್ ಸಾಬರಾದರು. ಕ್ವಿಟ್‌ರೆಂಟ್ ಮೊದಲಾದ ಹಣ ಮಾತ್ರ ಇನಾಂದಾರರ ಮೇಲೆ ಹೇರಿಕೊಂಡಿತು. ಸರಕಾರದವರು ರೈತರುಗಳಿಗೆ ಕಂದಾಯವನ್ನು ಕೆಲವು

ಸಂದರ್ಭಗಳಲ್ಲಿ ಮಾಫ್ ಮಾಡಿದಂತೆ ಇನಾಂದಾರರು ಕೊಡತಕ್ಕ ಹಣಕ್ಕೂ ಮಾಫಾಗಲಿಲ್ಲ ; ಹೀಗೆ ಹಲವು ಕಾರಣಗಳಿಂದ ಈ ಬಡ ಇನಾಂದಾರರು ಸರಕಾರಕ್ಕೇ ಭಾರೀ ಬಾಕಿಯನ್ನು ಕೊಡಬೇಕಾಗಿ ಬಂತು. ಇದಕ್ಕಾಗಿ ಗ್ರಾಮಗಳನ್ನು ತಾಲ್ಲೂಕಿನವರು ಹರಾಜಿಗೂ ತಂದರು. ಈ ಇನಾಂದಾರರ ಪೂರ್ವಿಕರಲ್ಲಿ ಕೆಲವರು ಅನೇಕ ಧೊರೆಗಳಿಂದ ಬಹು ಶ್ರಮಪಟ್ಟು ಸಂಪಾದಿಸಿದ ಇನಾಂಗಳೆಲ್ಲಾ ಈಗ ಹೋಗುವ ಹೊತ್ತು ಬಂತು ಬಹು ದಿವಸದಿಂದಲೂ ಪುಷ್ಟಿಗೊಳಿಸಿಕೊಂಡು ನಾಲ್ಕು ಜನಕ್ಕೆ ಬೇಕಾಗಿದ್ದ ದೊಡ್ಡ ಮನುಷ್ಯರ ಮಕ್ಕಳ ಕೈಗೆ ನಿತ್ಯಯಾತ್ರೆಯ ಅಕ್ಷಯಪಾತ್ರೆ ಬರಬೇಕಾಯಿತು.

ಇವೆಲ್ಲವನ್ನೂ ಯೋಚಿಸಿ ನಮ್ಮ ದಿವಾನರವರು ಮಾಡಿದ ಹುಕ್ಕುಂನ ಬಗೆ ಹ್ಯಾಗೆಂದರೆ — ಇನಾಂದಾರರು ಕೊಡತಕ್ಕ ಬಾಕಿಗಾಗಿ ಸರಕಾರದವರು ಆಯಾ ಗ್ರಾಮಗಳನ್ನು ಹರಾಜು ಹಾಕಕೂಡದು. ಡೆಪ್ಯುಟೀ ಕಮೀಷನರು ಅವುಗಳನ್ನು ಜಪ್ತೀಮಾಡಿಸಿ ಸರಕಾರದ ವಶದಲ್ಲಿಟ್ಟು, ಸರ್ವೇ ಮುಂತಾದ್ದನ್ನು ಮಾಡಿಸಿ ಕಂದಾಯವನ್ನು ನಿಷ್ಕರ್ಷಿಸಬೇಕು. ಮತ್ತು ಗ್ರಾಮದ ಆಡಳಿತವನ್ನು ಅಮಲ್‌ದಾರರ ಮೂಲಕ ನಡಿಸುತ್ತ, ಅವರ ಹುಟ್ಟುವಳಿಯಲ್ಲಿ ಗ್ರಾಮಕ್ಕೆ ತಗಲುವ ಸರ್ವೇ ಮೊದಲಾದ ಸಿಬ್ಬಂದಿಯ ಖರ್ಚನ್ನು ಕಳೆದು, ಉಳಿದ ಹಣವನ್ನು ಸರ್ಕಾರದ ಬಾಕೀಗಾಗಿ ವಸೂಲು ಹಾಕಿಕೊಳ್ಳುತ್ತಾ ಬರಬೇಕು. ಮತ್ತು ಈ ಗ್ರಾಮಗಳ ಮೇಲೆ ಯಾರಿಗೆ ಯಾವ ಹಕ್ಕು ಇದ್ದಾಗ್ಯೂ ಸರಕಾರದವರ ಮೇಲೆ ಕೇಂದಲಾರದು.

ಇದರಿಂದ ಭೂಮಿಯನ್ನು ವಹಿವಾಟತಕ್ಕ ರೈತರ ಹಕ್ಕಿಗೆ ಬಾಧೆ ಇಲ್ಲ. ಈ ಗ್ರಾಮಗಳನ್ನು ಇನಾಂದಾರರು ೧೨ ವರ್ಷದ ಒಳಗಾಗಿ ಸರಕಾರದ ಬಾಕಿ ಎಲ್ಲವನ್ನೂ ಕೊಟ್ಟು ಬಿಡಿಸಿಕೊಳ್ಳಬೇಕು. ಹಾಗೆ ವಾಯಿದೆಯೊಳಗೆ ಬಿಡಿಸಿಕೊಳ್ಳದಿದ್ದರೆ, ಗ್ರಾಮಕ್ಕೆ ಇನಾಂದಾರರ ಹಕ್ಕು ಎಂದೆಂದಿಗೂ ತಪ್ಪಿಹೋಗುವುದು. ಸರಕಾರದ ಬಾಕಿ ಮತ್ತು ಗ್ರಾಮದ ಸಿಬ್ಬಂದೀ ಖರ್ಚು ತೀರಿ, ಉಳಿಯುವ ಹಣವನ್ನು ಡೆಪ್ಯೂಟೀ ಕಮಿಷನರವರು ಯುಕ್ತವರಿತು ಇಷ್ಟಬಂದಂತೆ ವಿನಿಯೋಗಿಸಬಹುದು, ಎಂದು ವಗೈರೆ.

ಇಂಥಾ ಹುಕ್ಕುಂನಿಂದ ನಾಶವಾಗಿ ಹೋಗಿದ್ದ ಇನಾಂದಾರರಿಗೆ ದೊಡ್ಡ ಉಪಕಾರವಾಯಿತು. ಹೀಗೆ ಪ್ರಜೆಗಳ ಕಷ್ಟಸುಖಗಳನ್ನರಿತು, ರಾಜಕಾರ್ಯಗಳನ್ನು ನಡಿಸತಕ್ಕದ್ದೇ ಯೋಗ್ಯರಾದ ಪ್ರಭುಗಳ ಲಕ್ಷಣ. ಆದರೆ ಗ್ರಾಮದ ಹುಟ್ಟುವಳಿಯಲ್ಲಿ ಖರ್ಚುಜಾತಾ ನಿಂತ ಹಣವನ್ನು ಇನಾಂದಾರರಿಗೆ ಕೊಟ್ಟುಬಿಡುವಂತೆಯೂ, ಮತ್ತು ಸರಕಾರದ ಬಾಕಿಗಾಗಿ ಇದುವರಿಗೆ ಆಗಿರುವ ಇನಾಂಗ್ರಾಮಗಳ ಹರಾಜನ್ನು ರದ್ದು ಮಾಡಿ, ಸರಕಾರದ ಜಿಮ್ಮೆಗೆ ತೆಗೆದುಕೊಂಡು ಆಡಳಿತವನ್ನು ನಡಿಸಿ, ಸರಕಾರಕ್ಕೆ ಕೊಡತಕ್ಕ ಬಾಕಿಯು ಸಂದ ಮೇಲೆ ಆ ಗ್ರಾಮಗಳನ್ನು ಅವರ ವಶಕ್ಕೆ ಬಿಡಿಸುವಂತೆಯೂ ಅಪ್ಪಣೆಯಾದರೆ, ಈ ಔದಾರ್ಯದ ಫಲವು ಪೂರ್ತಿಯಾಗುವುದು. ದೀನರಲ್ಲಿ ದಯೆಯಿಟ್ಟ ದಿವಾನರವರು ಈ ಅಪ್ಪಣೆಯನ್ನು ಮಾಡಿಯಾರೆಂದು ಕೋರುತ್ತೇವೆ.

೨

ಗ್ರಾಮಪಾಥೇಯ

ನಾನಾ ಕಾರಣಗಳಿಂದ ಪೂರ್ವದಲ್ಲಿದ್ದ ಈ ದೇಶದ ಐಶ್ವರ್ಯವು ಸಾಗಿ ಹೋಗಿಯೂ ಈಗಲೂ ಹಾಗೆ ಸಾಗಿಹೋಗುತ್ತಲೂ ಇದೆ. ಇದರ ಜೊತೆಗೆ ನಮ್ಮ ಜನರು ಅನ್ಯದೇಶದವರ ಮುಂದುಗಾರಿಕೆಯನ್ನು ನೋಡಿ ಕಲಿತು ತಮಗೆ ಆಗುವ ಅಲ್ಪ ಸ್ವಲ್ಪದ ಸಂಪಾದನೆಯನ್ನು ಅಂಥಾ ವೈಭವಕ್ಕಾಗಿ ಕಳೆಯುತ್ತಲೂ ಇದಾರೆ. ಈ ಪ್ರಕಾರ ಸುಭಿಕ್ಷವಾದ ಕಾಲದಲ್ಲಿ ಬಂದ ಆದಾಯವು ವೆಚ್ಚವಾಗಿ ಹೋದ ಮೇಲೆ ಬರೀ ಕೈಯಾಗಿ ಹೋಗುತ್ತಲೂ ಇದೆ.

ಈ ನಮ್ಮ ಭರತಖಂಡದಲ್ಲಿ ಗಾಳಿಯ ಗುಣವು ಒಂದು ಪ್ರಾಂತದಲ್ಲಿದ್ದ ಹಾಗೆ ಮತ್ತೊಂದು ಪ್ರಾಂತದಲ್ಲಿರುವುದಿಲ್ಲ. ಇದರಿಂದ ಮಳೆಯು ಎಲ್ಲಾ ಕಡೆಯಲ್ಲಿಯೂ ಒಂದೇ ಸಮನಾಗಿ ಸಕಾಲದಲ್ಲಿ ಬೀಳದೆ ಎಲ್ಲಿಯಾದರೂ ಪೈರು ಕೆಟ್ಟು ಕ್ಷಾಮ ಪ್ರಾಪ್ತ ವಾಗುವುದು ವಾಡಿಕೆಯಾಗುತಾ ಬಂತು. ನಾಲ್ಕು ಅಥವಾ ಐದು ವರ್ಷಕ್ಕೆ ಒಂದು ಸಾರಿ ನಮ್ಮ ಭರತಖಂಡದ ಯಾವ ಪ್ರದೇಶದಲ್ಲಿಯಾದರೂ ಪದಾರ್ಥಗಳ ಧಾರಣೆ ಏರಿ ಹೋಗಿ ಕ್ಷಾಮ ಪ್ರಾಪ್ತವಾಗುವುದು ಅನುಭವಸಿದ್ಧವಾಗಿದೆ. ಹಡಗಿನ ಮೇಲೆ ಯಾಗಲಿ ರೇಲ್ ಗಾಡಿಗಳ ಮೇಲೆಯಾಗಲಿ ದೇಶಾಂತರಗಳಿಂದ ವರ್ತಕರು ಸಾಮಾನು ಗಳನ್ನು ತಂದು ಮಾರಬಹುದು. ಪದಾರ್ಥವೇನೋ ಒಂದು ವೇಳೆ ದೊರೆಯ ಬಹುದು. ಆದರೆ ಧಾರಣೆವಾಸಿಯು ಬಡಜನರ ಯೋಗ್ಯತೆಗೆ ಮೀರಿರುವುದು. ಇದ ರಿಂದ ಪ್ರಜೆಗಳಿಗೆ ಕಷ್ಟ ಹೆಚ್ಚುವುದು. ಮತ್ತು ಈ ದೇಶದಲ್ಲಿ ಪ್ರಜಾಸಂಖ್ಯೆಯು ಪ್ರತಿ ವರ್ಷವೂ ಹೆಚ್ಚಾಗುತ್ತಲೇ ಇದೆ ಎಂದು ಎಲ್ಲರೂ ಬಲ್ಲರು. ಇದಕ್ಕೆ ಸರಿಯಾಗಿ ಜನರ ಆದಾಯವೂ ಬಂಡವಾಳವೂ ಕಡಿಮೆಯಾಗುವುದು ಸಹಜವೇ.

ಹೀಗೆಲ್ಲಾ ಹಲವು ನಿಮಿತ್ತಗಳಿಂದ ಪ್ರಜೆಗಳ ಕಷ್ಟ ವೃದ್ಧಿಯಾಗುತ್ತಾ ಇದೆ. ಇದರ ನಿವಾರಣೆಗೆ ಮಾಡಬೇಕಾದ ಅನೇಕ ಉಪಾಯಗಳಲ್ಲಿ ಸಾರ್ವತ್ರಿಕವಾಗಿ ವ್ಯಾಪನೆ ಯಾಗಿ ಜನರು ಅನುಸರಿಸಬಹುದಾದ ಮಾರ್ಗ ಒಂದನ್ನು ನಮೂದು ಮಾಡಿ ಬರೆಯು ತೇನೆ. ನಾನು ಬರೆಯುವ ವಿಷಯವು ಸರ್ವತ್ರರಿಗೂ ವ್ಯಾಪಿಸತಕ್ಕದ್ದಾದರೂ ಗ್ರಾಮಾಂತರಗಳಲ್ಲಿರತಕ್ಕವರಿಗೆ ಬಹಳ ಅಗತ್ಯವಾಗಿದೆ. ಪಟ್ಟಣವಾಸಿಗಳು ಹೇಗಾ ದರೂ ಜೀವನಮಾಡಿಕೊಳ್ಳುತ್ತಾರೆ. ಗ್ರಾಮಾಂತರದಲ್ಲಿರತಕ್ಕವರಿಗೇ ಕ್ಷಾಮಕಾಲದ ಕಷ್ಟವು ಮೊದಲು ತಟ್ಟತಕ್ಕದ್ದು. ಆದ್ದರಿಂದ ಗ್ರಾಮಗಳ ವಿಷಯವನ್ನು ಕುರಿತು ಮೊದಲು ಯೋಚಿಸುತ್ತೇನೆ.

ಸಕಾಲದಲ್ಲಿ ಮಳೆ ನಡಿಯದೆ ಪೈರು ಕೆಟ್ಟು ಗ್ರಾಮಾಂತರಗಳಲ್ಲಿ ಜನರಿಗೆ ತಿನ್ನುವು ದಕ್ಕೆ ಧಾನ್ಯವಿಲ್ಲದೆ ತಗ್ಗಾದ ಕಡೆಯಿಂದ ಕೊಂಡು ತರಲು ಧನಕ್ಕೆ ಗತಿ ಇಲ್ಲದೆ ಊತಾಳೆ ಗಡ್ಡೆಯನ್ನು ತಂದು ಹೆಚ್ಚಿಸಿ ಪಚ್ಚಡಿ ಮಾಡಿ ಅದನ್ನು ಬೇಯಿಸಿ ತಿನ್ನುವುದು ; ಹುಣಿಸೆ

ಬೀಜವನ್ನು ಒಡಿನಲ್ಲಿ ಹಾಕಿ ಹುರಿದು ಅವನ್ನು ಬೀಸಿ ಹಿಟ್ಟು ಮಾಡಿ ಅದನ್ನು ಕುದಿಯುವ ನೀರಿಗೆ ಹಾಕಿ ಕೊಳಸಿ ರಾಗಿ ಹಿಟ್ಟಿನ ಜೊತೆಗೆ ಹಾಕಿ ಮಿಶ್ರಮಾಡಿ ನುಂಗುವುದು ; ಹಾಳಕೆರೆಗಳಲ್ಲಿ ನೆಲದೊಳಗೆ ಬೆಳೆಕೊಂಡಿರುವ ಕುಂಕರಿಗೆಡ್ಡೆ, ಇತರ ಕಾಡು ಗೆಡ್ಡೆಗಳು, ತಂಪಾದ ಜಡೆ ಹುಟ್ಟಿಕೊಂಡಿರುವ ಕಾಡುಸೊಪ್ಪು, ಇವುಗಳನ್ನು ಬಡಜನರು ಗತಿಗೆಟ್ಟು ತಿನ್ನುತ್ತಿರುವುದು, ಇದನ್ನೆಲ್ಲಾ ನಾನು ಕಣ್ಣಾರ ನೋಡಿ ಆ ಸ್ಥಿತಿಯನ್ನು ಕುರಿತು ಕ್ಷಾಮ ಪ್ರಾಪ್ತವಾಗಿದೆ ಎಂದು ಪಟ್ಟಣಗಳಲ್ಲಿರುವ ಅಧಿಕಾರಿಗಳಲ್ಲಿ ಹೇಳಿಕೊಂಡರೆ ಸುಮಿಸು ಕೂಡೆ ಆಪತ್ತನ್ನು ಹೇಳಿಕೊಂಡಂತೆಯೇ ಆಯಿತು.

ಗ್ರಾಮಾಂತರಗಳಲ್ಲಿ ಧಾನ್ಯದ ದಾಸ್ತಾನ್ ಇಲ್ಲವೆ ಹೆಚ್ಚಾಗಿ ಬೆಳೆಯುತಕ್ಕ ಭಾರಿ ರೈತರೂ ಸಹಾ ವರ್ಷಾವಧಿ ಬೇಕಾಗುವ ಮನೆ ಖರ್ಚಿಗೆ ಸ್ವಲ್ಪ ಕಾಳು ಕಡಿಯನ್ನು ಇರಿಸಿಕೊಂಡು ಉಳಿದದ್ದನ್ನು ಮಾರಿ ಹಣದ ಪುಟ್ಟ ಗಂಟನ್ನು ಮಾಡಿಕೊಳ್ಳುವರು. ಹಸಿದು ಹಾಹಾಕಾರ ಪಡುವ ಜನರಿಗೆ ಬಲ್ಲಿದರು ತಮ್ಮ ಹಣವನ್ನೆಲ್ಲಾ ಕೊಟ್ಟುಬಿಟ್ಟರೂ ಹಸಿದಿರುವ ಬಡವರಿಗೆ ಕೊಟ್ಟ ಒಂದು ಮುಷ್ಟಿ ಹಿಟ್ಟಿಗೆ ಸಮನಾಗಲಾರದು. ಪೂರ್ವಕಾಲದಲ್ಲಿ ಭೂಮಿಯನ್ನು ಸರ್ಕಾರದವರು ರೈತರಿಂದ ಬಟಾಯಿ ಸಾಗುವಳಿ ಮಾಡಿಸುತ್ತಿದ್ದರು. ಬಂದ ದವಸದಲ್ಲಿ ಕುಳಪಾಲು ಹೋಗುತಾ ರಾಜಪಾಲನ್ನು ಆಯಾ ಗ್ರಾಮಗಳಲ್ಲಿಯೇ ಸರ್ಕಾರಿ ಕಣಜಗಳಲ್ಲಿ, ಹಗೇವುಗಳಲ್ಲಿ ತುಂಬಿ ದಾಸ್ತಾನ್ ಇಟ್ಟಿರುತಿದ್ದರು. ರಾಜ್ಯಕ್ಕೆ ಮಳೆ ಇಲ್ಲದೆ ಆಗಲಿ ಇತರ ಕಾಟಕಾಯಗಳಿಂದಾಗಲಿ ಕ್ಷೋಭೆ ಬಂದಾಗ ತಕ್ಕಮಟ್ಟಿನ ಕ್ರಯ ತೆಗೆದುಕೊಂಡೋ, ದರಿದ್ರರಾದರೆ ಅಂಥವರಿಗೆ ಧರ್ಮಕ್ಕಾಗಿಯೋ ಧಾನ್ಯವನ್ನು ಪ್ರಜೆಗಳ ಕ್ಷೇಮಕ್ಕಾಗಿ ಸರ್ಕಾರದವರು ಕೊಡಿಸುತ್ತಿದ್ದರು. ಹೀಗೆ ಜನರಿಗೆ ಧಾನ್ಯವೇನೋ ದೊರೆಯಲು ಅನುಕೂಲವಾಗಿತ್ತು. ಇಂಥಾ ಏರ್ಪಾಡು ಈ ಕಾಲಸ್ಥಿತಿಯಲ್ಲಿ ಸಾಧ್ಯವಿಲ್ಲ. ಸರ್ಕಾರದವರು ಮಾಡಿರುವ ಈ ಕಾಲದ ಕಂದಾಯ ಕಾಣಿಕೆಯ ಏರ್ಪಾಡೂ ಇರಬೇಕು, ಸರ್ಕಾರಕ್ಕೆ ನಷ್ಟವೂ ಆಗಬಾರದು, ರೈತರ ಕ್ಷೇಮಕ್ಕಾಗಿ ಧಾನ್ಯದ ದಾಸ್ತಾನೂ ಇರಬೇಕು, ರೈತರು ಸಾಲಗಾರರಾಗಿ ಕೆಟ್ಟೂ ಹೋಗಕೂಡದು, ಮನೆಯ ವೆಚ್ಚಕ್ಕಾಗಲೀ ಪ್ರಸ್ತುತಗಳಿಗಾಗಲಿ ಭೂಸ್ಥಿತಿಗಳ ಅಭಿವೃದ್ಧಿಗಾಗಲಿ ಸುಲಭವಾದ ಬಡ್ಡಿಗೆ ಗ್ರಾಮದಲ್ಲಿಯೇ ಸಾಲ ದೊರೆಯಬೇಕು, ರೈತನ ವ್ಯವಸಾಯಕ್ಕಾಗಲಿ ಅವನ ಸಂಸಾರಕ್ಕಾಗಲೀ ಬೇಕಾಗುವ ಸಾಮಾನುಗಳು ಸುಲಭವಾದ ಕ್ರಯಕ್ಕೆ ಗ್ರಾಮದಲ್ಲಿಯೇ ದೊರೆಯಬೇಕು,— ಇಂಥಾ ಒಂದು ಏರ್ಪಾಡನ್ನು ಮಾಡಿದರೆ ಜನಗಳ ಕಷ್ಟ ನಿವಾರಣೆಯಾಗಲು ಸಂದೇಹವಿಲ್ಲ. ಅಂಥಾ ಏರ್ಪಾಡು ಯಾವುದು ?

ಈ ಹೊಸ ಸಂಗತಿಯನ್ನು ಕುರಿತು ಒಟ್ಟು ಕೂಡಿಸಿ ಸೂತ್ರಪ್ರಾಯವಾಗಿ ಸೂಚಿಸುವ ಬರವಣಿಗೆಗಿಂತಲೂ ಉದಾಹರಣ ರೂಪವಾಗಿ ಒಂದು ಗ್ರಾಮವನ್ನು ಊಹಿಸಿಕೊಂಡು ಅದನ್ನು ಕುರಿತು ಬರೆದರೆ ಸಾಧಾರಣ ಜನರಿಗೆ ತತ್ರಾಪಿ ಗ್ರಾಮಾಂತರ ವಾಸಿಗಳಿಗೆ ಚೆನ್ನಾಗಿ ಬೋಧೆಯಾಗಬಹುದು.

ಈಶಪುರವೆಂದು ಒಂದು ಗ್ರಾಮವನ್ನು ಊಹಿಸಿಕೊಳ್ಳೋಣ. ಇದರ ಪ್ರಜಾ ಸಂಖ್ಯೆ ಅಬಾಲವೃದ್ಧರೂ ಸೇರಿ ೨೦೦ ಇದೆ. ಈ ಗ್ರಾಮದ ಒಟ್ಟು ಸಾಗುವಳಿ ಜಮೀನು ೩೦೦ ಎಕರೆ ಇದೆ. ಎಕರೆ ೧ಕ್ಕೆ ಸಾಲ್ ೧ಕ್ಕೆ ಸರೇರಾಸ್ ಕೃಷ್ಣರಾಜ ೨೦೦ ಸೇರಿನ ಖಂಡಗವಲ್ಲಿ ೪ ಖಂಡಗ ಅಥವಾ ೮ ಪಲ್ಲ ರಾಗಿ ಇರ್ವಾರಾ ಉತ್ಪತ್ತಿಯಾಗುವುದು. ಒಟ್ಟು ಗ್ರಾಮಕ್ಕೆ ೮ × ೩೦೦ = ೨೪೦೦ ಪಲ್ಲ ರಾಗಿ ಉತ್ಪತ್ತಿಯಾಗುವುದು.

ಈ ವೂರಲ್ಲಿ ೨೦೦ ಜನ ನಿವಾಸಿಗಳಿದಾರೆಯಷ್ಟೆ. ದಿವಸ ೧ಕ್ಕೆ ತಲೆ ೧ಕ್ಕೆ ೧ ಸೇರು ದವಸದ ಪ್ರಕಾರ ಒಟ್ಟು ಆ ಗ್ರಾಮದ ಪ್ರಜೆಗಳಿಗೆ ೨೦೦ ಸೇರು ಅಥವಾ ೨ ಪಲ್ಲ ರಾಗಿ ಬೇಕಾಗುವುದು. ಒಂದು ತಿಂಗಳು ಅಥವಾ ೩೦ ದಿವಸಕ್ಕೆ ೬೦ ಪಲ್ಲ ಬೇಕು. ಸನ್ ೧೮೭೬-೭೭ನೇ ಇಸವಿ ಈಶ್ವರ ಸಂವತ್ಸರದಂಥಾ ವೀರಕ್ಷಾಮ ಬರುವುದು ಬಹಳ ಕಡಿಮೆ. ಆದರಲ್ಲಿಯೂ ರೇಲ್‌ಗಾಡಿಗಳು ಈಗಿನ ಹಾಗೆ ಎಲ್ಲಾ ಕಡೆಗೂ ಓಡಿಯಾಡು ತಿರುವಾಗ ಧಾನ್ಯವಿಲ್ಲದೆ ಗ್ರಾಮಾಂತರಗಳಲ್ಲಿ ಪ್ರಜಾಕ್ಷೋಭೆಯಾಗುವುದೂ ಕಡಿಮೆ. ಒಂದು ವರುಷ ಬೆಳೆ ಕೆಟ್ಟು ಹೋಗಿ ಕ್ಷಾಮ ಬರುವ ಸಂದರ್ಭದಲ್ಲಿ ಅದು ಜೂನ್ ತಿಂಗಳು ಜೂಲೈ ತಿಂಗಳು ಆಷಾಢ ಶ್ರಾವಣಮಾಸಗಳಿಂದ ಡಿಸೆಂಬರು ಜನವರಿ ಪುಷ್ಯ ಮಾಘ ಮಾಸದವರಿಗೆ ಸರಾಸರಿ ೬ ತಿಂಗಳು ಅ ಬರ ಇರಬಹುದೆಂದು ಅನುಭವದ ಮೇಲೆ ಒಂದು ಅಂದಾಜು ಮಾಡಿ ಇಟ್ಟುಕೊಳ್ಳೋಣ. ಮೇಲಿನ ದರದ ಮೇರೆ ಮೇಲಿನ ೬ ತಿಂಗಳಿಗೆ ೩೬೦ ಪಲ್ಲ ರಾಗಿ ಬೇಕಾಗುವುದು. ಈ ೩೬೦ ಪಲ್ಲ ರಾಗಿಯನ್ನು ದಾಸ್ತಾನಾಗಿ ಇಟ್ಟುಕೊಂಡರೆ ವೀರಕ್ಷಾಮವನ್ನು ಬಿಟ್ಟು ಸಾಧಾರಣ ಕ್ಷಾಮವನ್ನು ಆ ವೂರವರು ನೀಸಿಕೊಳ್ಳಬಹುದು.

ಮೇಲೆ ಕಂಡ ಈಶಪುರದಲ್ಲಿ ಸಾಗುವಳಿ ಆಗಿರುವ ಜಮೀನು ಮತ್ತು ರೈತರು ದನ ಮೇಯಿಸಲು ಹಿಡುವಳಿ ಪೈಕಿ ಹುಲ್ಲುಗಾವಲಿಗೋಸ್ಕರ ಬಿಟ್ಟುಕೊಂಡಿರುವ ಜಮೀನು ಬಾಗಾಯಿತು ಜಮೀನು ಇವೆಲ್ಲಾ ಒಟ್ಟಾಗಿ ಸೇರಿ ೩೦೦ ಎಕರೆ ಹಿಡುವಳಿ ಎಂದು ಗೊತ್ತಾಗಿದೆ. ಸಾಗುವಳಿ ಮಾಡಿದ ರೈತ ಮತ್ತು ಜಮೀನಿನ ಖಾತೆದಾರ ಅಥವಾ ಅನುಭವದಾರನು ರೇಖೆ ಮಾಡಿದ ದವಸದಲ್ಲಿ ಜೋಯಿಸ, ಜೋಗಿ, ಜಂಗಮ, ದಾಸ ಮೊದಲಾದವರಿಗೆ ಧರ್ಮಕ್ಕೆ ಕಾಳು ಕೊಡುವ ರೀತಿಯಲ್ಲಿ "ಗ್ರಾಮಪಾಥೇಯ"ಕ್ಕೆ ಎಂದು ಹುದುವಿನಲ್ಲಿ ಖಂಡಗ ೧ಕ್ಕೆ ೫ ಸೇರು ರಾಗಿಯನ್ನು ಕೊಡಬೇಕು. ಎಕರೆ ೧ಕ್ಕೆ ೪ ಖಂಡಗ ರಾಗಿ ಬೆಳೆಯುವುದಾಗಿ ಮೇಲೆ ನಾವು ನಿಷ್ಕರ್ಷೆ ಮಾಡಿರುವ ಪ್ರಕಾರ ಎಕರೆ ೧ಕ್ಕೆ ೨೦ ಸೇರು ರಾಗಿ ಕೊಡಬೇಕು. ರೂಪಾಯಿ ಬೆಳೆಯಾಗಲಿ ಕಡೆಗೆ ೧೨ ಎಕರೆ ೧ಕ್ಕೆ ೨೦ ಸೇರು ರಾಗಿ ಕೊಡಬೇಕು. ಆದರೆ ೧೨ ಆಣೆ ಫಸಲಿಗೆ ಆಣೆ ಬೆಳೆಯಾಗಿದ್ದರೂ ಮೇಲಿನ ದರದಂತೆ ಕೊಡಬೇಕು. ಆದರೆ ೧೨ ಆಣೆ ಫಸಲಿಗೆ ಕಡಿಮೆಯಾಗಿದೆ ಎಂದು ಶಾನುಭೋಗ ಪಟೇಲರ "ಪಹಣಿ" ಲೆಕ್ಕದ ದಾಖಲೆಯಿಂದ ತಿಳಿಯಬಂದರೆ ಅಂಥಾ ಕುಳದಿಂದ ಬೆಳೆದ ದವಸದ ದಾಮಾಯಿಷ್ ಪ್ರಕಾರ ವಸೂಲ್ಮಾಡತಕ್ಕದ್ದು. ತರಿ ಜಮೀನ್‌ದಾರರು, ಬಾಗಾಯಿತು ಕುಳಗಳು, ಬರೀ ಹುಲ್ಲನ್ನೇ

ಬೆಳೆಸತಕ್ಕ ಕುಳಗಳು, ಕೈ ತೋಟದವರು, ಇವರೇ ಮೊದಲಾಗಿ ವಿಶಿಷ್ಟ ಜಮೀನ್ ಹಿಡುವಳಿದಾರರೂ ಮೇಲ್ಕಂಡ ಎಕರೆ ದರದಂತೆ ರಾಗಿಯನ್ನೇ ಕೊಡಬೇಕು. ಅನೇಕ ಗ್ರಾಮಗಳಲ್ಲಿ ಪಾಯಖಾರಿ ಕುಳಗಳಾಗಿರುವ ರೈತರು ಸದರಿ ಎಕರೆ ರಿವಾಜಿನಂತೆ ಜಮೀನು ಇರುವ ಗ್ರಾಮಕ್ಕೇ ತಂತಮ್ಮ ದಾಮಾಯಿಷ್ ಉಲುಪೆ ರಾಗಿಯನ್ನು ಕೊಡಬೇಕು.

ಸದರಿ ಲೆಕ್ಕಾಚಾರದ ಪ್ರಕಾರ ೩೦೦ ಎಕರೆಗೂ ದರ ಎಕರೆ ೧ಕ್ಕೆ ೨೦ ಸೇರಿನಂತೆ ೩೦೦ × ೨೦ = ೬೦೦೦ ಸೇರು ರಾಗಿ ಅಥವಾ ೬೦ ಪಲ್ಲ ರಾಗಿ ಈಸಪುರಕ್ಕೆ ಸಾಲಿಯಾನಾ ದಾಸ್ತಾನಾಗುವದು. ಹಿಂದೆ ಹೇಳಿದ ಹಾಗೆ ಶುದ್ಧಾಂಗವಾಗಿ ಬೆಳೆ ಇಲ್ಲದೇ ಹೋದ ವರುಷ ೬ ತಿಂಗಳಿಗೆ ಗ್ರಾಮದ ಜನರಿಗೆ ಬೇಕಾಗುವಷ್ಟು ರಾಗಿ ೬ × ೬೦ = ೩೬೦ ಪಲ್ಲ, ಸಾಲ್ ೧ಕ್ಕೆ ೬೦ ಪಲ್ಲದಂತೆ ೬ ವರ್ಷದಲ್ಲಿ ದಾಸ್ತಾನ್ ಭರ್ತಿಯಾಗುವುದು.

ಹುದುವಿನಲ್ಲಿ ವಸೂಲಾದ ಈ ದವಸವನ್ನು ಹಗೇವಿನಲ್ಲಿಯಾಗಲಿ ಕಣಜದಲ್ಲಿಯಾಗಲಿ ಗ್ರಾಮದ ಬುರುಜುಗಳಲ್ಲಿಯಾಗಲಿ ಹಾಕಿ ಕಾಪಾಡಬೇಕು. ಆರು ವರುಷದ ತರುವಾಯ ವಸೂಲಾಗುವ ರಾಗಿಯನ್ನು ದಾಸ್ತಾನಿಗೆ ಸೇರಿಸಿ, ಹಿಂದಿನ ೬ನೇ ವರ್ಷದ ಹಳೇ ರಾಗಿಯನ್ನು ಕಾಲಕ್ರಯಕ್ಕೆ ಖುಷ್ ಖರೀದಿಗಾಗಲಿ ಒಂದು ಗೊತ್ತಾದ ಕಿಮ್ಮತ್ತನ್ನು (upset price) ಇಟ್ಟುಕೊಂಡು ಹರಾಜು ಮೂಲಕವಾಗಿಯಾಗಲಿ ಮಾರಬೇಕು. ಹೀಗೆ ೬೦ ಖಂಡಗ ರಾಗಿ ಮಾರಾಟವಾದ ಮೇಲೆ ಸಾಲಿಯಾನಾ ಬಂದ ಹಣದ ವಿನಿಯೋಗವನ್ನೂ ಮತ್ತು ೩೬೦ ಪಲ್ಲ ದಾಸ್ತಾನ್ ರಾಗಿಯನ್ನು ಹೇಗೆ ವಿಲೇವಾರಿ ಮಾಡಬೇಕೆಂಬ ವಿಚಾರವನ್ನೂ ಎಲ್ಲಾ ಧಾನ್ಯವನ್ನೂ ಬಿಟ್ಟು ರಾಗಿಯನ್ನೇ ಯಾಕೆ ಜಮಾಯಿಸಬೇಕೆಂಬುವನ್ನೂ ಮುಂದೆ ಬರೆಯುತ್ತೇವೆ.

ಟಿ. ವಿ. ವೆಂಕಟಾಚಲ ಶಾಸ್ತ್ರೀ

ಚಿಂತನ-೧೧

೧

ವಿದ್ಯೆ

ನಮ್ಮ ಪ್ರಾಚೀನರ ತಿಳಿವಳಿಕೆಯಂತೆ ನಾವು ಕಲಿಯುವ ವಿದ್ಯೆಗಳು ಅನೇಕವಾಗಿವೆ. ಪರಾ ಅಪರಾ, ಸಗುಣ ನಿರ್ಗುಣ ಮುಂತಾಗಿ ವಿದ್ಯೆಯನ್ನು ಎರಡಾಗಿ ಒಡೆಯುತ್ತವೆ, ಉಪನಿಷತ್ತುಗಳು. ತರ್ಕ, ವೇದವಿದ್ಯೆ, ವೃತ್ತಿಜೀವನ, ರಾಜನೀತಿಗಳೆಂದು ನಾಲ್ಕನ್ನು ಹೇಳುತ್ತವೆ, ನೀತಿಶಾಸ್ತ್ರ ಗ್ರಂಥಗಳು. ವೇದ ವೇದಾಂಗಗಳು, ಮೀಮಾಂಸೆ ಮುಂತಾದ ಹದಿನಾಲ್ಕನ್ನು ಹೇಳುತ್ತವೆ ಕೆಲವು ಪುರಾಣಗಳು. ಆಯುರ್ವೇದಾದಿಗಳನ್ನು ಕೂಡಿಸಿ ಹದಿನೆಂಟನ್ನು ಪಟ್ಟಿಮಾಡುತ್ತವೆ ಇನ್ನು ಕೆಲವು ಪುರಾಣಗಳು. 'ಭೃಗುಸಂಹಿತೆ'ಯಲ್ಲಿ ಮೂವತ್ತೆರಡು ವಿದ್ಯೆಗಳನ್ನು ಕುರಿತಿದೆ. ವಾತ್ಸ್ಯಾಯನಾದ್ಯರು ಹೇಳಿರುವ ಅರುವತ್ತನಾಲ್ಕು ಕಲೆಗಳೂ ಜೈನಗ್ರಂಥಗಳಲ್ಲಿಯ ಎಪ್ಪತ್ತೆರಡು ಕಲೆಗಳೂ ವ್ಯಾವಹಾರಿಕವಾದ ಅನೇಕ ವಿದ್ಯೆಗಳೇ ಆಗಿವೆ. ಹೀಗೆಯೇ ಷಷ್ಟಿತಂತ್ರಗಳೂ ಚತುಷ್ಷಷ್ಟಿ ತಂತ್ರಗಳೂ ಒಂದರ್ಥದಲ್ಲಿ ವಿದ್ಯೆಗಳೇ.

ಸಾಂಪ್ರದಾಯಿಕವಾಗಿ ಹೇಳಿರುವ ಈ ಜ್ಞಾನಶಾಖೆಗಳಲ್ಲಿ ಪ್ರವೀಣನಾದವನು ಪೂರ್ಣವ್ಯಕ್ತಿ ಎಂಬುದು ನಮ್ಮವರ ನಂಬಿಕೆ. ಆದರೆ ಇಷ್ಟು ಶಾಖೆಗಳಲ್ಲಿ ಯಾವನೇ ಒಬ್ಬನು ಪೂರ್ತಿಯಾಗಿ, ಇಲ್ಲವೆ ಸ್ವಲ್ಪಮಟ್ಟಿಗಾದರೂ ಪರಿಚಯ ಪರಿಶ್ರಮಗಳನ್ನು ಪಡೆದಿರುವುದು ಸಾಧ್ಯವೇ ? ವ್ಯಕ್ತಿ ತನಗೆ ಇಷ್ಟವಾದ ಒಂದು ಶಾಖೆಯಲ್ಲಿ ಪರಿಶ್ರಮಗಳಿಸುವುದೇ ಒಂದು ತಪಸ್ಸು. ಆರನೆಯ ಶತಮಾನದ ಗಂಗದೊರೆ ದುರ್ವಿನೀತ ಎಂಬವನು ಅನೇಕ ಕಾವ್ಯ ಕಥೆ ನಾಟಕಗಳಲ್ಲಿ, ನೀತಿಶಾಸ್ತ್ರ ಗಾಂಧರ್ವವಿದ್ಯೆಗಳಲ್ಲಿ ಹಸ್ತಿಶಿಕ್ಷೆ ಅಶ್ವಶಿಕ್ಷೆಗಳಲ್ಲಿ, ಹೀಗೆಯೇ ಇನ್ನೂ ಎಷ್ಟೋ ವಿದ್ಯೆಗಳಲ್ಲಿ ತಜ್ಞನಾಗಿದ್ದನೆಂದು ಅವನ ಸಲ್ಲಾಳ್ ತಾಮ್ರಪಟಗಳಲ್ಲಿ ನಿರೂಪಣೆಯಿದೆ. ಬಾಣಭಟ್ಟನ ಕಾದಂಬರಿಯ ಕಥಾನಾಯಕ ಚಂದ್ರಾಪೀಡನೂ ಪಂಪಕವಿಯ 'ಭಾರತ'ದ ಕಥಾನಾಯಕ ಅರ್ಜುನನೂ ಹೀಗೆಯೇ ನಾನಾ ವಿದ್ಯೆಗಳನ್ನು ಬಲ್ಲವರಾಗಿದ್ದರು ಎಂದು ಆಯಾ ಕವಿಗಳ ಕೃತಿಗಳಲ್ಲಿ ನಿರೂಪಣೆಯಿದೆ.

ಇಷ್ಟೆಲ್ಲಾ ವಿದ್ಯೆಗಳನ್ನು ಏಕೆ ಕಲಿಯಬೇಕು ? ಇವುಗಳಿಂದ ಏನು ಪ್ರಯೋಜನ ? ಇವನ್ನು ಕುರಿತ ಸಂದರ್ಭಗಳನ್ನು ಗಮನಿಸಿದರೆ, ನಮ್ಮವರು ಕವಿ ದೊಡ್ಡ ಕವಿಯಾಗಲು, ವಿದ್ವಾಂಸ ಘನವಿದ್ವಾಂಸನಾಗಲು, ವ್ಯಕ್ತಿ ದೊಡ್ಡಮನುಷ್ಯನಾಗಲು, ಒಟ್ಟಿನಲ್ಲಿ ಯಾವುದೇ ಕ್ಷೇತ್ರದ ಸಾಧಕ ಸಿದ್ಧಪುರುಷನಾಗಲು ವಿವಿಧ ವಿದ್ಯೆಗಳ ವ್ಯಾಸಂಗ ಅವಶ್ಯವೆಂದು ತಿಳಿದಿದ್ದರು ಎಂಬುದಾಗಿ ಹೇಳಬೇಕಾಗುತ್ತದೆ. ವ್ಯವಹಾರದ ವಿದ್ಯೆಗಳು ವ್ಯಕ್ತಿಗೆ ಲೌಕಿಕದಲ್ಲಿ ಯಶಸ್ವಿಯಾಗಿ ಬಾಳುವುದನ್ನು ಕಲಿಸುತ್ತವೆ; ಬ್ರಹ್ಮವಿದ್ಯೆ ಅಥವಾ ಅಧ್ಯಾತ್ಮವಿದ್ಯೆ ಆತ್ಮಸ್ವರೂಪವನ್ನು ತಿಳಿಸಿಕೊಡುತ್ತವೆ ; ಇದು ಹಂಚಿಕೆ. ಇದರಲ್ಲಿ ಎರಡನೆಯದೇ ಶ್ರೇಯಸ್ಕರ ಎಂಬುದನ್ನು ಅವರು ತಿಳಿದಿದ್ದರು ಎಂಬ ಸತ್ಯವು ಸ್ಪಷ್ಟವಾಗುತ್ತದೆ.

ವಿದ್ಯೆ ಯಾವುದೇ ಇರಲಿ, ಚಿಲುಮೆಯನ್ನು ತೋಡಿದಷ್ಟೂ ನೀರು ಚಿಮ್ಮುತ್ತ ಹೋಗುವಂತೆ, ತಿಳಿದವರ ವಿದ್ಯೆ ಇನ್ನೂ ಹೆಚ್ಚುತ್ತ ಹೋಗುತ್ತದೆ ; ಕಲಿಯುವವರ ಜ್ಞಾನದಾಹ ತಣಿಯುತ್ತ ಹೋಗುತ್ತದೆ ಅದು ತನಗೆ ಇತರರಿಗೆ ಸಮಾನವಾಗಿ ಆನಂದವನ್ನು ಕೊಡುತ್ತವೆ. "ಅದು ಮನುಷ್ಯನ ವಿಶೇಷವಾದ ರೂಪ. ಅವನ ಗುಪ್ತನಿಧಿ. ಅವನಿಗೆ ಸುಖಸಂತೋಷಗಳನ್ನೂ ಕೀರ್ತಿಯನ್ನೂ ಕೊಡುವ ಶಕ್ತಿ. ಗುರುಗಳಿಗೆ ಗುರು ; ಅದೇ ಅವನಿಗೆ ಪರದೈವ" ಎಂದು ಭರ್ತೃಹರಿಯ ಒಂದು ಸುಭಾಷಿತ ಅದರ ಮಹಿಮೆಯನ್ನು ಕೀರ್ತಿಸುತ್ತದೆ.

ಹೀಗೆ ಹಿತವನ್ನುಂಟುಮಾಡುವ ವಿದ್ಯೆಯನ್ನು ಅರ್ಜಿಸುವದು ಹೇಗೆ ? "ವಿದ್ಯೆಯ ಅರ್ಜನೆ ಸಾಧ್ಯವಾಗುವುದು ಗುರುಜನರ ಶುಶ್ರೂಷೆಯಿಂದ, ವಿಪುಲವಾದ ದ್ರವ್ಯದಾನದಿಂದ, ಇಲ್ಲವೆ ವಿದ್ಯೆಯ ವಿನಿಮಯದಿಂದ" ಎನ್ನುವ ಮಾತಿದೆ. "ಜೂಜು, ನಾಟಕ, ಲೈಂಗಿಕ ಆಸಕ್ತಿ, ಆಲಸ್ಯ ನಿದ್ರೆಗಳು, ಸುಮ್ಮನೆ ಪುಸ್ತಕಗಳನ್ನು ಅಚ್ಚುಕಟ್ಟು ಮಾಡುವುದು ಇವು ವಿದ್ಯೆಯ ಶತ್ರುಗಳು" ಎಂದು 'ಸ್ಮೃತಿಚಂದ್ರಿಕೆ'ಯಲ್ಲಿ ಹೇಳಿದೆ. "ಉದ್ರೇಕಗೊಳ್ಳುವ ಸ್ವಭಾವದವರು, ಕಲಿಯುವ ಕುತೂಹಲವಿಲ್ಲದವರು, ಆಲಸಿಗಳು, ರೋಗಿಗಳು, ಮರವಿನ ಸ್ವಭಾವದವರು ಇವರಿಗೆ ವಿದ್ಯೆ ಹತ್ತುವುದಿಲ್ಲ" ಎಂದು 'ನಾರದೀಯ ಪುರಾಣ'ದಲ್ಲಿ ತಿಳಿಸಿದೆ. ಇದೇ ರೀತಿ 'ಮಹಾಭಾರತ'ದ ಉದ್ಯೋಗಪರ್ವದಲ್ಲಿ, "ಗುರುವನ್ನು ಆಶ್ರಯಿಸಿ ತಿಳಿಯದವರಿಗೆ, ಆತುರಪಡುವವರಿಗೆ, ಹೊಗಳಿಕೆಯನ್ನು ನಿರೀಕ್ಷಿಸುವವರಿಗೆ ವಿದ್ಯೆ ಒಲಿಯುವುದಿಲ್ಲ" ಎಂಬ ಎಚ್ಚರಿಕೆಯ ಮಾತು ಬಂದಿದೆ. "ಸಂಯಮವಿಲ್ಲದೆ ವರ್ತಿಸುವುದು, ಹಣಸಂಪಾದನೆಯನ್ನೇ ಮುಖ್ಯವಾದ ಗುರಿಯನ್ನಾಗಿಟ್ಟುಕೊಳ್ಳುವುದು, ಲೋಲುಪ್ತಿಯಲ್ಲಿರುವುದು, ಅವಿಧೇಯತೆಯಿಂದ ವರ್ತಿಸುವುದು, ಆಲಸ್ಯದಿಂದ ಹೊತ್ತು ಕಳೆಯುವುದು ಇವು ವಿದ್ಯೆಗೆ ವಿಘ್ನಕಾರಿಗಳು" ಎಂದು ಬೇರೊಬ್ಬ ಸುಭಾಷಿತಕಾರನು ತಿಳಿಸಿದ ಹಿತೋಕ್ತಿಯಿದೆ. ಇವನ್ನು ಮನಸ್ಸಿಗೆ ತಂದುಕೊಂಡು ವಿಹಿತವಾದ ಮಾರ್ಗವನ್ನು ಹಿಡಿಯಬೇಕು. ಆ ಮಾರ್ಗವೇ ವಿದ್ಯೆಯ, ಸದ್ವಿದ್ಯೆಯ

ಅರ್ಜನೆ, ಉಪಾಸನೆ. ದೇಶದ ಅಜ್ಞಾನ ದಾರಿದ್ರ್ಯಗಳ ನಿವಾರಣೆಗೆ ವಿದ್ಯೆಯೇ ಅಂಜನ, ನೀಲಾಂಜನ. "ನಾಸ್ತಿ ವಿದ್ಯಾಸಮಂ ಚಕ್ಷುಃ"

೨

ವಿದ್ವಾಂಸ

ವಿದ್ವಾಂಸ ಅಥವಾ ಪಂಡಿತ ಎಂದರೆ ಯಾರು ? ಮಹಾಭಾರತ ಮೊದಲಾದ ಗ್ರಂಥಗಳಲ್ಲಿ ಈ ಶಬ್ದಗಳು ಕಾಣಿಸಿಕೊಳ್ಳುವ ಸಂದರ್ಭಗಳನ್ನು ಗಮನಿಸಿದರೆ ಇವಕ್ಕೆ ಜ್ಞಾನಿ, ವಿವೇಕಶಾಲಿ ಮುಂತಾಗಿ ಅರ್ಥಗಳನ್ನು ಹೇಳಬಹುದು. ಆದರೆ ಯಾವುದೇ ವಿಷಯವನ್ನು ನಿಷ್ಕೃಷ್ಟವಾಗಿ ತಿಳಿದವನು, ತಿಳಿಸಬಲ್ಲವನು ಎಂಬುದು ರೂಢಿಯ ಸಾಮಾನ್ಯಾರ್ಥ. ಚೆನ್ನಾಗಿ ಮಡಕೆ ಕುಡಿಕೆಗಳನ್ನು ಮಾಡುವ ಕುಂಬಾರನನ್ನಾಗಲಿ, ಸೊಗಸಾಗಿ ಬಟ್ಟೆಹೊಲೆಯುವ ದರ್ಜಿಯನ್ನಾಗಲಿ ನಾವು ಪಂಡಿತ ಎನ್ನುವುದಿಲ್ಲ. ಯಾವುದಾದರೂ ಕೈಕಸುಬು ಕಲಿತು ಅದರಲ್ಲಿ ಕೌಶಲ ಸಂಪಾದಿಸಿದವನನ್ನು ಕಲಾವಿದ ಎನ್ನಲೂ ನಾವು ಎಷ್ಟೋ ವೇಳೆ ಹಿಂಜರಿಯುತ್ತೇವೆ. ಈ ಭಾವನೆಯು ಸರಿ ತಪ್ಪು ಏನೇ ಇರಲಿ, ಯಾವ ವಿಧವಾದ ವ್ಯವಹಾರಗಳಲ್ಲಿ, ರಚನೆಗಳಲ್ಲಿ ವಿಶೇಷವಾದ ಬುದ್ಧಿವ್ಯಾಪಾರಕ್ಕೆ ಅವಕಾಶವುಂಟೋ ಆ ವ್ಯವಹಾರಗಳಲ್ಲಿ ತೊಡಗುವವರನ್ನು, ಆ ರಚನೆಗಳ ನಿರ್ವಾಹಕರನ್ನು ನಾವು ವಿದ್ವಾಂಸರೆನ್ನುತ್ತೇವೆ. ಸಾಮಾಜಿಕವಾಗಿ ಅವರಿಗೆ ಹೆಚ್ಚಿನ ಮಾನ್ಯತೆ ಸಲ್ಲುವುದು ವಿದ್ಯಾವಂತಸಮಾಜದಲ್ಲಿ ಸಹಜವೇ ಆಗಿದೆ.

ವಿದ್ವಾಂಸ ಬುದ್ಧಿವ್ಯಾಪಾರದ ಅವಲಂಬನೆಯಿರುವ ಯಾವುದೇ ಜ್ಞಾನಶಾಖೆಯ ಎಲ್ಲ ವಿವರಗಳನ್ನೂ ತಿಳಿಯುವುದರಲ್ಲಿ ಆಸಕ್ತನಾಗಿರುತ್ತಾನೆ. ಅವನ ಆಸಕ್ತಿ ಯಾವಾಗಲೂ ಕುಗ್ಗುವುದಿಲ್ಲ. ಅವನ ಕುತೂಹಲ ಯಾವಾಗಲೂ ತಗ್ಗುವುದಿಲ್ಲ. ಜೇನುನೊಣ ನಾನಾಪುಷ್ಪಗಳ ಸಾರವನ್ನು ಸಂಗ್ರಹಿಸಿ ಮಧುವಾಗಿ ಪರಿವರ್ತಿಸಿ ಅದನ್ನು ತನ್ನ ಹುಟ್ಟಿನೊಳಗೆ ಸಂಗ್ರಹಿಸಿಟ್ಟುಕೊಳ್ಳುವಂತೆ ಅವನು ಲೋಕವ್ಯಾಪಾರದ ಪರಿಶೀಲನೆ, ಶಾಸ್ತ್ರಾಭ್ಯಾಸ ಮತ್ತು ಸ್ವಾನುಭವಗಳ ಮೂಲಕವಾಗಿ ಬೆಳಸಿಕೊಂಡ ವಿವೇಕವೆಂಬ ಮಧುವನ್ನು ತನ್ನ ಹೃದಯಸಂಪುಟವಲ್ಲಿ ಇಟ್ಟುಕೊಂಡಿರುತ್ತಾನೆ. ಮೊದಲು ತಾನು ಶ್ರದ್ಧೆಯಿಂದ ಕಲಿಯುತ್ತಾನೆ. ಕಲಿತುದನ್ನು ನಿಷ್ಕೃಷ್ಟವಾಗಿ ತನ್ನದನ್ನಾಗಿ ಮಾಡಿಕೊಳ್ಳುತ್ತಾನೆ. ಚಿಂತನ ಮಂಥನಗಳಿಂದ ಅವನ ತಿಳಿವಳಿಕೆಗೆ ಒಂದು ನಿಶ್ಚಿತವಾದ ರೂಪ ಬರುತ್ತದೆ. ಆಗ ಅದು ಸಾರಾಸಾರ ವಿವೇಕದಿಂದ ಹದಗೊಂಡು ಪ್ರಮಾಣವಾಗುವ ಸತ್ತ್ವವನ್ನು ಪಡೆದಿರುತ್ತದೆ. ಹೀಗೆ ಆದಾಗ ಅವನ ಮಾತು, ಬರೆಹ, ಪ್ರಯೋಗಗಳು ಸಮಾಜದ ಒಳಿತನ್ನು ಸಾಧಿಸುತ್ತವೆ ; ಸಮಾಜವನ್ನು ಮುನ್ನಡಸುತ್ತವೆ.

ವಿದ್ವಾಂಸ ತಾನು ಮೆಚ್ಚಿದ ಜ್ಞಾನಶಾಖೆಯ ಕೈವಾರಿ; ಅದರ ಬೆಳವಣಿಗೆಗಾಗಿ ನಿರಂತರವಾಗಿ ಪರಿಶ್ರಮಪಡುವ ಕಾಯಕ ಆತನದು. "ಶಾಸ್ತ್ರಗಳನ್ನು ನಿತ್ಯವೂ ಓದಿ

ದಂತೆಲ್ಲಾ ಜ್ಞಾನವು ವಿಸ್ತಾರವಾಗುತ್ತದೆ, ಹೆಚ್ಚು ತಿಳಿಯಬೇಕೆಂಬ ಆಸೆಯೂ ಹೆಚ್ಚಾಗುತ್ತಾ ಹೋಗುತ್ತದೆ''. ಇದು ಮನುಸ್ಮೃತಿಯ ಮಾತು. ಹೀಗೆ ವಿದ್ಯೆಯ ಹಂಬಲ ಬಲವಾದರೆ, ಭಾಗವತದ ಕವಿ ಸಹಜವಾಗಿಯೇ ಪ್ರಶ್ನಿಸುವಂತೆ ವಿದ್ವಾಂಸನಿಗೆ ತನ್ನ ಶರೀರಸ್ಥಿತಿಯ ವಿಷಯದಲ್ಲಿಯೇ ಮಮತೆಯಿಲ್ಲವಾಗುವುದು; ಇನ್ನು ಅವನಿಗೆ ಮನೆ ಮಕ್ಕಳು ಹಣ ಇವುಗಳ ಮೋಹವೇನು ಬಂತು?

ಜ್ಞಾನಾರ್ಜನೆಯೂ ನಿಸ್ಪೃಹವಾದ ಜ್ಞಾನಸಂಪಾದನೆಯೂ ಕಡಿದಾದ ಬೆಟ್ಟವನ್ನು ಹತ್ತುವಂತೆ, ರಭಸವಾದ ಪ್ರವಾಹದಲ್ಲಿ ಈಜುವಂತೆ ಪ್ರಯಾಸಕರವಾದವು. "ವಿದ್ವಾಂಸರ ಪರಿಶ್ರಮವನ್ನು ವಿದ್ವಾಂಸನೇ ಬಲ್ಲರು; ತೀವ್ರವಾದ ಹೆರಿಗೆಯ ಬೇನೆ ಬಂಜೆಗೇನು ಗೊತ್ತು"? ಎಂಬುದಾಗಿ ಕುವಲಯಾನಂದಕಾರನು, ಅದನ್ನು ಅರಿತೇ ಹೇಳಿದ್ದಾನೆ ಎನ್ನಬಹುದು.

ವಿದ್ವಾಂಸನು ವ್ಯಾಸಂಗನಿಷ್ಠೆಯುಳ್ಳವನು, ಸ್ವಯಂ ವಿಚಾರಶಕ್ತಿಯುಳ್ಳವನು, ಋಜುಬುದ್ಧಿಯಿಂದ ನಡೆಯುವವನು, ನಿಷ್ಠುರನಲ್ಲದವನು ಎಂದು ಕೀರ್ತಿತನಾಗಿದ್ದಾನೆ. "ಆದರೂ ಕೆಲವೊಮ್ಮೆ ಪಾಂಡಿತ್ಯದ ಬಲದಿಂದ ಕೊಬ್ಬಿಹೋಗುವ ಜನರುಂಟು. ಎಲ್ಲರೂ ಹಾಗಲ್ಲ; ಸಜ್ಜನರಾದ ಪಂಡಿತರು ಪ್ರಶಾಂತರಾಗಿರುತ್ತಾರೆ". ಇದು ಜಗನ್ನಾಥಪಂಡಿತನ ನಿರ್ಣಯ. "ವಿದ್ವಾಂಸರು ಮಾನ್ಯರಾಗಬೇಕಾದರೆ ಅಧೀರರಾಗಬಾರದು, ಕಠಿನರಾಗಿರಬಾರದು, ನಿಷ್ಕ್ರಿಯರಾಗಿರಬಾರದು, ಹರಕುಚಿಂದಿಗಳಲ್ಲಿ ಕಾಣಿಸಿಕೊಳ್ಳಬಾರದು, ತಾವಾಗಿಯೇ ವಾದವಿವಾದಗಳಲ್ಲಿ ಪ್ರವೇಶಿಸಬಾರದು''. ಇದು ಗರುಡಪುರಾಣದೊಳಗಿನ ಸೂಚನೆ. "ಶಾಸ್ತ್ರಗಳನ್ನು ಅಧ್ಯಯನಮಾಡಿದ ಮೇಲೂ ಜನ ಮೂರ್ಖರಾಗಿರಬಹುದು, ಯಾವಾತನಿಗೆ ಆಚರಣೆ ಶಕ್ಯವೋ ಆತನೇ ವಿದ್ವಾಂಸ" ಎಂದು ಒಂದು ಹಿತೋಕ್ತಿ.

ಬ್ರೊನೊವ್ಸ್ಕಿ ಎಂಬ ವಿದೇಶೀಯ ವಿದ್ವಾಂಸರೊಬ್ಬರು ವಿದ್ವಾಂಸರ ಲಕ್ಷಣಗಳನ್ನು ಹೀಗೆ ಹೇಳುತ್ತಾರೆ:

"ಸಾರ್ವಜನಿಕ ಜೀವನದಲ್ಲಿ ಸಾಮಾನ್ಯವಾಗಿ ಅನುಸರಿಸುವ ಯೋಗ್ಯತಾ ನಿರ್ಣಯಕ್ಕೆ ಅನುಗುಣವಾಗಿ ಎಲ್ಲ ವಿದ್ವಾಂಸರೂ ತಂತಮ್ಮ ಕ್ಷೇತ್ರಗಳಲ್ಲಿ ಒಂದು ವಿಲಕ್ಷಣ ರೀತಿಯಲ್ಲಿ ಋಜುಬುದ್ಧಿಯವರು ಎಂಬುದು ನಿಜ. ತಮ್ಮ ಸಾಧನೆಗಳ ಬಗೆಗೆ ಅವರು ದೊಡ್ಡದಾಗಿ ಹೇಳಿಕೊಳ್ಳುವುದಿಲ್ಲ. ಅವರು ವಂಚಿಸುವುದಿಲ್ಲ. ತಾವು ಹೇಳುವುದನ್ನು ಬೇರೆಯವರು ಒಪ್ಪುವ ಹಾಗೆ ಮಾಡಬೇಕೆಂದು ಹೇಗೋ ಪ್ರಯತ್ನಿಸುವುದಿಲ್ಲ. ಇನ್ನೊಬ್ಬನಿಗೆ ಇದು ಇಷ್ಟ, ಇದು ಅನಿಷ್ಟ ಎಂದೋ, ಅಧಿಕಾರಕ್ಕೆ ಮಣಿದೋ ವರ್ತಿಸುವುದಿಲ್ಲ. ತಮಗೆ ತಿಳಿಯದ ವಿಷಯದಲ್ಲಿ ಅವರಿಗೆ ಮುಚ್ಚುಮರೆಯಿಲ್ಲ. ಅವರ ಭಿನ್ನಾಭಿಪ್ರಾಯಗಳು ಎಷ್ಟೋ ಮಟ್ಟಿಗೆ ಗಂಭೀರವಾದವು. ಅವರ ವಾದಸರಣಿಯನ್ನು ಜನಾಂಗ, ರಾಜಕೀಯ, ಲಿಂಗ ಅಥವಾ ವಯಸ್ಸು ಇವಾವುವೂ ದಾರಿತಪ್ಪಿಸುವುದಿಲ್ಲ. ತಿಳಿದವರು ಚಿಕ್ಕವರಿರಲಿ, ದೊಡ್ಡವರಿರಲಿ, ಅವರು ಹೇಳುವುದನ್ನು ತಾಳ್ಮೆಯಿಂದ ಕೇಳು

ತ್ತಾರೆ. ಇವು ವಿದ್ವತ್ತಿನ ಸಾಮಾನ್ಯ ಲಕ್ಷಣಗಳು; ಸ್ವಾರಸ್ಯವೆಂದರೆ, ಇವೇ ವಿಜ್ಞಾನದ ಲಕ್ಷಣಗಳು ಕೂಡ."

೩

ನಿಜ ಮತ್ತು ಅದರ ಆಭಾಸ

ಈಗ ಮೂವತ್ತು ನಲವತ್ತು ವರ್ಷಗಳ ಹಿಂದೆ ಸ್ಲೇಟು ಬಳಪ, ಒಂದೆರಡು ಪುಸ್ತಕಗಳಲ್ಲಿ ನಮ್ಮ ಮಕ್ಕಳ ಶಾಲೆಯ ಕಲಿಕೆ ಸಾಗುತ್ತಿದ್ದಿತು. ಯಾವುದೇ ಬಗೆಯ ಸಮವಸ್ತ್ರಗಳನ್ನು ಯಾರೂ ಅವರಿಗೆ ವಿಧಿಸುತ್ತಿರಲಿಲ್ಲ. ಆಗ ಕಲಿಕೆಯ ಪಾಠಪಟ್ಟಿ ಸ್ವಲ್ಪ ಕಡಿಮೆಯಾಗಿದ್ದಿತು ಎಂದು, ಸುಲಭವಾಗಿದ್ದಿತು ಎಂದು ಈಗಿನವರು ಹೇಳುತ್ತಾರೆ. ಆದರೆ ಓದಿಸುವುದೂ ಓದುವುದೂ ಗಡುಚಾಗಿ ಚುರುಕಾಗಿ ನಡೆದು, ಅಂದಿನ ಅವಶ್ಯಕತೆಗೆ ತಕ್ಕಂತೆ ಉದ್ದೇಶಿಸಿದ ಪರಿಣಾಮ ಸಾಧ್ಯವಾಗುತ್ತಿದ್ದಿತು ಎಂದು ಸಾಮಾನ್ಯವಾಗಿ ಹೇಳಬಹುದು. ಹಾಗೆ ಓದಿ ದೊಡ್ಡವರಾದವರು ಜೀವನದ ನಾನಾರಂಗಗಳಲ್ಲಿ, ವೃತ್ತಿಗಳಲ್ಲಿ ಉದ್ಯಮಗಳಲ್ಲಿ ನಿರಂತರವಾಗಿ ತೊಡಗಿ, ತಂತಮ್ಮ ರೀತಿಯಲ್ಲಿ ನಮ್ಮ ದೇಶದ ಸಾಮಾಜಿಕ ಜೀವನವನ್ನು ಬೆಳೆಸಿದ್ದಾರೆ, ಬೆಳೆಸುತ್ತಿದ್ದಾರೆ.

ಈಗ ನಮ್ಮ ಮಕ್ಕಳುಮರಿ ಬಿಗಿಯಾದ ಸಮವಸ್ತ್ರಗಳನ್ನು ತೊಟ್ಟು, ದಪ್ಪ ಬೂಟುಗಳನ್ನು ಕಾಲಲ್ಲಿ ಮೆಟ್ಟಿ, ಹತ್ತಾರು ಪುಸ್ತಕಗಳನ್ನು ಗಿಡಿದ ನೇಲುಚೀಲಗಳನ್ನು ಬಗ್ಗಿದ ಬೆನ್ನ ಮೇಲೆ ಹೊತ್ತು, ಶಿಸ್ತಾಗಿ ಶಾಲೆಗಳಿಗೆ ಹೋಗುವುದನ್ನು ನಾವು ನೋಡುತ್ತಿದ್ದೇವೆ. ಅವರ ವ್ಯಾಸಂಗವು ಒಂದು ವ್ಯವಸ್ಥಿತಕ್ರಮದಲ್ಲಿ ನಡೆಯುತ್ತಿರಬೇಕು ಎಂದು ನಮ್ಮ ನಂಬಿಕೆ. ಆದರೆ ಕೆಲವರು ಹೇಳುತ್ತಾರೆ: "ನಮ್ಮ ಮಕ್ಕಳು ತಮ್ಮ ಪಠ್ಯವಿಷಯ ವ್ಯಾಸಂಗಗಳಿಗಿಂತ ಚಲನಚಿತ್ರಗಳು, ಅಂತರರಾಷ್ಟ್ರೀಯ ಕ್ರೀಡಾಪಂದ್ಯಗಳು, ರಾಜಕೀಯರಂಗದ ಅಂತರಲಾಗಗಳು ಇವನ್ನೇ ಹೆಚ್ಚಾಗಿ ತಿಳಿದಿರುತ್ತಾರೆ" ಎಂದು. ಇದು ಎಷ್ಟು ನಿಜ ಎಂಬುದು ಮಕ್ಕಳ ಅಧ್ಯಾಪಕರೂ ತಂದೆ ತಾಯಿಗಳೂ ಬಲ್ಲರು. ಇದು ಏನೇ ಇದ್ದರೂ, ಯಾವುದೇ ಪಠ್ಯವಿಷಯದ ಖಚಿತವಾದ ವಸ್ತುಜ್ಞಾನ, ತರ್ಕ, ಭಾಷೆ ವ್ಯಾಕರಣಗಳಿಗೆ ಸಮ್ಮತವಾದ ರೀತಿಯಲ್ಲಿ ಆ ಜ್ಞಾನದ ಅಭಿವ್ಯಕ್ತಿಸಾಮರ್ಥ್ಯ ಇವುಗಳ ಮಿಗಿಲಾದ ಕೊರತೆಯಿದೆಯೆಂದು ಹಲವರು ಹೇಳುತ್ತಿರುತ್ತಾರೆ. ಈಗ ನಮ್ಮ ಶಾಲೆ ಕಾಲೇಜುಗಳ ಕಟ್ಟಡಗಳು ದೃಢವಾದವು, ವಿಶಾಲವಾದವು; ಅವುಗಳಲ್ಲಿಯ ಪೀಠೋಪಕರಣಗಳು ಉತ್ತಮವಾದವು; ಪಠ್ಯಕ್ರಮಗಳು ವ್ಯವಸ್ಥಿತವಾದವು; ವಿದ್ಯಾರ್ಥಿಗಳಿಗೆ ನೀಡುತ್ತಿರುವ ವಿದ್ಯಾರ್ಥಿವೇತನಸೌಲಭ್ಯಗಳು ಉದಾರವಾದವು. ಇವೆಲ್ಲ ಇದ್ದೂ ಕಲಿಯುವ ವಿದ್ಯೆ, ಕಲಿಸುವ ಕ್ರಮ ಟೊಳ್ಳೋ ಗಟ್ಟಿಯೋ ತಿಳಿದವರು ಹೇಳಬೇಕು.

ಇಲ್ಲಿಯ ಧ್ವನಿಗೆ ಕೆಲವರು ಬೇಸರಿಸಬಹುದು. ಈ ಸಮಸ್ಯೆ ಶಾಲೆ ಕಾಲೇಜುಗಳಿಗೆ ಸೀಮಿತವಾದುದಲ್ಲ. ನಮ್ಮ ನಾಡಿನ ಬದುಕಿನ ಎಲ್ಲ ಮುಖಗಳಲ್ಲಿಯೂ ಇದರ ಪ್ರತಿ

ಬಿಂಬವನ್ನು ಕಾಣಬಹುದು: ನಮ್ಮ ಎಷ್ಟೋ ದೇವಾಲಯದ ಅಂಗಣಗಳು ಈಗ ವಿಶಾಲಗೊಂಡಿವೆ; ಅಲ್ಲಿ ವಿದ್ಯುದ್ದೀಪಗಳ ವ್ಯವಸ್ಥೆ ಚೆನ್ನಾಗಿದೆ; ಪೂಜಾಕೈಂಕರ್ಯ ಗಳ ಕಟ್ಟುಪಾಡು ಉತ್ತಮಗೊಂಡಿದೆ. ಮೂಲಮೂರ್ತಿ, ಉತ್ಸವಮೂರ್ತಿಗಳ ವಿಶೇಷಾಲಂಕಾರಗಳ ಆಕರ್ಷಣೆ ಬೆಳೆದಿದೆ. ಆದರೆ ದೇವತಾಸನ್ನಿಧಿಯ ಪ್ರಸನ್ನತೆ, ಪಾವಿತ್ರ್ಯ ಈಗ ಉಳಿದಿವೆಯೇ? ಅರ್ಚನೆ, ವಂದನೆ, ಧ್ಯಾನಗಳೆಲ್ಲ ಆಡಂಬರದ ಗೌಜು ಗದ್ದಲಗಳಲ್ಲಿ ಮುಳುಗಿಹೋಗಿಲ್ಲವೇ? ನಮ್ಮ ಮದುವೆಗಳನ್ನೇ ತೆಗೆದುಕೊಳ್ಳೋಣ. ವರೋಪಚಾರಗಳು, ಕನ್ಯೆಗೆ ಇಡುವ ಒಡವೆ ವಸ್ತ್ರಗಳು, ಉಡುಗೊರೆಗಳು, ಆದ್ದೂರಿಯ ಆರತಿ ಅಕ್ಷತೆಗಳು, ಸಂಗೀತ ಕಛೇರಿಗಳು ಇವುಗಳ ಹುಯಿಲಿನಲ್ಲಿ ಮದುವೆಯ ಪಾವಿತ್ರ್ಯ ವನ್ನು ತಿಳಿಸಿ, ಬಾಂಧವ್ಯವನ್ನು ಬೆಸೆಯುವ ವೈದಿಕಕಲಾಪಗಳನ್ನು ಹೆಣ್ಣುಗಂಡುಗಳಾಗಲಿ ಅವರ ತಂದೆತಾಯಿಗಳಾಗಲಿ ಗಮನಿಸುತ್ತಾರೆಯೇ? ಆ ಬಗೆಗೆ ಕುತೂಹಲವೇನಾದರೂ ಉಂಟೇ? ಕಛೇರಿಗಳಲ್ಲಿಯೋ ಕಾರ್ಖಾನೆಗಳಲ್ಲಿಯೋ ಇತರ ಕ್ಷೇತ್ರಗಳಲ್ಲಿಯೋ ಕೆಲಸ ಮಾಡುವವರು ತಾವು ಕುಳಿತು ಕೆಲಸಮಾಡುವ ಸ್ಥಳ ಸನ್ನಿವೇಶಗಳು, ಕೊಠಡಿಗಳು ಮತ್ತು ಅಲ್ಲಿಯ ಸೌಕರ್ಯಗಳು, ಸಂಬಳಸಾರಿಗೆ ಭತ್ಯ ಇತ್ಯಾದಿಗಳು ಇವುಗಳ ವಿಷಯದಲ್ಲಿ ತೋರಿಸುವ ಮುತುವರ್ಜಿ ಆತಂಕಗಳನ್ನು ತಾವು ಜವಾಬ್ದಾರಿಯಿಂದ ನಿರ್ವಹಿಸಬೇಕಾದ ಕೆಲಸಕಾರ್ಯಗಳ ವಿಷಯದಲ್ಲಿ, ಅವುಗಳ ಪ್ರಗತಿವಿಗತಿಗಳ ವಿಷಯದಲ್ಲಿ ತೋರಿಸುತ್ತಾರೆಯೇ?

ಯಾವುದೇ ವಿಷಯ, ಸಂದರ್ಭ, ಕೆಲಸಕಾರ್ಯವನ್ನು ಎತ್ತಿಕೊಂಡರೂ ಅದರ ಮುಖ್ಯೋದ್ದೇಶ, ಮೂಲಾರ್ಥ, ತಿರುಳು ಅಮುಖ್ಯವಾಗಿ ಹೋಗಿ, ಹೊರವ್ಯೆಹೊಳಪು ಮುಖ್ಯವಾಗಿ ಮೆರೆಯುತ್ತಿರುವುದು ಇಂದು ಸಾಮಾನ್ಯವಾದ ನೋಟವಾಗಿದೆ; ರತ್ನಾಕರ ಕವಿ ಹೇಳುವಂತೆ "ನರುಗಬ್ಬಿನೊಳಗಣ ರಸವ ಕಾಣದೆ ಪಶು ಹೊರಗಣೆಲೆಯ ಸವಿವಂತೆ" ನಮ್ಮ ಸ್ಥಿತಿಯಾಗಿದೆ. ನಾವು ನಿಜವನ್ನು ಹಿಂದಿಕ್ಕಿ, ಅದರ ಅಭಾಸವನ್ನು ಮೆಚ್ಚು ತ್ತಿದ್ದೇವೆ. ಕಿವಿಯ ಸಾರ್ಥಕತೆ ಇರುವುದು ಶ್ರವಣಕ್ಕಾಗಿ; ಓಲೆಯಿಂದ ಅದನ್ನು ಅಲಂಕರಿಸುವುದು ಗೌಣವಾದ್ದು. ಕೈಗಳ ಸಾರ್ಥಕತೆ ಇರುವುದು ದುಡಿಮೆಗಾಗಿ; ಬಳೆ ಯಿಂದಲೋ ಉಂಗುರದಿಂದಲೋ ಅವನ್ನು ಅಲಂಕರಿಸುವುದು ಗೌಣವಾದ್ದು. ಒಳಗಿನ ತೇಜಸ್ಸು ಮುಖ್ಯ, ಹೊರಗಿನ ಶೃಂಗಾರ ಮುಖ್ಯವಲ್ಲ ಎನ್ನುವುದನ್ನು ತಿಳಿದಾಗ ನಮ್ಮ ಸಾಮಾಜಿಕಜೀವನದ ಸಮಸ್ಯೆಗಳು ತಗ್ಗುತ್ತವೆ; ಬಾಳು ಹಸನಾಗುವುದು ಸಾಧ್ಯ ವಾಗುತ್ತದೆ.

೪

ಜೈನ ಸರಸ್ವತಿ

ವಿದ್ಯಾಭಿಮಾನಿ ದೇವತೆ ಸರಸ್ವತಿಯನ್ನು ಮಲ್ಲಿಗೆ ಹೂವಿನಂತೆ, ಚಂದ್ರನಂತೆ, ಇಬ್ಬನಿಯಂತೆ, ಹಾರದಂತೆ ಬೆಳ್ಳಗಿರುವವಳು, ಶುಭ್ರವಾದ ವಸ್ತ್ರವನ್ನು ಧರಿಸುವವಳು,

ಬೆಳ್ದಾವರೆಯ ಪೀಠದ ಮೇಲೆ ಕುಳಿತಿರುವವಳು, ಕೈಯಲ್ಲಿ ವೀಣೆ ಪುಸ್ತಕಗಳನ್ನು, ಅಕ್ಷಮಾಲೆ ಅರಗಿಳಿ ಕಮಲಗಳನ್ನು ಹಿಡಿದಿರುವವಳು ಮುಂತಾಗಿ ವರ್ಣಿಸಿರುವುದನ್ನು ನಾವು ಬಲ್ಲೆವು. ವೈದಿಕ ದೇವತಾವ್ಯೂಹದಲ್ಲಿ ಆಕೆಗೆ ಬ್ರಹ್ಮನ ಪತ್ನಿಯಾಗಿ, ವಿದ್ಯಾಧಿ ದೇವತೆಯಾಗಿ ಮೇಲಾದ ಸ್ಥಾನವನ್ನು ನಮ್ಮ ಸಂಪ್ರದಾಯ ಕೊಟ್ಟು ಮನ್ನಿಸಿದೆ. ಆದರೆ ಈ ಮೂರ್ತಿಸ್ವರೂಪದ ಸರಸ್ವತಿಯ ಕಲ್ಪನೆ ಜೈನಸಂಪ್ರದಾಯಕ್ಕೆ ಇಷ್ಟವಾದು ದಲ್ಲ. ಇಲ್ಲಿ ಅಮೂರ್ತವಾದ ವಾಕ್ಕೇ, ಜಿನೇಂದ್ರನ ವಾಣಿಯೇ ಸರಸ್ವತಿ ಎಂಬಂತಹ ಸ್ತುತಿ ಬರುವುದು ಸಾಮಾನ್ಯ.

ಜಿನೇಂದ್ರ ಸರ್ವಶ್ರೇಷ್ಠನಾದ ಪೂಜ್ಯವ್ಯಕ್ತಿ, ಆತನ ದಿವ್ಯವಾಣಿಯೇ ವಾಚನ ಶ್ರವಣ ಅರ್ಚನಾದಿಗಳಿಗೆ ಯೋಗ್ಯವಾದ್ದು. ಇದು ಜೈನಕವಿಗಳ ನಂಬಿಕೆ. ಕವಿ ಪಂಪನು ವಾಕ್ ಶರೀರದ ಸರಸ್ವತಿಯನ್ನು "ಪರಮ ಜಿನೇಂದ್ರವಾಣಿಯೆ ಸರಸ್ವತಿ ಬೇ ಱಮ ಪೆಣ್ಣ ರೂಪಮಂ ಧರಿಯಿಸಿ ನಿಂದುದಲ್ತು" ಎಂಬುದಾಗಿ ಮೊದಲ ಸಲ ನಿರೂಪಿಸಿದ ಮೇಲೆ, ಈಚಿನ ಕನ್ನಡ ಕವಿಗಳಿಗೂ ಸಹೃದಯರಾದ ಜಿನಸಮಯಿಗಳಿಗೂ ಸರಸ್ವತಿಯ ಹೃದಯತತ್ತ್ವ ಏನೆಂಬುದು ಸ್ಪಷ್ಟವಾಯಿತು. ಉದಾಹರಣೆಗೆ, "ಪರಮಜಿನೇಂದ್ರ ಚಂದ್ರಲಪನಾಂಶು ಲಸತ್ಸರಸೀಮರಾಳಿ" ಎಂದು ಕರ್ಣಪಾರ್ಯನೂ "ಪರಮಜಿನೇಂದ್ರ ಬೋಧ ಹಿಮವನ್ನಗಜಾತೆ" ಎಂದು ಆಚಣ್ಣನೂ "ಜಗಕೆ ಜಿನೇಂದ್ರರುಕ್ತಿಯೆ ಸರಸ್ವತಿ" ಎಂದು ನೇಮಿಚಂದ್ರನೂ "ಜಿನವಾಣಿಯೆನಿಪ್ಪ ಭಾರತೀದೇವಿ" ಎಂದು ಪಾರ್ಶ್ವಪಂಡಿತನೂ "ಜಿನೇಂದ್ರವಾಗ್ವನಿತೆ" ಎಂದು ಜನ್ನನೂ "ಜಿನಮುಖ ಕಮಲವಿನಿರ್ಗತೆ" ಎಂದು ನಾಗರಾಜನೂ ವರ್ಣಿಸಿರುವುದನ್ನು ಇಲ್ಲಿ ನೆನೆಯಬಹುದು.

ಹೀಗೆ ಪಂಪ ಮೊದಲಾದ ಕವಿಗಳಿಗೆ ಸರಸ್ವತಿ ವರದೆಯೂ ಕಾಮರೂಪಿಣಿಯೂ ಆದ ಸ್ತ್ರೀ ವಿಗ್ರಹವಲ್ಲ, ಪುಣ್ಯಪಾಪಗಳ ಬಂಧದಿಂದ ಜೀವನನ್ನು ಬಿಡುಗಡೆಮಾಡಿ ಶಾಶ್ವತ ಪದಕ್ಕೆ ಸೇರಿಸುವ ಮಹತ್ಪ್ರಭಾವವನ್ನು ಉಳ್ಳುದೂ ಅವಿನಾಶಿಯೂ ಸರ್ವಭಾಷಾತ್ಮಕವೂ ಆದ ಜಿನೇಂದ್ರನ ದಿವ್ಯವಾಣಿಯೇ ಸರಸ್ವತಿ ಎಂಬುದು ಸ್ಪಷ್ಟವಾಗಿದೆ. ಈ ವಾಣಿ ಆತ್ಮ ವನ್ನು ಸಂಸ್ಕರಿಸಬಲ್ಲುದು, ಸಂಸ್ಕಾರಗೊಂಡ ಅತ್ಮಸ್ವಸ್ವರೂಪವನ್ನು ಕಂಡುಕೊಳ್ಳಲು ಸಹಾಯಮಾಡಬಲ್ಲುದು. ಈ ಉದಾತ್ತಕಲ್ಪನೆಯ ಹಿನ್ನೆಲೆಯಿಂದಲೇ, ಪಂಪ ಬೇರೊಂದು ಕಡೆ ಸರಸ್ವತಿಯನ್ನು ವಾಙ್ಮಯರೂಪಿಯೆಂದೂ ಅಕ್ಷಯನಿಧಿಯೆಂದೂ ತನ್ನನ್ನು ಪ್ರೀತಿಯಿಂದ ಓಲೈಸಿದವರಿಗೆ ಒಲಿಯುವವಳು ಎಂದೂ ತಿಳಿಸಿರುವುದು ಕಾಣು ತ್ತದೆ.

ಈ ದೈವೀಕಲ್ಪನೆ ಇನ್ನೂ ಹಿಗ್ಗಿರುವುದು ನಾಗಚಂದ್ರಾದ್ಯರಾದ ಕವಿಗಳಲ್ಲಿ ತೋರಿದೆ. ಈತ ಸರಸ್ವತಿ ಜಿನೇಂದ್ರನ ವಾಣಿ ಎನ್ನದೆ, ಜಿನನ ಶರೀರದ ವರ್ಚಸ್ಸು ಎಂದಿದ್ದಾನೆ. ಜನತೆಯ ಒಳಗಣ್ಣು, ಕೇವಲಜ್ಞಾನವನ್ನು ಗಳಿಸುವ ಸಾಧನ, ಕವಿತೆಯ ಒಳ್ಪೆಯನ್ನು ಕೊನರಿಸುವ ಅಮೃತದ ಧಾರೆ, ಸರ್ವರಸಸಮುದ್ಭೂತವಾದ ಹೊಸ ಸೃಷ್ಟಿ, ವಿದ್ವಾಂಸರ ಸಂತೋಷವನ್ನು ಬೆಳೆಸುವ ಆಕರ್ಷಣೆ ಎಂದು ಸರಸ್ವತೀತತ್ತ್ವವನ್ನು

ಇನ್ನೂ ವ್ಯಾಪಕವಾಗಿ ಮಾಡಿದ್ದಾನೆ. ಜನತೆಯ ವಿವೇಕ, ಅಧ್ಯಾತ್ಮಸಾಧನೆಯ ಗಂತವ್ಯ, ಕಾವ್ಯಪ್ರತಿಭೆ, ಲೋಕಾನಂದಸ್ಥಿತಿ, ಸಹೃದಯರ ಹೃದಯಾಹ್ಲಾದ ಇವುಗಳಲ್ಲೆಲ್ಲ ಆ ತತ್ತ್ವ ಆವಿರ್ಭವಿಸಿದೆಯೆಂದು ಆತ ಮನಗಂಡಿದ್ದಾನೆ. ಇಮ್ಮಡಿ ನಾಗವರ್ಮ ತನ್ನ 'ಕಾವ್ಯಾವಲೋಕನ' ದಲ್ಲಿ ಜಗನ್ಮೂರ್ತಿಯಾದ ಆ ಸರಸ್ವತಿ ಚರ ಅಚರ, ಲೋಕ ಆಲೋಕಗಳ ಸಂಪ್ರದಾಯವೇ ಎಂದರೆ ಸನಾತನವಿದ್ಯೆಯೇ ಸರಿ ಎಂದಿದ್ದಾನೆ. ಆಕೆ ರತ್ನದೀಪದಂತೆ ಲೋಕಸಮಸ್ತವನ್ನೂ ಬೆಳಗುವವಳು ಎಂದು ಕರ್ಣಪಾರ್ಯ ನುಡಿದಿದ್ದಾನೆ. ಅಘಗಳ ಆಕೆಯನ್ನು, ಪಾಪಗಳ ತೊಡರುಬಳ್ಳಿಯನ್ನು ಛೇದಿಸುವ ಖಡ್ಗ, ಅಜ್ಞಾನವೆಂಬ ತೊರೆಯನ್ನು ದಾಟಿಸುವ ದೋಣಿ, ಎತ್ತರದಲ್ಲಿರುವ ಮುಕ್ತಿಸ್ಥಾನವೆಂಬ ಉಪ್ಪರಿಗೆಗೆ ಏರಿಹೋಗಲು ಹಾಕಿರುವ ನಿಚ್ಚಣಿಕೆ ಎಂದು ಕೀರ್ತಿಸಿದ್ದಾನೆ.

ಸರಸ್ವತೀತತ್ತ್ವವನ್ನು ಜೈನಕವಿಗಳು ಮನನಮಾಡಿಕೊಂಡ ಈ ರೀತಿಯಲ್ಲಿ ರನ್ನ ಹೇಳುವ ಹಾಗೆ "ಅಂಗನೋಚಿತರಸಾಲಂಕಾರಮಂ ತಾಳ್ದಿರ್ದೊಪ್ಪಿದ ವಾಕ್ಸುಂದರಿ" ಸರಸ್ವತಿ ಎಂಬುದನ್ನು ಒಪ್ಪಬಹುದು. ಋಷಿವಾಣಿ ಕವಿವಾಣಿಗಳೂ ಈ ಸರಸ್ವತಿಯ ಅಮೂರ್ತ ಸತ್ತ್ವದ ಆವಿಷ್ಕಾರಗಳೇ ಆಗಿವೆ; ಋಷಿಯೂ ಕವಿಯೂ ಒಂದೇ ತೇಜಸ್ಸಿನ ಸ್ಫುಲಿಂಗಗಳೆಂಬುದರಿಂದ ಅದು ಸಹಜ.

೫

ವಾಕ್ ಶುದ್ಧಿ

ಕೇಯೂರಾ ನ ವಿಭೂಷಯಂತಿ ಪುರುಷಂ ಹಾರಾನ ಚಂದ್ರೋಜ್ವಲಾ
ನ ಸ್ನಾನಂ ನ ವಿಲೇಪನಂ ನ ಕುಸುಮಂ ನಾಲಂಕೃತಾ ಮೂರ್ಧಜಾ :
ವಾಣ್ಯೇಕಾ ಸಮಲಂಕರೋತಿ ಪುರುಷಂ ಯಾ ಸಂಸ್ಕೃತಾ ಧಾರ್ಯತೇ
ಕ್ಷೀಯಂತೇ ಖಲು ಭೂಷಣಾನಿ ಸತತಂ ವಾಗ್ಭೂಷಣಂ ಭೂಷಣಂ ||

ಭರ್ತೃಹರಿಯ ನೀತಿಶತಕದೊಳಗಿನ ಒಂದು ಸುಭಾಷಿತ ಇದು. ಇದರ ಅಭಿಪ್ರಾಯ ಹೀಗೆ ; "ಕಂಕಣಗಳಾಗಲಿ, ಚಂದ್ರನಂತೆ ಬೆಳಗುವ ಹಾರಗಳಾಗಲಿ, ಸ್ನಾನವಾಗಲಿ, ಗಂಧಾದಿ ಲೇಪನಗಳಾಗಲಿ, ಹೂವಾಗಲಿ, ಅಲಂಕರಿಸಲ್ಪಟ್ಟ ಕೂದಲುಗಳಾಗಲಿ, ಮನುಷ್ಯನನ್ನು ಅಲಂಕರಿಸುವುದಿಲ್ಲ; ಸಂಸ್ಕಾರಯುಕ್ತವಾಗಿ ಆಡುವ ಮಾತೊಂದೇ ಮನುಷ್ಯನಿಗೆ ಅಲಂಕಾರ. ಒಡವೆಗಳೆಲ್ಲಾ ನಾಶವಾಗುತ್ತವೆ. ಆದರೆ ವಾಣಿಯೆಂಬ ಅಲಂಕಾರವೇ ನಾಶವಾಗದೆ ಇರುವುದು."

ಸಂಸ್ಕಾರಯುಕ್ತವಾದ ಮಾತೇ ಮನುಷ್ಯನಿಗೆ ನ್ಯಾಯವಾದ ಅಲಂಕಾರ ಎಂದು ಹೇಳುವಾಗ, ವ್ಯವಹಾರದಲ್ಲಿ ಮಾತಿಗೆ ಎಷ್ಟು ಮಹತ್ತ್ವವನ್ನು ನಮ್ಮವರು ಕೊಟ್ಟಿದ್ದಾರೆ ಎನ್ನುವುದು ತಿಳಿಯುವುದು. ಆಡುವ ಮಾತೆಲ್ಲ ಮಾತಲ್ಲ, ಸಂಸ್ಕಾರಗೊಂಡ ಮಾತಿಗೆ ಮಾತ್ರ ಬೆಲೆ ಎನ್ನುವುದನ್ನು ನಾವು ಚಿಂತಿಸಬೇಕು.

ಮಾತು ಸಂಸ್ಕಾರಗೊಳ್ಳುವದು ಎಂದರೆ ಏನು ? ಮಾತಿನಲ್ಲಿ ಆಡುವವರ ಸಂಸ್ಕೃತಿ ವ್ಯಕ್ತಗೊಳ್ಳುವ ಹಾಗೆ ಇರಬೇಕು ಎಂದೇ? ಆಡಿದ ಮಾತು ಚೆನ್ನಾಗಿರಬೇಕು ಎಂದೇ ? ಸುಸಂಸ್ಕೃತವ್ಯಕ್ತಿಯ ಮಾತು ಅವನ ನಡತೆಯ ಹಾಗೆ ಸಹಜವಾಗಿಯೇ ಸುಸಂಸ್ಕೃತವಾಗಿರುತ್ತವೆ. ಅದು ಮನಸ್ಸನ್ನು ಅರಳಿಸುತ್ತದೆ, ಕಿವಿಯನ್ನು ತಣಿಸುತ್ತದೆ. ಅದು ನಿಜವಾಗಿ 'ಸುಭಾಷಿತ'.

ಮಾತಿಗೆ, ಅಲ್ಲಿ ವ್ಯಕ್ತವಾಗುವ ಭಾವವೋ ಅಭಿಪ್ರಾಯವೋ ತಿರುಳು ಎಂಬುದು ನಿಜ. ಅದು ವ್ಯಕ್ತವಾಗುವ ರೀತಿಯಿಂದಲೂ ಆ ತಿರುಳು ಸ್ವಾದುವಾಗುತ್ತದೆ. "ಆಡುವ ಮಾತು, ಬರೆಹದ ಮಾತು ನೇರ, ಸರಳ ಆಗಿರಬೇಕು, ಸ್ಫುಟ ಶುದ್ಧ ಆಗಿರಬೇಕು" ಎಂದು ಕೆಲವರು ಬಯಸಿದರೆ, "ಭಾವವೋ ಅಭಿಪ್ರಾಯವೋ ಮನವರಿಕೆಯಾಗುವಂತಿದ್ದರೆ, ಆ ಬಯಕೆಗಳಿಗೆ ಅರ್ಥವೇನು ?" — ಎಂದು ಕೆಲವರು ಪ್ರಶ್ನಿಸುತ್ತಾರೆ. "ಗ್ರಾಮ್ಯ ಶಿಷ್ಟ ಎಂಬ ಭೇದವೇಕೆ, ಭಾಷೆ ವ್ಯಾಕರಣಗಳ ಕಟ್ಟು ಕಟ್ಟಳೆಗಳು ಏಕೆ ? ತುಲಾದಂಡದಂತೆ ಸಮವಾಗಿ ತೂಗುವ ಪದಗುಂಫನದ ಒಂದು ಅಚ್ಚುಕಟ್ಟು, ಮುತ್ತಿನ ಸರದ ಪವಣಿಕೆಯಂಥ ಬಂಧದ ಒಂದು ಚೆಲುವು ಇವುಗಳ ಆಡಂಬರವೇಕೆ?" ಎಂದು ಅವರು ಕೇಳುತ್ತಾರೆ. "ತಿರುಳು ಮುಖ್ಯ, ರೀತಿ ಗೌಣ, ಎರಡೂ ಪ್ರಶಸ್ತವಾಗಿ ಸೇರಿದರೆ ಬೇಡ ಎನ್ನಬೇಕಾಗಿದ್ದಿಲ್ಲ" ಎಂದು ಇನ್ನು ಕೆಲವರು ಹೇಳಬಹುದು. ಇದು ಎಷ್ಟರಮಟ್ಟಿಗೆ ಸರಿ ?

ನಾವು ಉಡುವ ಬಟ್ಟೆ ಮಾನ ಮುಚ್ಚುವದಕ್ಕೆ ಮಾತ್ರ. ತೊಡುವ ಒಡವೆ ವಸ್ತು ಮಂಗಳದ ಕುರುಹು ಮಾತ್ರ ಎಂದು ನಾವು ತಿಳಿಯುತ್ತೇವೆಯೇ ? ಇವು ಮೈ ಚೆಲುವನ್ನು ಹೆಚ್ಚಿಸುವ ಬಾಹ್ಯಾಕರ್ಷಣೆಗಳೂ ಆಗಿಲ್ಲವೆ? ನಾವು ಉಟ್ಟ ಬಟ್ಟೆ ಚೆನ್ನಾಗಿ ಒಗೆದು ಶುಭ್ರವಾಗಿರಬೇಕು, ಅದಕ್ಕೆ ಗರಿಮುರಿಯಾಗಿ ಇಸ್ತ್ರಿ ಮಾಡಿರಬೇಕು, ಎಲ್ಲಿಯೂ ಕೊಳೆ ಕಪ್ಪುಗಳು ಕಾಣುತ್ತಿರಬಾರದು ಎಂದು ನಾವು ಎಚ್ಚರ ವಹಿಸುತ್ತೇವೆ. ತಾವು ತೊಡುವ ಒಡವೆ ವಸ್ತುಗಳು ಎಲೆ ಹೂವು ಹಕ್ಕಿ ಮುಂತಾದ ಆಕೃತಿಗಳಲ್ಲಿರಬೇಕು; ಮುತ್ತುರತ್ನಗಳ ಕುಂದಣದಿಂದ ಚೆಲುವಾಗಿ ಕಾಣುತ್ತಿರಬೇಕು ಎಂದು ಹೆಣ್ಣುಮಕ್ಕಳು ಆಸೆಪಡುತ್ತಾರೆ. ಹೀಗೆಯೇ, ನಾವು ಆಡುವ ಮಾತು ಅಭಿಪ್ರಾಯ ನಿವೇದನೆಗೆ, ಭಾವಾಭಿವ್ಯಕ್ತಿಗೆ ಎನ್ನುವುದು ನಿಶ್ಚಯವಾದರೂ, ಆ ಮಾತು ಭಾಷೆ ವ್ಯಾಕರಣಗಳ ದೃಷ್ಟಿಯಿಂದ ತಪ್ಪಿಲ್ಲದೆ ಇರಲಿ, ಉಚ್ಚಾರ ಶುದ್ಧವಾಗಿರಲಿ, ಸ್ಫುಟವಾಗಿರಲಿ ಎಂದು ನಿರೀಕ್ಷಿಸುವುದಾದರೆ, ಅಂಥ ನಿರೀಕ್ಷೆ ತಕ್ಕುದಲ್ಲ ಎಂದು ಹೇಗೆ ಹೇಳುವುದು ?

೬

ಪ್ರಾಣಿಚರ್ಯೆ

ನಮಗೆ ಹಾಲು ಹಾಕುವ ಗೌಡ ಹತ್ತಿರದ ಒಂದು ಬಡಾವಣೆಯಿಂದ ಬೆಳಗ್ಗೆ ಸುಮಾರು ಆರು—ಆರೂವರೆ ಹೊತ್ತಿಗೆ ನಮ್ಮ ಮನೆಗೆ ತನ್ನ ಎಮ್ಮೆಯನ್ನು ಹೊಡೆದು

ಕೊಂಡು ಬರುತ್ತಾನೆ. ತನ್ನ ತಲೆಯ ಮೇಲೆ ಹೊತ್ತ ಹಿಂಡಿಯ ಬಾನಿಯೊಂದಿಗೆ, ನಾಲ್ಕೆಂಟು ಹೆಜ್ಜೆ ಹತ್ತಿರದ ಮನೆಯ ತಿರುವಿನಲ್ಲಿ ಅವನು ತಿರುಗಿದ ಕೂಡಲೇ, ಅವನ ಎಮ್ಮೆಗೆ ಒಂದು ಲವಲವಿಕೆ ಒಂದುಬಿಡುತ್ತದೆ. ಅದು ಚಿಕ್ಕಮಕ್ಕಳ ಹಾಗೆ ನೆಗೆಯುತ್ತ ನಮ್ಮ ಮನೆಯ ಕಾಂಪೌಂಡ್ ಒಳಿ ಬಂದು ನಿಂತು ಸಂಭ್ರಮದ ಹಿನ್ನೋಟ ಚೆಲ್ಲಿ, ಮೂಗನ್ನರಳಿಸುತ್ತ, ಈ ಗೌಡ ಇನ್ನೂ ಏಕೆ ಹೀಗೆ ನಿಧಾನವಾಗಿ ಹೆಜ್ಜೆ ಹಾಕುತ್ತಿದ್ದಾನೆ ಎಂದು ಪ್ರಶ್ನೆ ಕೇಳುವ ಮುಖಭಾವದಲ್ಲಿ ನಿಲ್ಲುತ್ತದೆ. ಗೌಡ ತಂದಿಟ್ಟ ಬಾನಿಯ ಹಿಂಡಿಯನ್ನು ಅದು ತಿಂದು ಪೂರೈಸುವ ಹೊತ್ತಿಗೆ ಹಾಲು ಕರೆಯುವುದೂ ಪೂರೈಸಿರುತ್ತದೆ. ಕರೆಯುವಾಗ ಹತ್ತಿರದಲ್ಲೇ ನಿಂತ ನಮ್ಮನ್ನು ಅದು ಒಂದೊಂದು ಸಲ ತಲೆಯೆತ್ತಿ ನೋಡುವುದೂ ಉಂಟು. ಹಿಂಡಿಯ ಹುಡಿ ಮೆತ್ತಿದ ಅದರ ಮೂತಿ ಆಗ ಹುರಿಟ್ಟು ತಿನ್ನುವಾಗಿನ ಮಕ್ಕಳ ಮೂತಿಯಂತಿರುತ್ತದೆ. ತಿನ್ನಲು ಹಿಂಡಿಯಿಟ್ಟು ಗೌಡ ಹಾಲು ಕರೆದುಕೊಳ್ಳಲು ಅದರ ತಕರಾರಿಲ್ಲ. ಆದರೆ ಏನು ಕಾರಣವೋ ಏನೋ ಒಂದೊಂದು ಸಲ ಹಿಂಡಿಯಿಡದೆ ಕರೆಯಲು ಯತ್ನಿಸಿದಾಗ, ಅದು ಅವನಿಗೆ ಜಗ್ಗಿಲ್ಲ. ಮನೆಗೆ ಯಾರನ್ನಾದರೂ ಕಳಿಸಿ, ಹಿಂಡಿ ತರಿಸಿಕೊಟ್ಟ ಮೇಲೆಯೇ ಅದು ಸಾಧ್ಯವಾಗಿದೆ. ಕೂಲಿಯೇ ಇರಲಿ, ಕಾರಕೂನನೇ ಆಗಲಿ, ಹೊಟ್ಟೆಪಾಡಿನ ಏರ್ಪಾಡು ಮೊದಲು ಆಗಬೇಕು, ಆಮೇಲೆ ದುಡಿಮೆ. ಈ ಸರಳತತ್ತ್ವ ಪ್ರಾಣಿಗಳಿಗೂ ಮನುಷ್ಯರಿಗೂ ಒಂದೇ.

ನಾಯಿ ಸಾಕಿರುವವರಿಗೆ ಅದರ ಸ್ವಭಾವದ ನಾನಾಮುಖಗಳ ಪರಿಚಯವಿರುತ್ತದೆ. ಅದರ ಮುದ್ದು, ಪ್ರಾಮಾಣಿಕತೆ, ಹೊಂದಿಕೆಯ ಗುಣ ಮಾನವೀಯಗುಣಗಳೇ ಆಗಿವೆ. ಈಗ ಕೆಲವು ವರ್ಷಗಳ ಹಿಂದೆ ನಾವು ಒಂದು ನಾಯಿ ಸಾಕಿದ್ದೆವು. ಅದು ಹೆಣ್ಣುನಾಯಿ, ಜಾತಿ ನಾಯಿಯಲ್ಲ, ಬೀದಿನಾಯಿ. ಅದು ಸಾಯುವವರೆಗೆ ನಮ್ಮಿಬ್ಬರ ಹೊಂದಿಕೆ ಚೆನ್ನಾಗಿಯೇ ಇತ್ತು. ನಾವು ಎಂದೂ ಅದನ್ನು ಕೈಯೆತ್ತಿ ಹೊಡೆಯದಿದ್ದರೂ ಅದು ಆಗಾಗ ನಮ್ಮನ್ನು ಧಾರಾಳವಾಗಿ ಕಚ್ಚುತ್ತಿತ್ತು. ನಮಗೆ ಸಂಜೆಯೋ ಯಾವಾಗಲೋ ಹೊರಗೆ ಹೋಗಬೇಕೆಂದು ಅಪೇಕ್ಷೆ. ಅದಕ್ಕೆ ಮನೆಯಲ್ಲಿಯೇ ಸುಳಿದಾಡುತ್ತಿರುವ ಆಸೆ. ಹೊರಹೋಗಲು ಬಟ್ಟೆ ಬದಲಾಯಿಸುವುದು ಕಣ್ಣಿಗೆ ಬಿತ್ತೆಂದರೆ ಕೂಡಲೇ ಅದು ಮಲಗುವ ಮನೆಯ ಮಂಚದ ಅಡಿಯಲ್ಲಿ ಹೋಗಿ ಸೇರುತ್ತಿತ್ತು. ಅದನ್ನು ಅಲ್ಲಿಂದ ಹೊರಡಿಸುವುದು ಸುಲಭದ ಮಾತಾಗಿರಲಿಲ್ಲ. ಒಮ್ಮೊಮ್ಮೆ ಬೆನ್ನಡಿಯಾಗಿ ನೆಲಕಚ್ಚಿ ಮಲಗಿಬಿಡುತ್ತಿತ್ತು; ಆಗ ಅದನ್ನು ಕೈಯಿಂದೆತ್ತಲು ಆಗುತ್ತಿರಲಿಲ್ಲ. ಈ ಚೇಷ್ಟೆಯ ಬುದ್ಧಿ, ಹಠ, ಉಪಾಯ ಅದಕ್ಕೆ ಎಲ್ಲಿಂದ ಬಂದವೋ ತಿಳಿಯದು. ಇವು ಮನುಷ್ಯ ಸಾಮಾನ್ಯವಾದವೇ ಅಲ್ಲವೇ?

ಈಚೆಗೆ ಒಮ್ಮೆ, ಬೆಳಗಿನ ವಿಹಾರಕ್ಕೆ ಹೊರಡುವಾಗ ಒಂದು ಅಪರಿಚಿತವಾದ ಬೀದಿನಾಯಿಯ ಕಡೆ ನಾನು ಸುಮ್ಮನೆ ನೋಡಿದೆ. ಅದು ಚಟ್ಟನೆ ಎದ್ದು ನನ್ನನ್ನು ಹಿಂಬಾಲಿಸಿತು. ಎಷ್ಟು ಹೆದರಿಸಿದರೂ ಬೆದರಿಸಿದರೂ ಬಿಡದೆ ನನ್ನ ಬೆನ್ನು ಹತ್ತಿ ಮನೆಗೂ

ಬಂತು. ನಾನು ಬೇಸರದಿಂದ ಗೇಟು ಮುಚ್ಚಿ ಮನೆಯೊಳಗೆ ಬಂದಾಗ, ಒಂದೆರಡು ನಿಮಿಷ ಅಲ್ಲಿಯೇ ಇದ್ದು ಹೊರಟುಹೋಯಿತು. ಮಾರನೆಯ ಬೆಳಿಗ್ಗೆ ಅದೇ ದಾರಿಯಲ್ಲಿ ನಾನು ಹೋಗುವಾಗ ಅದು ನನಗೆ ತಿರುಗಿ ಗಂಟುಬಿದ್ದಿತು. ನಾನು ಅದನ್ನು ನೋಡಿದೆನೋ ಬಿಟ್ಟೆನೋ ನೆನಪಿಲ್ಲ. ಋತುಮಾನ ಕಾರಣವಾಗಿಯೋ ಏನೋ ಅದು ಕುಂಟುತ್ತಿತ್ತು. ಕುಂಟುತ್ತಲೇ ನನ್ನನ್ನು ಹಿಂಬಾಲಿಸಿತು. ಇನ್ನೂ ಒಂದು ದಿನ ಹಾಗೆಯೇ ಆಯಿತು. ನಾನು ಆ ದಾರಿಯನ್ನೇ ಬಿಟ್ಟೆ.

ಇನ್ನೊಮ್ಮೆ ಯಾರದೋ ಒಬ್ಬರ ಮನೆಯ ನಾಯಿ, ನೋಡಲು ಚೆನ್ನಾಗಿದೆ ಎಂದು ನನಗೆ ತೋರಿ, ನಾನು ಅದರ ಮೈಯನ್ನು ಒಂದೇ ಒಂದು ಸಲ ನೇವರಿಸಿಬಿಟ್ಟೆ. ಅದು ನನ್ನನ್ನು ತಿಂಗಳುಗಟ್ಟಲೆ ಕಾಡಿ, ನಾನು ಕೆಲಸ ಮಾಡುವ ಕಛೇರಿಗೆಲ್ಲ ಬಂದು, ನನ್ನ ಪಾಡೇ ನಾಯಿಪಾಡಾಯಿತು. ಆದರೆ ಅದರ ವಾತ್ಸಲ್ಯ ಗುಣ,ನಿಷ್ಕಳಂಕ ಪ್ರೀತಿ ನನ್ನ ಮನಸ್ಸನ್ನು ಆಗಾಗ ತುಡಿಯುತ್ತಿರುತ್ತದೆ.

ನನ್ನ ದೊಡ್ಡ ಮಗಳಿಗೆ ಹಸುಗಳನ್ನು ಕಂಡರೆ ಇಷ್ಟ. ಮನೆಯಾಚೆಯ ಬಯಲಲ್ಲಿ ಮೇಯಲು ಬರುವ ಅವರಿವರ ದನಗಳಿಗೆಲ್ಲ ತಾನು ಮೆಚ್ಚಿದ ಒಂದೊಂದು ಹೆಸರು ಕೊಟ್ಟು, ಮನೆಯ ಹತ್ತಿರಕ್ಕೆ ಬರುವಂತೆ ಮಾಡಿಕೊಂಡು, ಏನಾದರೂ ತಿನ್ನಲು ಕೊಡುತ್ತಿರುತ್ತಾಳೆ. ಒಂದು ಸಲ ಒಂದು ಹಸು ಹೀಗೆ ಬಂತು. ಅದಕ್ಕೆ ಏನೋ ತಿನ್ನಿಸಿ, 'ಹೋಗು' ಎಂದು ಹೇಳಿ ಒಳಕ್ಕೆ ಬಂದಳು. ನಾವೆಲ್ಲ ಶಾಲೆ ಕಾಲೇಜುಗಳಿಗೆ ಹೋಗುವ ಬೆಳಗಿನ ತುರಾತುರಿಯ ಸಮಯ ಅದು. ಐದಾರು ನಿಮಿಷ ; ದನಿ ಕೇಳಿಸಿತು. ಅದೇ ಹಸು, ನಾವು ಸುಮ್ಮನಿದ್ದರೆ ಒಂದೆರಡು ನಿಮಿಷಗಳಲ್ಲಿ ಅದು ಹೊರಟುಹೋಗಬಹುದೆಂದು ನಾವು ತಿಳಿದೆವು. ಆದರೆ ಒಂದೆರಡು ನಿಮಿಷ ಬಿಟ್ಟು ಬಿಟ್ಟು ಇನ್ನೂ ಎರಡು ಮೂರು ಸಲ ಕೂಗಿತು. ಅದಕ್ಕೆ ಮತ್ತಷ್ಟು ಬೇಕೆಂಬ ಆಸೆ. ನನ್ನ ಮಗಳು ಹೊರಗೆ ಬಂದು ಅದನ್ನು ಹೇಗೋ ಮಾಡಿ ಅಲ್ಲಿಂದ ಹೊರಡಿಸಿದಳು. ಆ ಮೂಕ ಪ್ರಾಣಿಯ ಅಪೇಕ್ಷೆ ನಿರೀಕ್ಷೆಗಳು ಆಗಾಗ ಮನೆ ಬಾಗಿಲಿನೆಡೆ ಬಂದು, ಜಾಗಟೆ ಬಡಿದು ನಿಲ್ಲುವ ದಾಸಯ್ಯನ ಅಪೇಕ್ಷೆ ನಿರೀಕ್ಷೆಗಳಷ್ಟೇ ಸ್ಪಷ್ಟವಾಗಿದ್ದುವು, ದೃಢವಾಗಿದ್ದುವು.

ಮೊನ್ನೆ ಹತ್ತಿರದ ಬಸ್‌ಸ್ಟಾಪ್ ಒಂದರಲ್ಲಿ, ಒಂದು ದೊಡ್ಡಮರದ ಕೆಳಗೆ ಬಸ್ಸಿಗಾಗಿ ಕಾಯುತ್ತ ನಿಂತಿದ್ದೆ. ಒಂದು ಕಾಗೆ ನನ್ನ ತಲೆಯ ಮೇಲಿಂದ ಹಾರಿ ಬಂದು ನನ್ನ ಹತ್ತಿರದಲ್ಲಿಯೇ ಬಿದ್ದಿದ್ದ ಒಂದು ಎರಡಡಿ ಉದ್ದದ ದಪ್ಪಕಡ್ಡಿಯನ್ನು ತನ್ನ ಕೊಕ್ಕಿನಲ್ಲಿ ಕಚ್ಚಿಕೊಂಡಿತು. ತನ್ನ ಗೂಡಿಗಾಗಿ ಇರಬಹುದು ಎಂದು ನಾನು ಊಹಿಸಿದೆ. ಕೊಕ್ಕಿನಲ್ಲಿ ಕಡ್ಡಿಯನ್ನು ಕಚ್ಚಿಕೊಂಡಾಗ ಕಡ್ಡಿಯ ಒಂದು ಕಡೆಯ ಭಾಗ ಸುಮಾರು ಅರ್ಧ ಅಡಿಯಷ್ಟೇ ಇತ್ತು. ಈಗ ಕುಶಲತೆಯಿಂದ ದೀರ್ಘವಾದ ಭಾಗವನ್ನು ಸ್ವಲ್ಪ ಸ್ವಲ್ಪವಾಗಿ ಕೊಕ್ಕಿಂದಲೇ ಚಿಕ್ಕಭಾಗದ ಕಡೆಗೆ ಸರಿಸಿ, ಕೊಕ್ಕಿನ ಆಚೀಚೆ ಕಡ್ಡಿ ಸಮಾರ್ಧವಾಗುವಂತೆ ಮಾಡಿಕೊಂಡಿತು. ಮೇಲಕ್ಕೆ ಹಾರಿ ಒತ್ತಾದ ಎಲೆಗಳೆಡೆ ಕಟ್ಟಿದ್ದ ಗೂಡನ್ನು ಹೊಕ್ಕಿದ್ದು ಸಹ ನನಗೆ ಕಂಡಿತು. ಆದರೆ ಆಯತಪ್ಪಿ ಕಡ್ಡಿ ಕೆಳಗೆ

ಬಿದ್ದುಹೋಯಿತು. ಮತ್ತೆ ಕಾಗೆ ಆ ಕಡ್ಡಿಗಾಗಿ ಕೆಳಗೆ ಹಾರಿಬಂದು ಅದನ್ನು ಒಯ್ದು ಗೂಡಿಗೆ ಸೇರಿಸುವಲ್ಲಿ ಯಶಸ್ವಿಯಾಯಿತು. ಈ ಪ್ರಯತ್ನಶೀಲತೆ ಮಾನವನ ಪ್ರಯತ್ನ ಶೀಲತೆಯಂತೆಯೇ ಅಲ್ಲವೇ ?

೭

ರ‍್ಯಾಗಿಂಗ್

'ರ‍್ಯಾಗಿಂಗ್' ಎಂಬ ಅಸಹ್ಯಕರವೂ ಅಶ್ಲೀಲಯುತವೂ ಆದ ಒಂದು ಬಗೆಯ ಮನೋರಂಜನೆ ಅಥವಾ ವಿನೋದ ಸ್ತ್ರೀಪುರುಷಭೇದವಿಲ್ಲದೆ ನಮ್ಮ ವಿದ್ಯಾರ್ಥಿನಿಲಯ ಗಳಲ್ಲಿ ಈಗ ಕೆಲಕಾಲದಿಂದ ಊರ್ಜಿತವಾಗಿ ನಡೆಯುತ್ತಿದೆ. ಅದು ಮಾಡಬಹುದಾದ ಅನಾಹುತಗಳ ಬಗ್ಗೆ ಈಚೆಗೆ ಪತ್ರಿಕೆಗಳಲ್ಲಿ ಸಂಕ್ಷಿಪ್ತ ವರದಿಗಳು ಬರುತ್ತಿವೆ. ಮೊನ್ನೆ ತಾನೆ ನಡೆದ ಒಂದು ದಾರುಣವಾದ ಘಟನೆಯ ವಿಷಯದಲ್ಲಿ ನಮ್ಮ ರಾಷ್ಟ್ರಪತಿಯವರು ಸಹ ತಮ್ಮ ಹೃತ್ಪೂರ್ವಕವಾದ ಕಳಕಳಿಯನ್ನು ವ್ಯಕ್ತಮಾಡಿ, ಈ ವಿನೋದವೆಂಬ ಹೆಸರಿನ ವಿಕೃತವರ್ತನೆಯನ್ನು ಕೊನೆಗಾಣಿಸುವಂತೆ ಸಮಾಜಕ್ಕೆ, ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಇಂಥ ಮನವಿ, ಇಂಥ ಆದೇಶಗಳನ್ನು ದೊಡ್ಡ ಸ್ಥಾನದ, ದೊಡ್ಡ ಜನ ಮೇಲಿಂದ ಮೇಲೆ ಮಾಡುತ್ತಿರುವುದು, ಕೊಡುತ್ತಿರುವುದು ಈಗಂತೂ ತುಂಬ ಅಗತ್ಯ ವಾದ್ದು. ಏಕೆಂದರೆ ಯಾವುದೇ ಕಷ್ಟ, ಯಾವುದೇ ಅನಿಷ್ಟ ತೊಲಗಬೇಕಾದರೆ ದೊಡ್ಡ ಪ್ರಮಾಣದಲ್ಲಿ ಹುಯಿಲು ಏಳದೆ ಸಾಧ್ಯವಿಲ್ಲ ಎನ್ನುವಂತಾಗಿದೆ. ದೊಡ್ಡ ಜನ, ಸ್ಥಾನಬಲವಿರುವ ಜನ ಹೀಗೆ ಸಾಮಾಜಿಕಸಮಸ್ಯೆಗಳನ್ನು ಕೈಗೆ ತೆಗೆದುಕೊಂಡರೆ, ನಮ್ಮ ಕ್ಲೇಶಗಳ ಪರಿಹಾರ ಸುಲಭವಾಗಿ ಆಗುತ್ತದೆ. ಈಗ ಕೆಲಕಾಲದಿಂದ ನಿಸ್ಸಹಾಯಕ ಸ್ಥಿತಿಯಲ್ಲಿ ಕೊರಗುತ್ತಿದ್ದ ಕೆಲವರು ವಿದ್ಯಾರ್ಥಿಗಳು, ಅವರ ತಾಯಿತಂದೆಗಳು, ವಿದ್ಯಾರ್ಥಿ ನಿಲಯಗಳ ಹಾಗೂ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕರು ಈಗ ಕೊಂಚ ಸಮಾಧಾನದ ನಿಟ್ಟುಸಿರು ಬಿಡುವ ಸ್ಥಿತಿಯಲ್ಲಿ ಇದ್ದಾರೆ. ಸರ್ಕಾರದ ಬಿಗಿಕ್ರಮಗಳು ಪರಿಣಾಮಕಾರಿ ಯಾಗಿ ಜಾರಿಯಾಗುವಂತೆ ತೋರುತ್ತಿವೆ.

ಇದು ಸರಿಯೇ. ಆದರೆ ವ್ಯಕ್ತಿವ್ಯಕ್ತಿಗಳಲ್ಲಿ, ಒಟ್ಟು ಸಮಾಜದಲ್ಲಿ, ಸ್ವಾಭಾವಿಕ ವಾಗಿ ಈ ಬಗ್ಗೆ ಉಚಿತಾನುಚಿತದ ವಿವೇಕ ಬೆಳೆಯದಿದ್ದರೆ, ಈ ಬಿಗಿಕ್ರಮಗಳು ಸಹ ಯಶಸ್ವಿಯಾಗುವುದು ಕಷ್ಟ. ಈ ಹಾಳು ಪದ್ಧತಿ ತನ್ನ ಸುಟ್ಟಮೋರೆಯನ್ನು ಬೇರೆ ರೂಪಗಳಲ್ಲಿ, ಹಾದಿಗಳಲ್ಲಿ ತೋರದೆ ಬಿಡುವುದಿಲ್ಲ. ಇಲ್ಲಿ ಉಚಿತಾನುಚಿತ ವಿವೇಕ ಎಂದರೆ, ನೀತಿ ಅನೀತಿಗಳ ತಿಳಿವಳಿಕೆಯೇ. ಇಂದು ನಾವು ಎದುರಿಸಬೇಕಾದ್ದು, ನೈತಿಕ ಅಧಃಪತನವೆಂಬ ದೊಡ್ಡ ದುರಂತದ ಆಘಾತವನ್ನು. ಪರಪೀಡನೆಯಲ್ಲಿ ಸುಖವನ್ನು ಕಾಣುವ, ಅಥವಾ ಜೈನರು ಹೇಳುವಂತೆ 'ಹಿಂಸಾನಂದ'ದಲ್ಲಿ ಹಿತವನ್ನು ಕಾಣುವ, ಈ ಪ್ರವೃತ್ತಿಯಿಂದ ನಾವು ಪಾರಾಗುವುದು ಹೇಗೆ? ಇದು ನಮ್ಮ ಚಿಂತೆ.

ಒಂದು ಕನ್ನಡ ಸುಭಾಷಿತ ಹೇಳುತ್ತದೆ : "ಮೊದಲ್ಗೊಳ್ ಚಪಲಂ ಮರ್ಕಟ|ನದು ವೃಶ್ಚಿಕವಷ್ಟನೆಂಬವೊಲ್, ನವವಯದು| ನ್ಮದವಂತೆ ಸುತಂ ಪಿತೃ ಧನ| ಮದಮತ್ತಂ ಮೂರ್ಖನೆಂದೊಡೇನ | ಜಸುವುದೋ". 'ಸುತ' ಎನ್ನುವಲ್ಲಿ 'ಸುತೆ'ಯೂ ಅಂತರ್ಗತ ವಾಗಿದೆ. ಈ ಮಾತಿನ ಆಶಯ ಸ್ಪಷ್ಟವೇ ಇದೆ: 'ಕಪಿಗೆ ಚಪಲತೆ ಸಹಜಗುಣ. ಆ ಕಪಿಯನ್ನು ಚೇಳು ಕಡಿದರೆ, ಅದು ಮತ್ತಷ್ಟು ಚಂಚಲವಾಗಿ, ವಿಕಾರವಾಗಿ, ವರ್ತಿಸುತ್ತದೆ. ಹಾಗೆಯೇ ಹೊಸ ಪ್ರಾಯದ ಹುಮ್ಮಸ್ಸೇ ಮಗನನ್ನು ದಾರಿ ತಪ್ಪಿಸಲು ಎಷ್ಟೋ ಶಕ್ತವಾಗಿರುವಾಗ, ಅಪ್ಪ ಕಳಿಸುವ ಹಣದ ಸೊಕ್ಕು, ಸ್ವಭಾವ ಸಿದ್ಧವಾದ ಮೂರ್ಖತೆ ಎರಡೂ ಸೇರಿದರೆ, ಇನ್ನು ಹೇಳಬೇಕಾದ್ದೇನಿದೆ ?'

ದುಬಾರಿ ವೆಚ್ಚದ ಶಿಕ್ಷಣ ಸಂಸ್ಥೆಗಳಲ್ಲಿ ಸೇರುವ 'ಪಿತೃಧನ ಮದಮತ್ತ'ರಾದ ಮೂರ್ಖವಿದ್ಯಾರ್ಥಿಗಳು ಮುಗ್ಧರನ್ನು ಪರಿಪರಿಯಾಗಿ ಕಾಡುವ ವಿಪರೀತ ವಿನೋದಗಳು ಖಂಡಿತವಾಗಿ ಸೊಲ್ಲಡಗಿ ಹೋಗಬೇಕು. ಇದು ಎಲ್ಲ ಸಾಮಾಜಿಕರ ಹಂಬಲ. ಇಂಥ ದುಷ್ಟ ಹವ್ಯಾಸಗಳನ್ನು ಬೆಳೆಯಗೊಟ್ಟರೆ ಸಮಾಜ ಇನ್ನಷ್ಟು ಭ್ರಷ್ಟಗೊಳ್ಳುತ್ತದೆ ಎನ್ನುವುದು ನಿಶ್ಚಯ. ವಿನೋದಕ್ಕೆ ಸಾತ್ತ್ವಿಕ ಹವ್ಯಾಸಗಳಿವೆ, ದಾರಿಗಳಿವೆ ಎನ್ನುವುದನ್ನು ನಮ್ಮ ಮಕ್ಕಳು ಕಂಡುಕೊಳ್ಳಬೇಕು. ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲು ಆತಂಕಪಡುತ್ತಿರುವ ಹೊಸಬರನ್ನು ಆತ್ಮೀಯತೆಯಿಂದ ಬರಮಾಡಿಕೊಂಡು, ಅವರ ಮನಸ್ಸಿನ ಅಂಜಿಕೆ ಸಂಕೋಚಗಳನ್ನು ಪರಿಹರಿಸಬೇಕಲ್ಲದೆ, ಅವರಿಗೆ ಜುಗುಪ್ಸೆ ಹುಟ್ಟುವಂತೆ ಮಾಡಬಾರದು.

ಸಂಗೀತ, ಚಿತ್ರ, ಅಭಿನಯ, ವಾದ್ಯವಾದನ ಮೊದಲಾದ ಕಲೆಗಳಲ್ಲಿ, ಅಂಥ ಇತರ ಉತ್ತಮ ಹವ್ಯಾಸಗಳಲ್ಲಿ ಆ ಹೊಸ ವಿದ್ಯಾರ್ಥಿಯ ಅಭಿರುಚಿಯನ್ನು ಅರ್ಥಮಾಡಿಕೊಂಡು, ತನ್ನ ಪ್ರತಿಭೆಯನ್ನು ಆತ ತಮ್ಮೆದುರು ಪ್ರದರ್ಶಿಸುವಂತೆ ಆತನನ್ನು ಹಳೆಯ ವಿದ್ಯಾರ್ಥಿಗಳು ಬೇಕಾದರೆ ಕಾಡಲಿ, ಬೇಡಲಿ ; ಅಂತೂ ಈ ಚಟುವಟಿಕೆಗಳು ನಿರುಪದ್ರವಿಯಾಗಿರಬೇಕು ಎನ್ನುವುದನ್ನು ಮರೆಯದಿರಲಿ, ದೇಹ ಮನಸ್ಸುಗಳನ್ನು ಘಾಸಿಪಡಿಸುವ ಈ ಕ್ರೂರ ಮನೋರಂಜನೆಯ ಪಾಪವನ್ನು ಮಾತ್ರ ಮಾಡದಿರಲಿ–ಎಂದು ಹೇಳಲೇಬೇಕಾಗಿದೆ.

ಮೊನ್ನೆ ಈ 'ರ್‍ಯಾಗಿಂಗ್' ವಿಧಿಗೆ ಗುರಿಯಾಗಿ ತೇರ್ಗಡೆಯಾದ ವಿದ್ಯಾರ್ಥಿಯೊಬ್ಬನಿಗೆ, ಮುಂದಿನ ತಂಡದ ವಿದ್ಯಾರ್ಥಿಗಳನ್ನಾದರೂ ಕಾಡದೆ ಇರುವಂತೆ ಯಾರೋ ಬುದ್ಧಿವಾದ ಹೇಳಿದನಂತೆ. ಆಗ ಆತ, "ಇಲ್ಲ ಇಲ್ಲ ; ಅದು ಸಾಧ್ಯವಿಲ್ಲ, ನಮಗೆ ಆದದ್ದು ಅವರಿಗೂ ಆಗಬೇಕು. ಅದು ನಮ್ಮ ಹಕ್ಕು" ಎಂದನಂತೆ. ಇಂಥ ತಿಳಿವಳಿಕೆ ಎಷ್ಟು ಅನರ್ಥಕಾರಿ ಎಂದು ಬೇರೆ ಹೇಳಬೇಕಾಗಿಲ್ಲ !

೮

ಕುತೂಹಲ

ಕುತೂಹಲ ಹೊಸ ಶೋಧಗಳ ತಾಯಿ. ಯಾವುದೇ ಜ್ಞಾತ, ಅಜ್ಞಾತ ವಿಷಯ, ವಸ್ತು ಅಥವಾ ಭಾವನೆಯ ಬಗ್ಗೆ ಎಲ್ಲಿ, ಏನು, ಹೇಗೆ ಮುಂತಾದ ಪ್ರಶ್ನೆಗಳು ಹುಟ್ಟುತ್ತ, ನಮ್ಮ ಆಸಕ್ತಿ ಕೆರಳುವಂತಿದ್ದರೆ, ಅದು ಕುತೂಹಲದ ಲಕ್ಷಣ ಎನ್ನುವುದು ತಿಳಿದಿದೆ. ಆಸಕ್ತಿಗೆ ಅನುಗುಣವಾಗಿ ಪ್ರಶ್ನೆಗಳಿಗೆ ಉತ್ತರ ಸಿಕ್ಕಬಹುದು, ಸಿಕ್ಕದಿರಲೂಬಹುದು. ಆದರೆ ಆಸಕ್ತಿ ಮಾತ್ರ ಕುಗ್ಗದೆ, ತಗ್ಗದೆ ಇರುವುದು ಮುಖ್ಯ. ನಿರೀಕ್ಷಿಸಿದಂತೆ ಫಲ ಸಿಕ್ಕದಿರಬಹುದು, ಅನಿರೀಕ್ಷಿತವಾಗಿಯೇ ಕೆಲವೊಮ್ಮೆ ಅದು ಸಿಕ್ಕಬಹುದು. ಫಲ ಮುಖ್ಯ ವಲ್ಲ, ಕುತೂಹಲ ಮುಖ್ಯ.

ಕುತೂಹಲದಿಂದ ಮನಸ್ಸಿಗೆ ವ್ಯಾಯಾಮ, ರಂಜನೆ. ನಾನಾ ವಿಷಯಗಳ ನೋಟ, ಪರಿಚಯ ಅದರಿಂದ ಸಾಧ್ಯ ; ನಾನಾ ಭಾವನೆಗಳ ಸ್ಫುರಣೆ, ಚಿಂತನೆ ಶಕ್ಯ. ವಿದ್ವಾಂಸ, ಯೋಗಿ, ವಿಜ್ಞಾನಿ ಇವರೆಲ್ಲ ಅಸಾಧಾರಣ ಕುತೂಹಲಿಗಳು. ಇವರ ಶೋಧ ಗಳು, ಅನುಭವಗಳು ಕುತೂಹಲವೆಂಬ ಮೂಲಬಿಂದುವಿನಿಂದ ಆರಂಭವಾಗಿ, ಕಠಿನವಾದ ಪರಿಶ್ರಮವೆಂಬ ಹಾದಿಯಲ್ಲಿ ಸಾಗಿ, ವಸ್ತುಜ್ಞಾನವೆಂಬ ಸಿದ್ಧಿಯಲ್ಲಿ ಪರ್ಯವಸಾನ ಹೊಂದಿರುತ್ತವೆ. ಇವರ, ಇವರ ಸಂತತಿಯ ಸಾಧನೆಗಳು ಮುಂದೆಯೂ ಹೀಗಿಯೇ.

ಕುತೂಹಲಕ್ಕೆ ಎಲ್ಲೆಕಟ್ಟಿಲ್ಲ; ಆಯ್ಕೆಯಲ್ಲಿ ನಿರ್ಬಂಧವಿಲ್ಲ. ಉಪಯುಕ್ತವೂ ಉದಾತ್ತವೂ ಆದ ವಿಷಯಗಳಲ್ಲಿ, ಭಾವನೆಗಳಲ್ಲಿ ಕುತೂಹಲವನ್ನು ಹರಿಯಬಿಡುವುದು ಯಾವುದಕ್ಕೂ ಒಳ್ಳೆಯದು. ಅದರಿಂದ ವ್ಯಕ್ತಿಗೆ ಶ್ರೇಯಸ್ಸು, ಸಮಾಜಕ್ಕೆ ಹಿತ. ಕೆಟ್ಟ ಕುತೂಹಲ ಉಭಯಕ್ಕೂ ಅಪಾಯಕಾರಿ. ಅಪಾಯಕಾರಿಯಲ್ಲದ್ದು ಇದೆ ಯಾದರೂ, ಪ್ರಯೋಜನ ದೃಷ್ಟಿಯಿರುವುದು ಒಳ್ಳೆಯದು. ಯಾವ ಕುತೂಹಲ ತನ್ನ ವ್ಯಕ್ತಿತ್ವವನ್ನು ಅರಳಿಸಲು ಪ್ರಚೋದನೆ ನೀಡುವುದೋ, ತಾನು ಋಣಿಯಾಗಿರಬೇಕಾದ ಸಮಾಜದ ಒಳಿತಿಗೆ ಸಾಧಕವಾದ ನಿರ್ಮಿತಿಗಳನ್ನು ಸಾಧ್ಯಮಾಡುವುದೋ ಅದರ ಬೆನ್ನು ಹತ್ತಿಹೋಗುವುದು ಶ್ರೇಯಸ್ಕರ

ಹಚ್ಚ ಹಸುರಿನ ಗಿಡದಲ್ಲಿ ಬೆಳ್ಳಗೆ ಹೂ ಬಿಡುವುದು ಹೇಗೆ ಸಾಧ್ಯವಾಯಿತು. ಎನ್ನುವ ಕುತೂಹಲ ಕವಿಯೊಬ್ಬನಿಗೆ ಕೆರಳಿದಾಗ, ಅದು ಒಂದು ದೈವೀವಿಚಿತ್ರವೆಂದು ಆತ ಉತ್ತರ ಕಂಡುಕೊಳ್ಳಬಹುದು. ಸಸ್ಯವಿಜ್ಞಾನಿಗೆ, ವೈದ್ಯನಿಗೆ, ಮಾಲೆಗಾರನಿಗೆ ಬೇರೆ ಬೇರೆ ಕುತೂಹಲಗಳು ಕೆರಳಿ, ಬೇರೆ ಬೇರೆ ಉತ್ತರಗಳು ಸಿಕ್ಕಬಹುದು. ಹೂಗಿಡದ ಮಲ್ಲಿಗೆಯನ್ನು ಕಂಡೊಡನೆ, ಹೂ ಎಂದರೆ ಆಸೆಪಡುವವರಿಗೆ ದುಂಡುಮಲ್ಲಿಗೆ ಸೂಜಿ ಮಲ್ಲಿಗೆ ಮುಂತಾದ ಅದರ ಭೇದಗಳು ಕಣ್ಮುಗೆ ಮನಸ್ಸಿನೆದುರು ಸುಳಿದು ಹೋಗಬಹುದು. ಇನ್ನೂ ಕುತೂಹಲಿಗಳಿಗೆ ಅದೇ ಜಾತಿಯ ಜಾಜಿ, ಇರುವಂತಿಗೆ ಮೊದಲಾದ ಬಗೆಗಳ ನೆನಪು ಮುಗಮುಗಿಸಬಹುದು. ನೂರೆಂಟು ತೆರೆದ ಗುಲಾಬಿಗಳು, ಬಣ್ಣ ಬಣ್ಣದ ಗೊರಟೆ

ಗಳು, ಕರ್ಣಕುಂಡಲ, ಸಂದಿವರ್ಧನ, ಕೇದಿಗೆ, ಕಣಗಿಲೆ, ಪಾದರಿ, ಪಾರಿಜಾತ, ಜಾಲಿ, ವಿಷ್ಣುಕಾಂತಿ ಹೀಗೆ ಎಷ್ಟೋ ತೆರನ ಹೂಗಳ ಬಳ್ಳಿಗಳೂ, ಗಿಡಗಳೂ ತಿಳಿಯುವ ಕುತೂಹಲವಿದ್ದಲ್ಲಿ ದಿನನಿತ್ಯ ಅರಳುತ್ತ ನಮ್ಮನ್ನು ಆಕರ್ಷಿಸಲು ಸಾಧ್ಯ.

ಮರಗಳು ಎಂದ ಕೂಡಲೇ ಆಲ, ಜೀಲಿ, ಅರಳಿ, ತೆಂಗು, ಮಾವು, ತೇಗ, ಗಂಧ, ಹೊನ್ನೆ, ಹೊಂಗೆ ಎಂಬ ಕೆಲವು ಹೆಸರುಗಳೂ ಅವುಗಳ ನೋಟಗಳೂ ನಮಗೆ ಹೊಳೆಯ ಬಹುದು. ಅವುಗಳ ಚೆಲುವು, ಬದುಕು ಏನು ಎಂದು ತಿಳಿಯುವ ಕುತೂಹಲವಿದ್ದರೆ, ಅವು ತಮ್ಮ ಹೆಸರನ್ನು ಉಸಿರುತ್ತವೆ; ತಮ್ಮ ಬದುಕಿನ ವೈಚಿತ್ರ್ಯಗಳನ್ನು ನಮಗೆ ವಿವರಿಸುತ್ತವೆ. ಇಂಥ ವೈವಿಧ್ಯ ವನ್ಯ ಸಂಪತ್ತಿನಲ್ಲಿದೆ, ಪಶು ಪಕ್ಷಿಗಳ ಜೀವರಾಶಿಯಲ್ಲಿದೆ, ಖಗೋಳ ಭೂಗೋಳಗಳ ರಚನೆಯಲ್ಲಿದೆ. ಅನಾದಿ ಅನಿಧನ ಸ್ವಭಾವದಲ್ಲಿ ಹಬ್ಬಿ ಹರಡಿರುವ ಈ ಸಮಸ್ತ ಸೃಷ್ಟಿವ್ಯೂಹದಲ್ಲಿ ಏನೇನು ಹುದುಗಿದೆ, ಅವುಗಳ ರಚನೆ ಸ್ವಭಾವ ಗಳು ಯಾವ ರೀತಿಯವು ಎಂಬುದನ್ನು ತಿಳಿಯುವ ಕುತೂಹಲ ನಮ್ಮಲ್ಲಿ ಬುಗ್ಗೆಯಂತೆ ಸದಾ ಹೊಮ್ಮುತ್ತಿರಬೇಕು. ಅಂಥ ಕುತೂಹಲ ಹೆಚ್ಚಿದಂತೆಲ್ಲ ನಮ್ಮ ಬದುಕು ವಿಶಾಲ ವಾಗುತ್ತದೆ, ಶ್ರೀಮಂತವಾಗುತ್ತದೆ.

ಒಂದು ಹಕ್ಕಿ ತನ್ನ ಗೂಡನ್ನು ಹೇಗೆ ಕಟ್ಟುತ್ತದೆ, ಒಂದು ಜೇಡ ತನ್ನ ಜಾಲವನ್ನು ಹೇಗೆ ಹೆಣೆಯುತ್ತದೆ, ಹಂದರದ ಬಿದಿರಿಗೆ ಬಳ್ಳಿ ಹೇಗೆ ತನ್ನ ಕುಡಿಗಳನ್ನು ಚಾಚುತ್ತದೆ, ಮೋತೆಯೊಳಗಿನ ಹೂ ಕಾಲಕ್ರಮದಲ್ಲಿ ಹೇಗೆ ಬಲಿತು ಕಾಯಾಗುತ್ತದೆ–ಎನ್ನುವುದನ್ನು ಕುತೂಹಲದಿಂದ ನೋಡಿ ತಿಳಿಯುವುದರಿಂದ ಎಷ್ಟೋ ಪ್ರಯೋಜನವಿದೆ. ಮಾನವನಿಗೆ ಪ್ರಕೃತಿ ಕಲ್ಪಿಸಿರುವ ಇಂಥ ಪಾಠ ಪ್ರವಚನಗಳನ್ನು ಕಣ್ಣಿಟ್ಟು ಕಾಣುವ, ಕಿವಿಗೊಟ್ಟು ಕೇಳುವ, ಮನಸ್ಸು ಮಾಡಿ ಕಲಿಯುವ ಕುತೂಹಲವಿದ್ದರೆ ಮಾತ್ರ ಅದು ಸಾಧ್ಯ.

ಕುತೂಹಲವನ್ನು ಕುರಿತು ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ಹೀಗೆ ಹೇಳಿದ್ದಾನೆ:

ನೀನು ಪ್ರಶ್ನಿಸುತ್ತಿರುವುದೇಕೆ ಎಂಬುದರ ಕಾರಣಗಳನ್ನು ಕುರಿತು ಯೋಚಿಸುವುದನ್ನು ನಿಲ್ಲಿಸಬೇಡ. ಕುತೂಹಲದ ಅಸ್ತಿತ್ವಕ್ಕೆ, ತನ್ನದೇ ಕಾರಣ ಇದೆ. ನಿತ್ಯತೆಯ ಜೀವನ, ತತ್ತ್ವಗಳನ್ನು, ಸತ್ಯದ ಅದ್ಭುತ ಸ್ವರೂಪವನ್ನು ಕುರಿತು ಚಿಂತಿಸುವಾಗ ಯಾವಾತನೂ ಗಂಭೀರವಾಗಿರದೆ ಅನ್ಯಥಾ ಮಾರ್ಗವಿಲ್ಲ ಪ್ರತಿದಿನವೂ ಈ ಅದ್ಭುತದ ಅಲ್ಪವನ್ನಾದರೂ ಗ್ರಹಿಸಲು ಯತ್ನಿಸಿದರೂ ಸಾಕು. ಎಂದಿಗೂ ಕುತೂಹಲದ ಪಾವಿತ್ರ್ಯವನ್ನು ಕಳೆಮುಕೊಳ್ಳಬೇಡ.

(ಬಾ.ರಾ.ಗೋ.)

ಅಭಿಜ್ಞಾನ ಶಾಕುಂತಲ (ಚತುರ್ಥಾಂಕ) - ಭಾಷಾಂತರಗಳ ತೌಲನಿಕ ಅಧ್ಯಯನ

ಕಾವ್ಯೇಷು ನಾಟಕಂ ರಮ್ಯಂ, ನಾಟಕೇಷು ಶಾಕುಂತಲಂ ತತ್ರಾಪಿಚ ಚತುರ್ಥಾಂಕಂ ತತ್ರ ಶ್ಲೋಕ ಚತುಷ್ಟಯಃ ಎನ್ನುತ್ತದೆ ಸಂಸ್ಕೃತದ ಒಂದು ಉಕ್ತಿ. ಭಾರತೀಯ ಸಂಸ್ಕೃತಿಯ ಸಫಲ ಚಿತ್ರಕಾರ ಕವಿ ಕಾಳಿದಾಸನ ಅಮರಕೃತಿ ಅಭಿಜ್ಞಾನ ಶಾಕುಂತಲ. ಇದನ್ನು ಕನ್ನಡಿಸ ಹೊರಟವರು ಹಲವರು. ಇದರಲ್ಲಿ ಹಲವು ಅನುವಾದಗಳು ಎಡವಿದವು, ಮುಗ್ಗರಿಸಿದವು ಆದರೂ ಕೆಲವು ಮುನ್ನಡೆದವು. ಈ ಕೃತಿಯ ಎಷ್ಟೋ ಅನುವಾದಗಳು ನಮ್ಮ ಮುಂದಿದ್ದರೂ ಪ್ರಸ್ತುತ ಸಂದರ್ಭದಲ್ಲಿ ಮೂರು ಅನುವಾದಗಳನ್ನು ಮಾತ್ರ ತೌಲನಿಕ ದೃಷ್ಟಿಯಿಂದ ನೋಡಬಹುದು. ಪ್ರಬಂಧದ ಗಾತ್ರ ಹಾಗೂ ಕೃತಿಯ ಮಹತ್ವದ ದೃಷ್ಟಿಯಿಂದ ಕೇವಲ ನಾಲ್ಕನೇ ಅಂಕವನ್ನು ಮಾತ್ರ ಇಲ್ಲಿ ತೆಗೆದುಕೊಳ್ಳಲಾಗಿದೆ. ಈ ಕೃತಿಯಲ್ಲಿ ಬರುವ ಗದ್ಯಾನುವಾದದಲ್ಲಿ ಯಾವುದೇ ಸಮಸ್ಯೆ ಇಲ್ಲ. ಅಭಿನವ ಕಾಳಿದಾಸ ಎಂದು ಪ್ರಸಿದ್ಧಿ ಪಡೆದ ಬಸವಪ್ಪ ಶಾಸ್ತ್ರಿಗಳು ಇದನ್ನು ಅನುವಾದಿಸಿದ್ದಾರೆ. ಚುರಮುರಿ ಶೇಷಗಿರಿರಾಯರು ಇವರಿಗಿಂತ ಮುಂಚೆಯೇ ಇದನ್ನು ಅನುವಾದಿಸಿದ್ದಾರೆ ಹಾಗೂ ಚಾರಿತ್ರಿಕ ಸ್ಥಾನವನ್ನು ಪಡೆದಿದ್ದಾರೆ. ಅನಂತರ ಎಸ್. ವಿ. ಪರಮೇಶ್ವರ ಭಟ್ಟರು ಇದನ್ನು ಅನುವಾದಿಸಿವರು. ಸಫಲತೆಯ ದೃಷ್ಟಿಯಿಂದ ಪರಮೇಶ್ವರ ಭಟ್ಟರ ಅನುವಾದ ಸಮಗ್ರವಾಗಿದೆ. ಇವುದರಲ್ಲಿ ಮೂಲಕ್ಕೆ ಹೆಚ್ಚು ನಿಷ್ಠವಾದ ಅನುವಾದ ವಿದು. ಬಸವಪ್ಪ ಶಾಸ್ತ್ರಿಯವರದು ಉತ್ತಮ ಅನುವಾದವೆ. ಇದರಿಂದಲೇ ಅವರಿಗೆ ಅಭಿನವ ಕಾಳಿದಾಸ ಎಂಬ ಬಿರುದು ಬಂತು. ಚುರಮುರಿಯವರದು ಚಾರಿತ್ರಿಕವಾಗಿ ಇವರಿಬ್ಬರಿಗಿಂತ ಮುಂಚಿನ ಅನುವಾದವಾದರೂ, ಅನುವಾದ ಅಷ್ಟಾಗಿ ಸಫಲವಾಗಿಲ್ಲ. ಆದರೆ ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಚುರಮುರಿ ಶೇಷಗಿರಿರಾಯರು, ಬಸವಪ್ಪ ಶಾಸ್ತ್ರಿಗಳ ಅನುವಾದಗಳಲ್ಲಿ ಅಂದಿನ ರಂಗಮಂಚದ ಪ್ರಭಾವ ಅಗಾಧವಾಗಿದೆ. ತಮ್ಮ ಪ್ರೇಕ್ಷಕರಿಗನುಗುಣವಾಗಿ ತಮ್ಮ ಶೈಲಿಯನ್ನು ರೂಪಿಸಿಕೊಳ್ಳಬೇಕಾದ ಅವಶ್ಯಕತೆ ಇತ್ತು. ಹೀಗಾಗಿ ಇವರಿಬ್ಬರು ತಮ್ಮ ಪ್ರೇಕ್ಷಕರಿಗೆ ನಿಷ್ಠರಾದರೇ

ಹೊರತು ಮೂಲಕೃತಿಗಳಿಗಲ್ಲ. ಅದು ಅಂದಿನ ಪದ್ಧತಿಯೂ ಹೌದು. ಈ ಮೂವರ ಅನುವಾದಗಳ ಚತುರ್ಥಾಂಕದ ಪದ್ಯಗಳನ್ನು ತೌಲನಿಕವಾಗಿ ನೋಡೋಣ.

ಚತುರ್ಥಾಂಕದ ಆರಂಭದಲ್ಲಿ ದೂರ್ವಾಸನ ಶಾಪ

ಮೂಲ :

ವಿಚಿಂತಯಂತೀ ಯಮನನ್ಯಾ ಮಾನಸಾ
ತಪೋಧನಂ ವೇತ್ಸಿ ನ ಮಾಮುಪ ಸ್ಥಿತಮ್
ಸ್ಮರಿಷ್ಯತಿ ತ್ವಾಂ ನ ಸ ಬೋಧಿತೋಽಪಿಸನ್
ಕಥಂ ಪ್ರಮತ್ತಃ ಪ್ರಥಮಂಕೃತಾಮಿವ

ಭಾವಾರ್ಥ :

ಅನನ್ಯ ಮನಸ್ಸಿನಿಂದ ಯಾರನ್ನು ಕುರಿತು ಚಿಂತಿಸುತ್ತ, ಬಂದಂತಹ ತಪೋಧನನಾದ ನನ್ನನ್ನು ಅರಿಯುತ್ತಿಲ್ಲವೋ ಅವನು ತಿಳಿಸಲ್ಪಟ್ಟರೂ ಕೂಡ ನಿನ್ನನ್ನು ನೆನೆಯದೇ ಹೋಗಲಿ, ಹುಚ್ಚನಾದವನು ತಾನು ಹಿಂದೆ ಮಾಡಿದ್ದನ್ನು ಸ್ಮರಿಸುವುದಿಲ್ಲವೋ ಹಾಗೆ.

ಇದನ್ನು ಬಸವಪ್ಪಶಾಸ್ತ್ರಿಗಳು ಹೀಗೆ ಅನುವಾದಿಸಿದ್ದಾರೆ.

ನೀನಾವನ ಚಿಂತಿಸುತೆ ತ
ಪೋನಿಧಿಯಾದೆನ್ನನರಿಯದಾದೆಯೊ ನಿನ್ನಂ
ಏನರಿಪಿದೊಡಂ ಸ್ಮರಿಸಂ
ತಾನಾತಂ ಮುನ್ನ ಗೈದುದುಮಂ ಮರುಳನವೋಲ್

ಸೂಕ್ಷ್ಮವಾಗಿ ನೋಡಿದರೆ ಕೊರತೆಗಳು ಕಾಣಿಸುತ್ತವೆ. "ಅನನ್ಯ ಮಾನಸಾ" ಬಿಟ್ಟು ಹೋಗಿದೆ. ಮುಖ್ಯವಾದ ಮಾತೇ ಬಿಟ್ಟ ಮೇಲೆ ಸ್ವಾರಸ್ಯವೆಲ್ಲಿದೆ ? ಪದ್ಯದ ಚೌಕಟ್ಟಿಗೆ ಅಳವಡಿಸಲು ಸೇರಿಸುವ ಬಿಡುವ ಕೆಲಸವಾಗಿದೆ. ಇದು ಅಕ್ಷಮ್ಯ. ಮೂಲದಲ್ಲಿ ಪ್ರಮತ್ತಃ ಎಂದಿದೆ. ಅದು ಮರುಳನ ವೋಲ್ ಎಂದಾಗಿದೆ. ಹುಚ್ಚನ ಅರ್ಥ ಬರುತ್ತದೆಯೋ ಹೊರತು ಸಂಸ್ಕೃತದ ಮದ್ಯಪಾನದ ಅರ್ಥ ಬಂದಿಲ್ಲ.

ಚುರಮುರಿಯವರ ಅನುವಾದ

ಅವರೇ ಇದನ್ನು ವೃತ್ತ ಎಂದಿರುವುದರಿಂದ ಅದನ್ನು ವೃತ್ತವೆಂದು ಪರಿಗಣಿಸಬೇಕಾಗಿದೆ.

ಆತಿಥ್ಯಗೊಳಲೀ ತಪೋಧನನಿದಿರ್ನಿಂತಿರ್ದು ಪೊತ್ತಾಗಿರಲ್
ನಾಥನ್ನೇ ನೆನೆಯುತ್ತಾನಾದರವೊಳೆನ್ನಂ ನೋಡ್ದುದಿಲ್ಲದು ಕೇಳ್

ಈ ತಪ್ಪಿಂಗುರೆ ಶಾಸನಂ ಮರೆವನಾತಂ ನಿನ್ನ ನೇಹಂ ಪೆರರ್
ಮಾತಂ ಸಂಬಸು ಪೇಳ್ದೊಡೆಚ್ಚರಪ ಮದ್ಯಪ್ರಾಶನಂ ಗೈಯ್ದನೊಲ್

ಮೂಲದ ಸೂಚ್ಯಾರ್ಥಗಳೆಲ್ಲ ಇಲ್ಲಿ ವಾಚ್ಯಾರ್ಥಗಳಾಗಿವೆ. 'ಆತಿಥ್ಯಗೊಳಲೀ' 'ಪೊತ್ತಾಗಿರಲ್' 'ನಾಥನ್ನೀ' ಇದಾವುದೂ ಮೂಲದಲ್ಲಿಲ್ಲ. ಕೊನೆಯ ಪಕ್ಷ 'ನಾಥನ್ನೀ' 'ನಾಥನನ್ನೀ' ಆಗಬೇಕಿತ್ತು. ಇವರ ಅನುವಾದದಲ್ಲೂ ಕೂಡ 'ಅನನ್ಯ ಮಾನಸ' ಬಿಟ್ಟು ಹೋಗಿವೆ. 'ಅನಾದರದಿಂದ', 'ಈ ತಪ್ಪಿಂಗುರೆಶಾಸನಂ', 'ನೇಹಂ ಪೆರರ್‌ಮಾತಂ' ಇದ್ಯಾವುದೂ ಮೂಲದಲ್ಲಿಲ್ಲ. ಚುರುಮುರಿಯವರೂ ತಮ್ಮದೇ ಕಾಣಿಕೆ ನೀಡಿದ್ದಾರೆ. ಮೂಲದ ನಿಷೇಧಾತ್ಮಕಭಾವ (Negative) ಇಲ್ಲಿ ಧನಾತ್ಮಕ ಆಗಿಬಿಟ್ಟದೆ. ಮರೆವಮಾತಂ ಎಂಬಲ್ಲಿ "ಪ್ರಥಮಂಕೃತಾಮಮ" ಬಿಟ್ಟುಹೋಗಿವೆ. ಮತ್ತೆ–ಮದ್ಯಪ್ರಾಶನ ಎಂದಿರುವುದು ಅರ್ಥ ಸಂಕುಚಿತವಾಗಿದೆ. ಒಟ್ಟಾರೆ ಒಳ್ಳೆ ಅನುವಾದವಲ್ಲ. ಭಾವದ ಬಿಗಿ ಇಲ್ಲ. ಅನಗತ್ಯ ವಿಶ್ಲೇಷಣೆ ಇದೆ.

ಎಸ್. ವಿ. ಪರಮೇಶ್ವರ ಭಟ್ಟರ ಅನುವಾದ

ಬಂದೀ ತಪೋನಿಧಿಯನೆನ್ನುಮಂ ನೀಂ ಮರೆತು
ಒಂದೇ ಬಗೆಯಿಂದಾರನೆಣ್ಣುವೆ ಸಮಂತು
ನಿನ್ನ ನೆನೆಯನು ಅವನು ನೆನಪಿತ್ತರೂ ನೀನು
ಉನ್ಮತ್ತನರಿಯದೊಲು ಮುನ್ನಗೈದುದನು

ಈ ಅನುವಾದದಲ್ಲಿ ಮುಖ್ಯವಾಗಿ 'ಅನನ್ಯ ಮಾನಸಾ' ಉಳಿದಿದೆ. 'ಸಮಂತು' ಶಬ್ದವನ್ನು ಛಂದಸ್ಸಿಗಾಗಿ ಸೇರಿಸಿದ್ದಾರೆ. ಮೂಲದ ಪ್ರಮತ್ತಕ್ಕೆ ಅತ್ಯುತ್ತಮವಾದ ಉನ್ಮತ್ತನೆಂದಿದ್ದಾರೆ. ವಿಸ್ತರಿಸಿಲ್ಲ, ಬಿಟ್ಟಿಲ್ಲ. ಚುರಮುರಿಯವರಂತೆ ವ್ಯಾಖ್ಯಾನ ಮಾಡಿಲ್ಲ. ಇದೇ ಅತ್ಯುತ್ತಮ ಅನುವಾದವೆನಿಸುತ್ತದೆ.

ಮುಂದಿನ ಪದ್ಯ ಕಣ್ವರಿಗೆ ಪ್ರಿಯಂವದೆ ಹೇಳುವ ಮಾತು :

ಮೂಲ : ದುಷ್ಯಂತೇನಾಹಿತಂ ತೇಜೋ ದಧಾನಾಂ ಭೂತಯೇ ಭುವಃ ।
ಅವೇಹಿ ತನಯಾಂ ಬ್ರಹ್ಮನ್ನಗ್ನಿಗರ್ಭಾಂ ಶಮೀಮಿವ ॥

ಭಾವಾರ್ಥ : ಶಮೀ ಅಗ್ನಿಯನ್ನು ಧರಿಸುವಂತೆ ದುಷ್ಯಂತನ ತೇಜಸ್ಸನ್ನು ಲೋಕ ಹಿತಕ್ಕಾಗಿ ನಿನ್ನ ಮಗಳು ಧರಿಸಿದ್ದಾಳೆಂಬುದನ್ನು ತಿಳಿ.

ಬಸವಪ್ಪಶಾಸ್ತ್ರಿಗಳ ಅನುವಾದ, ಕಂದದಲ್ಲಿ

ಶಾಂತಾತ್ಮ ನಿನ್ನಸುತೆ ದು
ಷ್ಯಂತನ ಕೈವಿಡಿದು ಧರಿಸಿಗರ್ಭವನುರ್ವೀ

ಸಂತೋಷಾರ್ಥಂ ಮೆರೆದಪ
ಳಂತಸ್ಥಿತಮಾದ ಶಮಿಯಪ್ಪೋಲರಿಯೆಸುದುಂ

‘ದುಷ್ಯಂತನ ಕೈಹಿಡಿದು’ ಮೂಲದಲ್ಲಿಲ್ಲ. ಇದು ಅನಗತ್ಯ. ಗರ್ಭಧರಿಸಿ ಎಂದಿರಬೇಕಿತ್ತು. ಬರೀ ಗರ್ಭವೆಂದು ಬಿಟ್ಟಿದ್ದಾರೆ. ಜಿಂಕೆ ಎಂದು ಮುಂದೆ ಬರುತ್ತದೆ. ಇದಕ್ಕೆ ಸರಿಯಾಗಿ ತೇಜಸ್ಸು ಬರಬೇಕು. ಹಿತ–ಸಂತೋಷ ಬೇರೆ, ಬೇರೆ. ಹೀಗೆಯೇ ಎರಡು, ಮೂರು ಅಂಶಗಳಲ್ಲಿ ಅತೃಪ್ತಿ ಎದ್ದು ಕಾಣುತ್ತದೆ.

ಚುರಮುರಿ ಅವರ ಅನುವಾದ

ಶಮಿಯೊಳಿದ ಪವಿತ್ರಾಗ್ನಿಗೆ
ಸಮ ದುಷ್ಯಂತನ ತೇಜಮುಹುದಹನಾತಾಳ್ದಳ್
ಭ್ರಮೆಗೊಳಲಾಗದು ನಿನ್ನ
ಮಮತೆಯ ಮಗಳೊಳಿದು ಜಗಕೆ ಕಲ್ಯಾಣಾರ್ಥಂ

ಅನುವಾದ ತೀರಾ ಕೆಟ್ಟಿಲ್ಲ ಮೂಲಕ್ಕೆ ಹತ್ತಿರವಾಗಿದೆ. ವಾಕ್ಯರಚನೆ ಬೇರೆ ಬೇರೆ ಆಗಿದೆ. ‘ಭ್ರಮೆಗೊಳಲಾಗದು’ ತೀರಾ ಅಸಗತ್ಯ. ಒಬ್ಬ ಬ್ರಹ್ಮರ್ಷಿಗೆ ಒಬ್ಬ ಹೆಣ್ಣುಮಗಳು ಹೇಳಲು ಸಾಧ್ಯವೆ ? ‘ಜಗಕೆ ಕಲ್ಯಾಣಾರ್ಥ ಬಹಳ’ ಚೆನ್ನಾಗಿದೆ.

ಪರಮೇಶ್ವರಭಟ್ಟರ ಅನುವಾದ

ಅಗ್ನಿಯನು ಶಮಿಯೆಂತು ದುಷ್ಯಂತಸತ್ವವನು ನಿನ್ನಸುತೆಯಂತು
ಲೋಕ ಹಿತಕಂದಾಂತಳೆಸುವುವನು ತಿಳಿವುದಯ್ ಬ್ರಹ್ಮನೇ ಸಮಂತು

ಅನುವಾದ ಚೆನ್ನಾಗಿದೆ ‘ಸಮಂತು’ ಶಬ್ದ ಸೇರಿಸಿದ್ದಾರೆ. ಇದಕ್ಕೆ ವಿಶೇಷ ಅರ್ಥವಿಲ್ಲ. ಛಂದಸ್ಸಿಗಾಗಿ ಸೇರಿಸಿದ್ದಾರೆ. ಸರಿ ಇದೆ.

ಮುಂದಿನ ಪದ್ಯ ಒಬ್ಬ ಋಷಿಕುಮಾರ ಹೇಳುವ ಮಾತು.
ಶಕುಂತಲೆ ಪತಿಗೃಹಕ್ಕೆ ಹೋಗುವಾಗ ಪ್ರಕೃತಿ ಆಕೆಗೆ ಏನೇನು ಕೊಟ್ಟಿತು?

ಮೂಲ :

ಕ್ಷೌಮಂ ಕೇನಚಿದಿಂದುಪಾಂಡುತರುಣಾ ಮಾಂಗಲ್ಯಮಾವಿಷ್ಕೃತಂ
ನಿಷ್ಠ್ಯೂತಶ್ಚರಣೋಪಭೋಗ ಸುಲಭೋ ಲಾಕ್ಷಾರಸಃ ಕೇನಚಿತ್ ।
ಅನ್ಯೇಭ್ಯೋ ವನದೇವತಾ ಕರತಲೈರಾಪರ್ವಭಾಗೋತ್ಥಿತೈ
ರ್ದತ್ತಾನ್ಯಾಭರಣಾನಿ ತತ್ಕಿಸಲಯೋದ್ಭೇದ ಪ್ರತಿದ್ವಂದ್ವಿಭಿಃ

ಭಾವಾರ್ಥ : ಒಂದು ಮರ ಪಾಂಡುವರ್ಣದ ಒಟ್ಟೆಯನ್ನು ಕೊಟ್ಟಿತು. ಚರಣಕ್ಕೆ ಯೋಗ್ಯವಾದ ಕೆಂಪುರಸ ಕೊಟ್ಟಿತು. ಬೇರೆ ವನದೇವತೆಗಳು ಚಿಗುರಿಗೆ ಪ್ರತಿಸ್ಪರ್ಧಿಗಳಾಗಿದ್ದಂತಹ ಆಭರಣಗಳನ್ನು ಕೊಟ್ಟರು.

ಬಸವಪ್ಪ ಶಾಸ್ತ್ರಿಗಳ ಅನುವಾದ

ಇತ್ತುಮನೊಂದು ಶಾಖಿ ಸುಭಕಾರಿಗೊವಿಂ ಶಶಿಪಾಂಡುವಸ್ತ್ರಮಂ
ಮತ್ತಮದೊಂದು ವೃಕ್ಷಮಿರದಿತ್ತುದು ತಾನಡಿಯೂಡೆ ಲಾಕ್ಷೆಯುಂ
ಎತ್ತಿದ ಪಲ್ಲವಪ್ರತಿಮಪಾಣಿಗಳಿಂ ವನದೇವಿಯರ್ ಮುದಂ
ಬಿತ್ತೊಡನಿತ್ತರೀತೊಡವನೆಲ್ಲಮನನ್ಯ ಕುಜಂಗಳತ್ತಣಿಂ

ಇಲ್ಲಿ ಒಂದು ಪಟ್ಟೆ ಮಾತ್ರ ಇರುವುದರಿಂದ ಅನುವಾದ ಚೆನ್ನಾಗಿದೆ. ಮಾಂಗಲ್ಯ ವಿಶೇಷಣವನ್ನು ಸುಭಕಾರಿ ಎಂದಿದ್ದಾರೆ. ಅಂತಹ ಪ್ರಮಾದವಾಗಿಲ್ಲ. 'ತಾನಡಿಯೊಡೆ' ಮೂಲದಲ್ಲಿಲ್ಲ. ಅನುವಾದ ಒಟ್ಟಿನಲ್ಲಿ ಸರಿ ಇದೆ.

ಚುರಮುರಿ ಅವರ ಅನುವಾದ ವಿಸ್ತೃತವಾಗಿದೆ. ಮೂಲವೇ ನಾಲ್ಕು ಸಾಲುಗಳಿರುವುದರಿಂದ ಇವರಿಗೆ ವಿಸ್ತರಿಸಲು ಬಲು ಆನಂದವಾಗಿರಬೇಕು.

ಕೇಳಿಕೌತುಕವಮ್ಮ ನೀ । (ಪಲ್ಲವಿ)
ಕುಸುಮಂಗಳಿಗೊಂದು । ಕುಜನನೇರಲದು
ಹಸನಿಹ ಲಾಕ್ಷಾರಸವ । ನೊಸರಿತಮ್ಮ ॥ ೧ ॥

[ಮೂಲದಲ್ಲಿಲ್ಲದ ಭಾವನೆಗಳು ಮೂಲಕ್ಕೆ ವ್ಯಾಖ್ಯಾನ ?]

ಫಲಗಳಗೊಂಚಲ । ಗಳು ಹರಿಯಲು ಮುಕ್ತಾ ।
ಫಲಸೊಸ್ತ್ರವೇ ಕರ । ತಳಿಸೊಳಾಡವಮ್ಮಾ ॥ ೨ ॥

[ಮೂಲದಲ್ಲಿಲ್ಲ, 'ಆಭರಣಾನಿ' ಎಂಬುದಕ್ಕೆ ವ್ಯಾಖ್ಯಾನ ಕಲ್ಪಿಸುತ್ತಿದ್ದಾರೆ.]

ಬಾಳೆಸು ಸುಳಿಯದೊಂದು ಬೆಳೆಯುತ ಪೊಳೆಯುವ । (ಮೂಲದಲ್ಲಿಲ್ಲ)
ಮೇಲಾದ ಬಿಳಿಯದು । ಕೊಲವಾಯಿತಮ್ಮ ॥ ೩ ॥
ಮಲ್ಲಿಗೆ ಪೂಗಳನ್ನು ಕೂಡಿಸಲೊಂದು
ಪೆಲ್ಲನೆ ಭರದಿಂ ಸೆಲ್ಲಿಯಾಯಿತಮ್ಮಾ ॥ ೪ ॥ (ಮೂಲದಲ್ಲಿಲ್ಲ)
ಪೊಸಪೊಳದೊಳುಗಿರೆ ಯೆಸಲೊನದೇವಿಯಂ
ಹಸುರ ಜರರ ಕು । ಪ್ಪಸವನಿತ್ತಾಳಮ್ಮ ॥ ೫ ॥

ಚಂದ್ರನಂತಿರುವ ಮಾಂಗಲ್ಯ ವಿಶೇಷಣಗಳಿಲ್ಲ. ಭಾಷಾಂತರಕಾರ ಏನು ಮಾಡಬಾರದೋ ಅದನ್ನೇ ಇವರು ಮಾಡುತ್ತಾರೆ. ಇರುವುದನ್ನು ಬಿಡುವುದು, ಇಲ್ಲದ್ದನ್ನು ಸೇರಿಸುವುದು, ಇವರ ಜಾಯಮಾನ. ಮೂಲ ಓದದಿರುವವರಿಗೆ ಸರಿ. ವ್ಯಾಕರಣ ವಿರೋಧ ಪ್ರಯೋಗ ತೀರಾ ಅಸಂಬದ್ಧ.

ಪರಮೇಶ್ವರಭಟ್ಟರು ಹೀಗೆ ಅನುವಾದಿಸಿದ್ದಾರೆ.

ಎಳವೆರೆಯ ಬೆಳಸಿರುವ ಮಂಗಳನುಕೂಲವನು ಮರನೊಂದು
ನಮಗಿತ್ತುದು
ಮಗುವೊಂದು ತರುನೋಡಲಡಿಯೂಡೆ ತಕ್ಕುದೆನುವಲತಿಗೆಯ
ನೊಡನಿತ್ತುದು
ಪರ್ವಪರ್ಯಂತ ಮಿರವೆತ್ತಿರುವ ಕಿಲಯಂಗಳ ನಗುವ ಕರಗಳಿಂದೆ
ವನದೇವಿಯರ್ಕಳೆಮಗಿತ್ತರೀ ತೊಡವುಗಳನುಳಿದ ತರುಮರಗಳಿಂದೆ

ಭಟ್ಟರ ಅನುವಾದದಲ್ಲಿ ಒಂದು ಅಂಶ ಸ್ಪಷ್ಟ. ಅವರು ಸ್ವತಂತ್ರವಾಗಿ ಮಾಡಿದಾಗ ಅನುವಾದ ಬಹಳ ಚೆನ್ನಾಗಿರುತ್ತದೆ. ಬಸವಪ್ಪಶಾಸ್ತ್ರಿಗಳನ್ನು ಅನುಸರಿಸಿದಾಗ ಅವರೂ ಎಡವುತ್ತಾರೆ. ಈ ಪದ್ಯದಲ್ಲಿ ಅವರನ್ನು ಅನುಸರಿಸಿರುವುದು ಸ್ಪಷ್ಟ. ಬಸವಪ್ಪಶಾಸ್ತ್ರಿಯವರಲ್ಲಿಲ್ಲದ 'ಪರ್ವ' ಶಬ್ದ ಇವರು ಬಳಸಿಕೊಂಡಿದ್ದಾರೆ. ಇವರ ಅನುವಾದ ಚೆನ್ನಾಗಿದೆ. ಏನೂ ಬಿಟ್ಟಿಲ್ಲ. 'ನಮಗೆ' ಸೇರಿಸಿದ್ದಾರೆ, ತಪ್ಪೇನಲ್ಲ.

ಮುಂದಿನ ಪದ್ಯ ಕಣ್ವರು ಹೇಳುವ ಮಾತು

ಯಾಸ್ಯತ್ಯದ್ಯ ಶಕುಂತಲೇತಿ ಹೃದಯಂ ಸಂಸ್ಪೃಷ್ಟಮುತ್ಕಂಠ
ಕಂಠಸ್ತಂಭಿತಬಾಷ್ಪವೃತ್ತಿ ಕಲುಷಶ್ಚಿಂತಾಜಡಂ ದರ್ಶನಂ
ವೈಕ್ಲವ್ಯಂ ಮಮ ತಾವದೀದೃಶಮಿದಂ ಸ್ನೇಹಾದರಣ್ಯೌಕಸಃ
ಪೀಡ್ಯಂತೇ ಗೃಹಿಣಃ ಕಥಂ ನು ತನಯಾವಿಶ್ಲೇಷ ದುಃಖೈರ್ನವೈಃ

ಇಂದು ಶಕುಂತಲೆ ಹೋಗುತ್ತಿರುವುದರಿಂದ ಹೃದಯ ತುಂಬಿ ಬಂದಿದೆ. ಕಣ್ಣು ತುಂಬಿ ಕಾಣಿಸುವುದಿಲ್ಲ. ನನಗೇ ಹೀಗಾಗಬೇಕಾದರೆ ಗೃಹಸ್ಥರಿಗೆ ಅದಿನ್ನೆಷ್ಟು ದುಃಖವಾಗುತ್ತದೆಯೋ.

ಬಸವಪ್ಪಶಾಸ್ತ್ರಿಗಳ ಅನುವಾದ

ಕಳವಳವಾಂತುದೆನ್ನದೆ ಶಕುಂತಳೆ ಪೋದಪಳೆಂದು ಕಂಠಮು
ಮ್ಮಳಿಸುವುದೊತ್ತುವಸ್ರುಭರದಿಂ ಜಡವಾದುದು ದೃಷ್ಟಿಚಿಂತೆಯಂ
ದಳಲಿನಿತಾಗೆ ಕಾಡಮನುಜಂಗೆನಗಂ ಕಟುನೇಹದಿಂದ ಮಿ
ಸ್ಸಳಿದ ಗೃಹಸ್ಥರಾತ್ಮ ಭಾವೆಯುಂ ಕುಳಪುತ್ರಕಟೆಂತಪ್ಪರೋ ।

ಕೆಲವು ಕಡೆ ಇವರ ಅನುವಾದ ಮೂಲಕ್ಕಿಂತಲೂ ಚೆನ್ನಾಗಿದೆ. ಉದಾ: 'ಕಾಡ ಮನುಜಂಗೆ' ಪ್ರಯೋಗ. ಆದರೆ 'ಜಡ' ಮೂಲದಂತೆಯೇ ಉಳಿದಿದೆ. ಕನ್ನಡದಲ್ಲಿ ಈ ಅರ್ಥದಲ್ಲಿ ಈ ಪದಪ್ರಯೋಗವಿಲ್ಲ. ಮಬ್ಬು ಎನ್ನಬಹುದಿತ್ತು. ಮುಖ್ಯವಾದ ಮಾತು 'ಅದ್ಯ' ಬಿಟ್ಟು ಹೋಗಿದೆ. ಕಣ್ವರು ಸಂಯಮಿಗಳು. ಅವರಿಗೇ ಶಕುಂತಲೆ ಇಂದು ಹೋಗುತ್ತಿರುವುದರಿಂದ ದುಃಖವಾಗುತ್ತಿದೆ. ಇದೊಂದು ಕೊರತೆಯೇ ಸರಿ.

ಚುರಮುರಿಯವರ ಅನುವಾದ

ಬಿಗಿನುಬ್ಬಿರ್ದುದು ಗಂಟಲಶ್ರುತೆರೆಗಳ ನೇತ್ರಂಗಳೊಳ್ ತಪ್ಪವೀ
ಮಗಳೀವೊತ್ತಿಗೆ ಪೋಪಳೆಂಬ ಕಡುಚಿಂತಾ ಕಷ್ಟದುದ್ಗಾರದಿಂ
'ಮಿಗೆ ಬಾಯಾರಿತು ನೊಂದೆ ಜೆಂದೆ ಮನದೊಳ್ ಮುಂಗಾಣೆ ನಿನ್ನ
ಪ್ರಪಂ
ಚಿಗಳೆಷ್ಟಿಂತೆ ಮರುಂಗುತಿರ್ಪರಕಟಾ ಕನ್ಯಾವಿಯೋಗಕ್ಕೆ'ಸ್ತಿ

ಮೂಲದ ಕ್ರಮ ಹಿಂದೆಮುಂದಾಗಿದೆ. ಇವರಿಗೆ ಮೊದಲೇ ಗಂಟಲು ಕಟ್ಟಿಬಿಟ್ಟಿವೆ. ಮೂಲದ ಔಚಿತ್ಯ ಇಲ್ಲಿಲ್ಲ. ಒಬ್ಬ ದೊಡ್ಡ ಕವಿಯ ಕ್ರಮುವನ್ನು ಹಿಂದೆ ಮುಂದೆ ಮಾಡುವುದು ಸರಿ ಅಲ್ಲ. ಮೂಲದ 'ಜಡ' ಇಲ್ಲಿಲ್ಲ. ಅದರಲ್ಲೇ ಸ್ವಾರಸ್ಯವಿರುವುದು. ಬಸವಪ್ಪ ಶಾಸ್ತ್ರಿಗಳು ಬಿಟ್ಟಿರುವ 'ಅದ್ಯ' ಇವರು ಉಳಿಸಿದ್ದಾರೆ. 'ಕಡು ಚಿಂತೆ' 'ಉತ್ಕಂಠ'ಕ್ಕೆ ಸಮನಾದುದಲ್ಲ. ನೊಂದೆ-ಜೆಂದೆ . . . . ಬಹಳ ವಿಸ್ತರಿಸಿದ್ದಾರೆ. 'ಪ್ರಪಂಚಿಗಳು' ಮೂಲದ 'ಗೃಹಿಣಃ'ಕ್ಕೆ ಸಮನಾದದ್ದು. ಸನ್ಯಾಸಿಗಳೂ ಪ್ರಪಂಚದಲ್ಲಿರುತ್ತಾರೆ 'ಕಾಡಲ್ಲಿ ವಾಸ ಮಾಡುವ ನನಗೆ' ಮೂಲದ ಭಾವಬಂದಿಲ್ಲ. 'ಕನ್ಯಾವಿಯೋಗ' ಸರಿ ಅಲ್ಲ. 'ಹೊಸ ದುಃಖ'ದ ಮಾತೇ ಇಲ್ಲ. ಯಶಸ್ವೀ ಭಾಷಾಂತರವಲ್ಲ.

ಎಸ್.ವಿ. ಪರಮೇಶ್ವರಭಟ್ಟರ ಅನುವಾದ

ತಾನಿಂದು ತೆರಳಿದಪಳೇ ಶಕುಂತಳೆಯೆಂದು
ಕಳವಳದೊಳಿದೆ ನೊಂದು ತುಡಿಯುತಿಹದು
ಒತ್ತಿಬಹ ಬಾಷ್ಪದೊಳು ಕೊರಳು ಗದ್ಗದಿಸುವುದು
ಚಿಂತೆಯೊಳು ನೋಟವಿದು ಮಸಳುತಿಹುದು
ಕಾಡಿನೊಳು ನೆಲೆಸಿರುವ ನನಗು ಮೀತೆರನಳಲು
ಕಟ್ಟಿ ರಕದಿಂದೆನ್ನೊಳೊಗೆಮುದೆನಲು
ಪೆತ್ತಪೆಣ್ಮಕ್ಕಳನು ಕಳುಹುವ ಗೃಹಸ್ಥರನು
ಆಗಲಿಕೆಯ ಹೊಸದುಗುಡವೆಂತುಪುದೊ

'ಅದ್ಯ' ಅರ್ಥ ಬಂದಿದೆ. ಚೆನ್ನಾಗಿದೆ. 'ಕಳವಳ' ದುಃಖದ ಅರ್ಥ ಕೊಡುವುದಿಲ್ಲ. ಜೇರೆ ಛಾಯೆ ಬಂದುಬಿಟ್ಟಿದೆ. ಪದಶಃ ಈ ರೀತಿ ನೋಡಿದರೆ ಯಾವ ಭಾಷಾಂತರವೂ ಪರಿಪೂರ್ಣವಲ್ಲ. 'ಹೊಸದುಗುಡ'ದಲ್ಲಿ 'ನವ'ದ ಅರ್ಥ ಬಂದಿದೆ. ಚುರಮುರಿಯವರ ಭಾಷೆ ಎಡಬಿಡಂಗಿ. ಭಟ್ಟರ ಭಾಷೆ ಚೆನ್ನಾಗಿದೆ, ಹಿತವಾಗಿದೆ.

ಮುಂದಿನ ಪದ್ಯ ಋಕ್‌ಛಂದಸ್ಸಿನಲ್ಲಿದೆ. ಇದು ವೈದಿಕ ಛಂದಸ್ಸು. ಕಣ್ವರು ಹೇಳುವ ಮಾತು.

ಅಮೀ ವೇದಿಂ ಪರಿತಃ ಕ್ಲಪ್ತ ಧಿಷ್ಣ್ಯಾಃ
ಸಮಿದ್ವನ್ತಃ ಪ್ರಾಂತಸಂಸ್ತೀರ್ಣದರ್ಭಾಃ

ಅಪಘ್ನಂತೋ ದುರಿತಂ ಹವ್ಯಗಂಧೈಃ
ವೈತಾನಾಸ್ತ್ವಾಂ ವಹ್ನಯಃ ಪಾವಯಂತು

ಒಂದು ಮಂತ್ರ. ಬಸವಪ್ಪಶಾಸ್ತ್ರಿ ಅನುವಾದಿಸಿ ಮೂಲವನ್ನು ಕೊಟ್ಟಿದ್ದಾರೆ. ಚುರಮುರಿಯವರು ಅನುವಾದಿಸಿದ್ದಾರೆ. ಪರಮೇಶ್ವರಭಟ್ಟರು ಅನುವಾದಿಸಿಯೇ ಇಲ್ಲ. ಏಕೆ ಹೀಗೆ?

ಋಕ್ ಛಂದಸ್ಸಾದ್ದರಿಂದ ಇದರ ಅರಿವು ಭಾಷಾಂತರದಲ್ಲಿ ಸಾಧ್ಯವಿಲ್ಲ ಎಂಬುದು ಬಸವಪ್ಪಶಾಸ್ತ್ರಿಯವರಿಗೆ ಗೊತ್ತಿದೆ. ಮೂಲದ ಮಾಂತ್ರಿಕಶಕ್ತಿ ತರಲಾಗದು. ಅಂತೆಯೇ ಪರಮೇಶ್ವರಭಟ್ಟರು ಅನುವಾದಿಸಿಲ್ಲ. ಶಾಸ್ತ್ರಿಯವರ ಕ್ರಮ ಸರಿ. ಭಟ್ಟರು ತಾತ್ಪರ್ಯವನ್ನಾದರೂ ಕೊಡಬೇಕಾಗಿತ್ತು. ಭಾಷಾಂತರಕ್ಕೆ ಎಲ್ಲಾ ವಿಷಯಗಳು ಮೀರುತ್ತವೆ ಎಂಬುದು ಸರಿ ಅಲ್ಲ. ಕಿವಿಯ ಮೇಲಾಗುವ ನಾದದ ಗುಣ, ಮಾಂತ್ರಿಕ ಶಕ್ತಿ ಇರುವುದಿಲ್ಲ. ಕನ್ನಡದಲ್ಲಿ 'ಶ್ಲೋಕ' ಒಪ್ಪುವುದಿಲ್ಲ. ಪರಿಣಾಮ ಇರದು. ಮಂದಾಕ್ರಾಂತವೂ ಕನ್ನಡಕ್ಕೆ ಒಪ್ಪುವುದಿಲ್ಲ.

ಬಸವಪ್ಪಶಾಸ್ತ್ರಿಯವರ ಅನುವಾದ

ವೇದಿಯಸುತ್ತಲ್ ನೆಲೆಗೊಂ
ಡಾದಂ ಸಮಿಧಗಳನಾಂತು ಪೊಣ್ಮುವಹವ್ಯ
ಮೋದದಿನಘ ಪರಿಹಾರಕ
ಮಾದಾ ವೈತಾನವಹ್ನಿ ಸಲಹುಗೆನಿನ್ನಂ

ಮೂಲದ ಅನುವಾದ ಸರಿ ಇದೆ. ತಾತ್ಪರ್ಯವಿದೆ. ಮೂಲದ ಮಾಂತ್ರಿಕತೆಗೆ ಇಲ್ಲಿ ಅವಕಾಶವಿಲ್ಲ. ಆದರೂ ಭಟ್ಟರ ನಿಲುವು ಸರಿ ಅಲ್ಲ.

ಚುರಮುರಿ ಅವರ ಅನುವಾದ

ಝುಳಝುಳವಾದವೇದಿಯಲಿ ವಿಸ್ತೃತವಾಗಿರೆ ಸುತ್ತಲ್ಕೈವೆ ನಿ
ರ್ಮಳತರ ದರ್ಭಾಮಧ್ಯದೊಳು ತಾಣಗೊಂಡಿಹ ಕುಂಡದಲ್ಲಿ ಪ್ರ
ಜ್ವಳಿಸುವ ಹವ್ಯಗಂಧಾದಿಯು ಪಾತಕಮಂ ಸುಡುವಗ್ನಿದೇವತಾಂ
ಕೆಲದೊಳಗಿರ್ದು ನಿತ್ಯಬಿಡದೀಕ್ಷಿಸಿ ರಕ್ಷಿಸಲಮ್ಮ ನಿನ್ನನು

ಇಲ್ಲಿ ಮೂಲದಲ್ಲಿಲ್ಲದ ಅಂಶಗಳು ಸೇರಿವೆ. ವಿಸ್ತರಿಸಿದ್ದಾರೆ. ಅಷ್ಟು ಪ್ರಮಾದವೇನಿಲ್ಲ. ಮೂಲದಭಾವನೆ ಬಂದಿದೆ.

ಮುಂದಿನ ಪದ್ಯ ಶಕುಂತಲೆಗೆ ಕಣ್ವರ ಆಶೀರ್ವಾದ

ಯಯಾತೇರಿವ ಶರ್ಮಿಷ್ಠಾ ಭರ್ತುರ್ಬಹುಮತಾಭವ
ಸುತಂ ತ್ವಮಪಿ ಸಮ್ರಾಜಂ ಸೈವಂ ಪೂರೂರ್ಯಮುಹಿ ||

ಯಯಾತಿಗೆ ಶರ್ಮಿಷ್ಠೆಯಂತೆ ನೀನೂ ಪತಿಗೆ ಹಾಗೆಯೇ ಇಷ್ಟಳಾಗು. ಅವಳು ಪುರೂರವ ಸಾಮ್ರಾಟನನ್ನು ಪಡೆದಂತೆ ನೀನು ಸಾಮ್ರಾಟನಾದ ಮಗನನ್ನು ಪಡೆ.

ಬಸವಪ್ಪಶಾಸ್ತ್ರಿಗಳು ಕಂದಪದ್ಯದಲ್ಲಿ ಅನುವಾದಿಸಿದ್ದಾರೆ :

ಜಾತೆ ನಿಜಗುಣಗಳಿಂದ ಯ
ಯಾತಿಗೆ ಶರ್ಮಿಷ್ಠೆಯಂತೆ ಪತಿಹಿತೆಯಾಗು
ತರುಣಿ ಪುರೂರವಂ ಪಡೆ
ದಾತೆರದಿಂ ಚಕ್ರವರ್ತಿ ಪುತ್ರನ ಪಡೆನೀಂ

'ಜಾತೆ' (ಮಗಳೆ)ಚೆನ್ನಾಗಿದೆ. ಆದರೆ ಮೂಲದಲ್ಲಿಲ್ಲ. 'ನಿಜಗುಣಗಳಿಂದ' ಮೂಲದಲ್ಲಿಲ್ಲ. 'ಬಹುಮತಾ'ಕ್ಕೆ 'ಪತಿಹಿತೆ' ಅಷ್ಟು ಸರಿ ಅಲ್ಲ. 'ತರುಣಿ' ಕೂಡ ಪಾದಪೂರ್ಣಕ್ಕೆ ಆರಿಸಿಕೊಂಡಿದ್ದಾರೆ: ಛಂದಸ್ಸು ಆರಿಸಿಕೊಳ್ಳುವವರ ಮೇಲೆ ಭಾಷಾಂತರ ನಿರ್ಭರವಾಗಿರುತ್ತದೆ. ಇಂತಹ ರಿಯಾಯ್ತಿ ಚುರಮುರಿಯವರಿಗಿಲ್ಲ.

ಚುರಮುರಿಯವರ ಅನುವಾದ

ಯಯಾತಿಯಂ ಶರ್ಮಿ
ಷ್ಠೆಯೊಳತ್ಯಾದರದಿ ವರ್ತಿಸಿದವೋಲ್ ಪತಿಯು
ನಿಯಮಂತೋರುತ ನೀಪೊ
ಟ್ಟೆಯೊಲಿಂ ಪುರುವಿನ ಪೊರೆವೆಡೆ ಚಕ್ರವರ್ತಿಮಗನಾ

ಮೂಲದಭಾವ ಸಂಪೂರ್ಣಬದಲಾಗಿದೆ. ಇದು ಪತಿಯ ಪರವಾಗಿದೆ. ಆಶೀರ್ವಾದ, ಹಿತವಚನ ಇಲ್ಲವೇ ಇಲ್ಲ. ಕೆಟ್ಟ ಅನುವಾದ 'ಭಾಷಾಂತರಕಾರರು ಕೊಲೆಗಾರರು' ಎಂಬುದು ಇದಕ್ಕೆ ಅನ್ವಯಿಸುತ್ತದೆ.

ಪರಮೇಶ್ವರಭಟ್ಟರ ಅನುವಾದ

ಆ ಯಯಾತಿಗದೆಂತು ಭರ್ತೃಹಿತೆ ಶರ್ಮಿಷ್ಠಳಂತು
ದುಷ್ಯಂತಗಿಂದು ಪತಿಹಿತಳೆನಿಸು ನೀನು ಸಮಂತು
ಮತ್ತೆ ಪಡೆ ಸಮ್ರಾಟ ಪುತ್ರನನು ನೀನುಮವಳಂತು

ಬಸವಪ್ಪಶಾಸ್ತ್ರಿಯವರನ್ನು ಅನುಸರಿಸಿದ್ದಾರೆ 'ಭರ್ತೃಹಿತೆ' 'ಪತಿಹಿತೆ' ಎಂಬಲ್ಲಿ 'ಪೂರು' ಬಿಟ್ಟುಹೋಗಿದೆ. ಇದೊಂದು ಲೋಪ.

ಕಣ್ವರು ಗಿಡಮರಬಳ್ಳಿಗಳಿಗೆ ಹೇಳುವ ಮಾತು ಪ್ರಕೃತಿ–ಮಾನವ ಸಂಬಂಧ ಹೃದಯಸ್ಪರ್ಶಿ.

ಮೂಲ

ಪಾತುಂ ನ ಪ್ರಥಮಂ ವ್ಯವಸ್ಯತೀಜಲಂ ಯುಷ್ಮಾಸ್ವಪೀತೇಷು ಯಾ
ನಾದತ್ತೇ ಪ್ರಿಯ ಮಂಡನಾಪಿ ಭವತಾಂ ಸ್ನೇಹೇನ ಯಾ ಪಲ್ಲವಮ್
ಆದ್ಯೇ ವಃ ಕುಸುಮ ಪ್ರಸೂತಿಸಮಯೇ ಯಸ್ಯಾ ಭವತ್ಯುತ್ಸವಃ
ಸೇಯಂ ಯಾತಿ ಶಕುಂತಲಾ ಪತಿಗೃಹಂ ಸರ್ವೈರನುಜ್ಞಾಯತಾಮ್

ಬಸವಪ್ಪಶಾಸ್ತ್ರಿ ಹೀಗೆ ಅನುವಾದಿಸಿದ್ದಾರೆ:

ಜಲವನಾದವಾಳೀಂಟಳೆರೆ ದಲ್ಲದೆ ನಿಮ್ಮಯ ಪಾತೆಗಂಬುವಂ
ತಳಿರ್ಗಳ ಕೊಯ್ಯಳಾವಳೊಲವಿಂಗೆ ಸಿಂಗರ ದಾಸೆಯುಳ್ಳೊಡಂ
ಅಳರ್ಗಳ ತಾಳೆನೀವು ಮೊದಲುತ್ಸವ ದಾಂತಪಳಾ ಶಕುಂ
ತಳೆ ಪತಿಸದ್ಮಕೈದಿದಪಳ್ ಆಕೆಗನುಜ್ಞೆಯನೀವುದೆಲ್ಲರುಂ

ಇಲ್ಲಿನ ಲ.ಳ.ರಗಳ ಪ್ರಾಚುರ್ಯ ಮೂಲದಲ್ಲಿಲ್ಲ. ಒಂದು ಕೋಮಲತೆ ಅಭಿವ್ಯಕ್ತವಾಗುತ್ತದೆ. ಭಾವ ಚೆನ್ನಾಗಿ ಮೂಡಿಬಂದಿದೆ. ಸ್ವಲ್ಪ ವ್ಯತ್ಯಾಸ ಇದ್ದೇ ಇರುತ್ತದೆ. ಆವಿಯಾಗುವ ದ್ರವನನ್ನು ಇನ್ನೊಂದು ಪಾತ್ರೆಗೆ ಹೊಯ್ದಂತೆ ತಾನೇ ಭಾಷಾಂತರ. ಶಾಸ್ತ್ರಿಗಳು 'ಪಾತೆಗಂ' ಎಂದಿದ್ದಾರೆ. ಕಣ್ವರು ಅವನ್ನು ವ್ಯಕ್ತಿಗಳು ಎಂದು ಭಾವಿಸಿದ್ದಾರೆ. ಇದು ಅನುವಾದದಲ್ಲಿಲ್ಲ. ಬರೀ ಭಾಷಾಂತರ ನೋಡಿದರೆ ಚೆನ್ನಾಗಿದೆ. 'ಪಾತುಂ' ಕ್ರಿಯೆ ಎರಡಕ್ಕೂ ಅನ್ವಯವಾಗಬೇಕಿತ್ತು. 'ಭವತಾಂಸ್ನೇಹೇನ' ಬಿಟ್ಟುಹೋಗಿದೆ. ಮೂಲದಲ್ಲಿ ನೀವು ಹೂ ಬಿಟ್ಟಾಗ ಎಂದಿಲ್ಲ. ನೀವು ಹೂಗಳನ್ನು ಹೆತ್ತಾಗ ಎಂಬಲ್ಲಿ ರೂಪಕವಿದೆ. ಅದು ಭಾಷಾಂತರದಲ್ಲಿಲ್ಲ. ಶಕುಂತಳೆಯೂ ಹೆಣ್ಣು, ಗರ್ಭಿಣಿ. ಎರಡಕ್ಕೂ ಸಮಾನತೆ ಇದೆ. ಇದು ಅನುವಾದದಲ್ಲಿಲ್ಲ.

ಚುರಮುರಿ ಅವರು ಅನುವಾದದಲ್ಲಿ ಒಂದು ಹಾಡು ಮಾಡಿದ್ದಾರೆ

ಪತಿಯಾಲಯಕಿಂದು ಪೋಪುದ ನಿಮ್ಮ ಸಖಿಯೊಳನು
ಮತವ ನೀಡಲಬೇಕಾಶ್ರಮತರು ಮರಗಳಿರಾ ॥ ಪಲ್ಲವಿ ॥
ಪ್ರತಿದಿನವೊಳು ನಿಮ್ಮನೆ ನೀರ್ಗುಡಿಸದೆ ತಾ ಪಾನಿಸಳು
ಹಿತದೊಳ ನಿಮ್ಮಯ ಸೇವೆಯೊಳನುದಿನ ತತ್ಪರಳು ॥ ೧ ॥
ಚೆಲುವಾಭರಣಗಳೊಳತಿ ಮಮತೆ ಯುಳ್ಳವಳಿರಲು
ಬಲುನೇಹದಿ ನಿಮ್ಮಯ ಚಿಗುರನೆ ಚಿವುಟದ ಮುಗಳು ॥ ೨ ॥
ಪೊಸಕುಸುಮ ಪ್ರಸವವನೆ ಕಂಡರತಿ ಸಂತೋಷವ ತಾಳ್ದು
ಎಸಳುಗಂಗಳೆ ನಿಮ್ಮನೆ ನೋಡುತ ನಿಲ್ಲುವಳು ॥ ೩ ॥

ಚುರಮುರಿ ಅವರ ಅನುವಾದದಲ್ಲಿ ಎಷ್ಟೇ ಕೊರತೆ ಇದ್ದರೂ ಈ ಪದ್ಯದ ಅನುವಾದ ಬಹಳ ಚೆನ್ನಾಗಿದೆ. ಬಸವಪ್ಪಶಾಸ್ತ್ರಿಯವರ ದೋಷ ಇವರ ಅನುವಾದದಲ್ಲಿಲ್ಲ.

ಆದರೆ ಕೊನೆಯದು ಮೊದಲೇ ಬಂದುಬಿಟ್ಟಿದೆ. ಹಾಗಾಗಬಾರದಿತ್ತು. ಕುತೂಹಲ ಕಾಯ್ದುಕೊಂಡು ಬರಬೇಕು. ಮೂಲದ ಪರಿಣಾಮಕ್ಕೆ ಧಕ್ಕೆ ಬಂದಿದೆ. ಮೂಲದಕ್ರಮ ಇಲ್ಲಿಲ್ಲ. ಉಳಿದಂತೆ ಚೆನ್ನಾಗಿದೆ. 'ನೀರ್ಗುಡಿಸುವ ಎಂಬುವಲ್ಲಿ ಬಹಳ ಚೆನ್ನಾಗಿದೆ. 'ಬಲುನೇಹದಿ' ಉಳಿಸಿಕೊಂಡಿದ್ದಾರೆ. 'ಚಿವುಟುವುದು' ಬಹಳ ಚೆನ್ನಾಗಿದೆ. 'ಕುಸುಮ ಪ್ರಸೂತಿ' ಕುಸುಮ ಪಸವವನೆ ಎಂದಿದ್ದಾರೆ. ಸರಿ ಇದೆ. ಇದರ ಕೊನೆ ಸಾಲು ಮೂಲ ದಲ್ಲಿಲ್ಲ. ಇದೇ ಇವರ ಅಧಿಕಪ್ರಸಂಗತನ ಉಳಿದ ಪದ್ಯಗಳ ಭಾಷಾಂತರಕ್ಕಿಂತ ಇದು ಚೆನ್ನಾಗಿದೆ. ಕೆಟ್ಟ ಭಾಷಾಂತರಕಾರರೂ ಕೆಲವೆಡೆ ಚೆನ್ನಾಗಿ ಅನುವಾದ ಮಾಡುತ್ತಾರೆ. ಒಳ್ಳೇ ಭಾಷಾಂತರಕಾರರು ಕೆಲವೆಡೆ ತಪ್ಪುಮಾಡುತ್ತಾರೆ. ತಾವೇ ಸ್ವತಂತ್ರವಾಗಿ ಮಾಡಿದಾಗ ಚೆನ್ನಾಗಿ ಅನುವಾದಿಸುತ್ತಾರೆ.

ಭಟ್ಟರ ಅನುವಾದ

ಮೊದಲು ನಿಮಗೆಲ್ಲರಿಗುಮೆರೆದಲ್ಲದಂಬುವನು
ಜಲಪಾನಕಿನ್ನಾವಳಿಳಸದದಿಹಳೂ
ಸಿಂಗರದೊಗರ್ತಿ ತನಗಿರ್ದುಮೆಳೆಕುಡಿಗಳನು
ಅಳ್ಕರದಿಂನ್ನಾವಳಾಯದಿಹಳು
ನೀವು ನನೆಕೊನೆ ವೋದ ಮೊದಲ ದಿವಸದೊಳೊದು
ಉತ್ಸವಂಗಳ ನಾವಳಿಸಳು
ಆ ಶಕುಂತಳೆಯಿಂದು ಪತಿಯ ಮನೆಗೈದುವಳು
ನೀವೆಲ್ಲರೊಲಿದೀವುದನುಮತಿಯನು

ಇವರು ಏನೂ ಸೇರಿಸಿಲ್ಲ 'ಅಂಬು' ಇವರು ಸೇರಿಸಿರುವುದಲ್ಲ. ಶಾಸ್ತ್ರಿಯವರ ಅನುಸರಣೆಯಿಂದ ಹೀಗಾಗಿದೆ. ಕುಡಿ–ಚಿಗುರು ಬೇರೆ, ಬೇರೆ ಅಲ್ಲವೇ. ಅಳ್ಕರಿಂ ಇವರು ಬಿಟ್ಟಿಲ್ಲ. ಆಯದಿಹಳು–ಏನಿದು ? ಬೇರೆ ಅರ್ಥ ಬಂದಿದೆ. ನೀವು ನನೆಕೊನೆವೋದ ಎಂಬಲ್ಲಿ ಬಸವಪ್ಪಶಾಸ್ತ್ರಿಯವರಂತೆಯೇ 'ಕುಸುಮ ಪ್ರಸೂತಿ ಸಮಯೆ'ಯ ಅರ್ಥ ಮೂಡಿಬಂದಿಲ್ಲ. ಈ ಪದ್ಯದ ಮಟ್ಟಿಗೆ ಹೇಳುವುದಾದರೆ ಚುರಮುರಿ ಅವರ ಅನುವಾದ ಚೆನ್ನಾಗಿದೆ. ಕಿವಿ ಮೇಲಿನ ಪ್ರಭಾವದ ದೃಷ್ಟಿಯಿಂದ ಬಸವಪ್ಪಶಾಸ್ತ್ರಿಯವರ ಅನುವಾದ ಚೆನ್ನಾಗಿದೆ.

ಮುಂದಿನ ಪದ್ಯ ಕಣ್ವರು ಹೇಳುವ ಮಾತು

ಅನುಮತಗಮನಾ ಶಕುಂತಲಾ
ತರುಭಿರಿಯಂ ವನವಾಸಬಂಧುಭಿಃ
ಪರಭೃತವಿರುತಂ ಕಲಂ ಯಥಾ
ಪ್ರತಿವಚನೀಕೃತ ಮೇಭಿರೀದೃಶಂ

ವನವಾಸ ಬಂಧುಗಳಾದಂತಹ ಈ ಮರಗಳು ಈ ಕೋಗಿಲೆಗಳ ಒಂದು ದನಿಯ ನೆಪದಿಂದ ಶಕುಂತಳೆಯ ಪಯಣಕ್ಕೆ ಅನುಮತಿಯನ್ನು ಕೊಡುವಂತಿದೆ.

ಬಸವಪ್ಪಶಾಸ್ತ್ರಿಗಳ ಅನುವಾದ

ಬಾಲೆ ಪತಿಗೃಹಕೆ ಪೋಪುದ
ಪೇಳಲ್ ವನವಾಸ ಬಂಧುವೀ ತರುವೃಂದಂ
ಕೇಳುತನುಮತಿಸಿ ಕಲಕಂ
ಠಾಲಾಪದನೆವದೆ ನುಡಿವುದಿದೊ ಪಡಿವಾತಂ

ಮೂಲದ 'ಅನುಮತಗಮನಾ'ದ ಅರ್ಥ ಬಂದಿಲ್ಲ. ಮೂರನೆಯ ಸಾಲಿನಲ್ಲಿ ಬಂದಿದೆ. ಆದರೂ ಸರಿಬರಲಿಲ್ಲವೆನಿಸುತ್ತದೆ. ಅಂತಹ ಹೇಳಿಕೊಳ್ಳುವ ತಪ್ಪಲ್ಲ. 'ಪೋಪುದ ಪೇಳಲ್'–ಮೂಲದಲ್ಲಿಲ್ಲ. ಸ್ವಲ್ಪ ವ್ಯತ್ಯಾಸವಾಗಿದೆ.

ಚುರಮುರಿಯವರು ತೀರಾ ಸ್ವತಂತ್ರವಹಿಸಿ ಬಿಟ್ಟಿದ್ದಾರೆ.

ಅರಳುಗಂಗಳೆಮ್ಮವಿನ್ನುಂ ಭರದಿಂ ಸುರಿಯಲ್ಕಿವೆ ಮಾರನಂಬುಗಳ
ಪರಿಪರಿ ಕಾಯ್ದುವಳ್ಗೆ ಮಿಗೆ ಕಾಡುವಮಿಲ್ಲರೆ ಕಷ್ಟಳೆಂದು ವ್ಯಾ
ಕ್ಷರುಗಳೆ ಎಮ್ಮರಣ್ಯದೊಳಗಪ್ಪುದು ಮಿತ್ರರು ಬಂದುನಿಂದು
ತ್ಕರುಣದ ಕೋಕಿಲಸ್ವನಃ ಪೋಗೆನುತೀಗಲೆ ಪೇಳಿದರ್ಸಖೀ

ಮೂಲದ ಛಾಯೆ ಇದ್ದಂತಿದೆ ಪೂರ್ವಾರ್ಧ ಮೂಲದಲ್ಲಿಲ್ಲ. ಇವರ ಕಲ್ಪನೆ ಅಷ್ಟೆ. ವನವಾಸಬಂಧುಭಿಃ ಬಿಟ್ಟುಹೋಗಿದೆ. ಪೋಗೆನುತ ಎಂದಿದ್ದಾರೆ. ಇಲ್ಲಿ ಅನುಮತಿ ಅಲ್ಲ. ಬೀಳ್ಕೊಡುಗೆ ಅರ್ಥ ಬರಬೇಕು.

ಪರಮೇಶ್ವರಭಟ್ಟರು ಬಸವಪ್ಪಶಾಸ್ತ್ರಿಗಳನ್ನು ಅನುಸರಿಸಿದ್ದಾರೆ.

ವನವಾಸಬಂಧು ತರುವೃಂದವು ಶಕುಂತಳೆಯ ಪಯಣಕನುಮತಿಯ
ಕೋಗಿಲೆಯ ನುಣ್ದನಿಯ ನೆವದೊಳಿಂತಾಡುತಿದೆ ತಾನು ಪಡಿನುಡಿಯ

ಈ ಅನುವಾದ ನಿಖರವಾಗಿದೆ. ಮೂಲಕ್ಕೆ ತೀರಾ ದೂರವಾಗಿಲ್ಲ.

ಹೀಗೆ ಹಲವು ಪದ್ಯಗಳ ಅನುವಾದಗಳನ್ನು ತೌಲನಿಕ ದೃಷ್ಟಿಯಿಂದ ನೋಡಿದಾಗ ಪ್ರತಿಯೊಬ್ಬರ ಅನುವಾದದಲ್ಲೂ ಹಲವು ದೋಷಗಳು ಕಂಡು ಬರುತ್ತವೆ. ಯಾರೊಬ್ಬರೂ ಎಲ್ಲ ಕಡೆಯಲ್ಲಿಯೂ ಮೂಲವನ್ನು ಸರಿಯಾಗಿ ಹಿಡಿದಿಲ್ಲ. ಚುರಮುರಿಯವರ ಅನುವಾದ ಚಾರಿತ್ರಿಕ ಸ್ಥಾನ ಪಡೆದಿದ್ದರೂ ಅನುವಾದ ತೀರಾ ಜಾಳು ಜಾಳಾಗಿದೆ. ಇವರು ಇದನ್ನು ಸಂಗೀತ ನಾಟಕ ಮಾಡ ಹೊರಟಿದ್ದಾರೆ. ಎಲ್ಲ ಪದ್ಯಗಳನ್ನು ಹಾಡುಗಳ ರೂಪಕ್ಕೆ ತಿರುಗಿಸ ಹೊರಟು ಪಲ್ಲವಿ, ಅನುಪಲ್ಲವಿ ಎಂದು ಮೂಲವನ್ನು ಅನಗತ್ಯವಾಗಿ ಹಿಗ್ಗಿಸಿದ್ದಾರೆ. ಸಾಕಷ್ಟು ಸೇರಿಸಿಬಿಟ್ಟಿದ್ದಾರೆ. ಭಾಷಾಂತರಕಾರರೂ